# ಅಧ್ಯಯನ – 15 Study XV

# “ಎಲ್ಲರ ವಿಮೋಚನಾರ್ಥವಾಗಿ ಈಡುಬಲಿ" – ಪಾಪ ವಿಮೋಚನೆಯ ಏಕೈಕ ತಳಹದಿ

## "A RANSOM FOR ALL" - The Only Basis for At-one-ment

**ಈಡುಬಲಿ ಇಲ್ಲದೆ ಪಾಪಪರಿಹಾರ ಅಸಾಧ್ಯ – ಹೊಂದಿಕೊಳ್ಳುವುದು ಆದರೆ ಒತ್ತಾಯಪೂರ್ವಕವಲ್ಲ – ಈಡುಬಲಿ ನೀಡುವವನಾಗಲು ಕೃಪಾಪಾತ್ರನಾಗಬೇಕು – ಈಡುಬಲಿ ಮತ್ತು ವಿಮೋಚನೆ ಇವುಗಳ ಮಹತ್ವ – ಮಾನವರಿಗಾಗಿ ನೀಡಲ್ಪಟ್ಟ ಈಡು ಯಾವುದು? – “ನಂಬಿಕೆಯಿಂದ ನೀತಿ ನಿರ್ಣಯ”ವು ಈ ರೀತಿಯಾಗಿ ಹೊಂದಿಕೊಳ್ಳಲಾಯಿತು – “ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು” – ಯಾರಿಂದ? ಯಾರಿಗಾಗಿ? ಯಾವ ಉದ್ದೇಶಕ್ಕಾಗಿ? – ಪ್ರೀತಿಯು ಯಾವ ರೀತಿಯಲ್ಲಿ ನ್ಯಾಯದೊಂದಿಗೆ ಸಹಕರಿಸಿತು? – “ಎಲ್ಲರಿಗಾಗಿ ಅರ್ಪಿಸಿದ ಈಡುಬಲಿಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ – ಮೊದಲನೆಯ ಆದಾಮನ ಪಿತೃತ್ವದ ಹಕ್ಕುಗಳನ್ನು ಎರಡನೆಯ ಆದಾಮನು ಕೊಂಡುಕೊಂಡನು – ಈಡುಬಲಿ ಕ್ಷಮಾಪಣೆಯಲ್ಲ – ಮಾನವನ ಮರಣವು ಈಡುಬಲಿಯಲ್ಲ – ಸರ್ವಮೋಕ್ಷವಾದಿಗಳ ತಪ್ಪಾದ ತರ್ಕ (universalists) – ನ್ಯಾಯ ತೀರ್ಪು ಈಡುಬಲಿಯ ಕಾರಣ ಹಂಗು ಎನಿಸುವುದಿಲ್ಲ – ಒಂದೇ ಹೆಸರು – ಮಧ್ಯಸ್ಥಗಾರನ ಪದ್ಧತಿಯು ಮೋಶೆಯಲ್ಲಿ ಛಾಯೆಯಲ್ಲಿ ಕಂಡು ಬಂತು – ಈಡು ಬಲಿ, ಬದಲಿ – ಬೇರೆ ಯೋಜನೆ ಸಾಧ್ಯತೆಯಿತ್ತೇ**

**“ಏಕೆಂದರೆ ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ; ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಕೊಟ್ಟನು. ಇದೇ ತಕ್ಕ ಸಮಯದಲ್ಲಿ ಹೇಳಬೇಕಾದ ಸಾಕ್ಷಿಯು” – 1 ತಿಮೋ. 2:5,6.**

ದೇವರ ಮತ್ತು ಮಾನವರ ನಡುವಣ ಪ್ರಾಯಶ್ಚಿತ್ತ ಅಥವಾ ಪಾಪನಿವೃತ್ತಿಯ ಸಂಧಾನವು ಮಾನವರ ಪಾಪಗಳಿಗಾಗಿ ಮಾಡಿದ ಸಮರ್ಪಣೆಯು ಅಂಗೀಕೃತಗೊಂಡದರ ಮೇಲೆ ಸಂಪೂರ್ಣವಾಗಿ ಆತುಕೊಂಡಿದೆ. ದೇವರ ದಂಡನೆ ಅಥವಾ ಶಾಪವು ಮಾನವ ಜಾತಿಯಿಂದ ಎತ್ತಲ್ಪಡದ ಹೊರತು, ಅದು ಮಾನವರ ಸುಧಾರಣೆಗೆ ಅಥವಾ ಅವರು ದೇವರ ಕೃಪೆಗೆ, ಆತನ ಸಹವಾಸಕ್ಕೆ ಹಾಗೂ ನಿತ್ಯಜೀವಕ್ಕೆ ಪುನಃ ಪಾತ್ರರಾಗದಂತೆ ನಿರಂತರವಾದ ಅಡಚಣೆಯಾಗಿ ಉಳಿದುಹೋಗುತ್ತದೆ. ದೇವರ ನಿಯಮದ ಪ್ರಕಾರ, ಮಾನವರಿಗೆ ದೇವರ ಒಂದೇ ಮಾತು ಏನೆಂದರೆ ‘ನೀವು ಪಾಪಿಗಳಾಗಿದ್ದೀರಿ; ಏದೇನ್ ತೋಟದಲ್ಲಿ ನಿಮ್ಮ ಸ್ವತಃ ಅವಿಧೇಯತೆಯ ಕಾರಣ ನೀವು ನಿಮ್ಮ ತೊಂದರೆಗಳನ್ನು ನಿಮ್ಮ ಮೇಲೆ ಬರಮಾಡಿಕೊಂಡಿದ್ದೀರಿ; ನಾನು ನಿಮ್ಮ ಮೇಲೆ ನ್ಯಾಯಯುತವಾಗಿ ಮರಣ ದಂಡನೆಯನ್ನು ವಿಧಿಸಿದ್ದೇನೆ ನಾನು ಈ ತೀರ್ಪನ್ನು ನೀತಿ ನ್ಯಾಯಗಳು ನನ್ನ ಸಿಂಹಾಸನದ ಅಸ್ತಿವಾರವು ಎಂಬ ನನ್ನ ಸ್ವಂತ ನ್ಯಾಯವನ್ನು (ಕೀರ್ತನೆ 89:14 ನೋಡಿರಿ) ಅತಿಕ್ರಮಿಸದೆ ತೆಗೆದು ಹಾಕಲು ಸಾಧ್ಯವಿಲ್ಲ’ ಎಂಬುದೇ. ಆದುದರಿಂದ ನಿಮ್ಮ ಮೇಲಿನ ತೀರ್ಪು ಸದಾ ಕಾಲಕ್ಕೂ ಉಳಿದುಕೊಳ್ಳುತ್ತದೆ. ಪ್ರಾಪ್ತವಾದ ಬದಲಿಯೊಂದು ನಿಮ್ಮ ಸ್ಥಾನವನ್ನು ತೆಗೆದುಕೊಳ್ಳದ ಹೊರತು ನೀವು ಅದನ್ನು ಅನುಭವಿಸಲೇ ಬೇಕಾಗುವುದು.

ಮಾನವನ ಮೇಲಿನ ಈ ಶಿಕ್ಷೆಯು ನಿರಂತರವಾದ ಯಾತನೆವಲ್ಲವೆಂಬುದನ್ನು ನಾವು ಸ್ಪಷ್ಟವಾಗಿ ಕಂಡುಕೊಂಡಿದ್ದೇವೆ. ಆದರೆ ಸೃಷ್ಟಿಕರ್ತನು ಆದಾಮನಿಗೆ ಸರಳವಾಗಿ ಮತ್ತು ವಿಶದವಾಗಿ ತಿಳಿಸಿದಂತೆ ಅದು ಮರಣವಾಗಿದೆ. ನಾವು ಇದು ಬೇರೆ ಯಾವುದೋ ಶಿಕ್ಷೆಯಾಗಿದೆ ಎಂದು ಊಹಿಸುವುದಾದರೆ ಅದು ದೇವರು ಆದಾಮ ಮತ್ತು ಹವ್ವರೊಡನೆ ಏದೇನಿನಲ್ಲಿ ಅಪ್ರಮಾಣಿಕನಾಗಿ ವರ್ತಿಸಿದನೆಂದು – ಆತನು ಅವರಿಗೆ ತಪ್ಪು ಮಾಹಿತಿ ನೀಡಿ ಅವರನ್ನು ಮೋಸಗೊಳಿಸಿದನೆಂದು ಊಹಿಸಿದಂತಾಗುತ್ತದೆ. ಮರಣದಂಡನೆಯು ಪಾಪದ ವಿರುದ್ಧವಾದ ನ್ಯಾಯಯುತ ಶಿಕ್ಷೆಯಾಗಿದೆ ಎಂಬುದನ್ನು ನಾವು ನೋಡಿದ್ದೇವೆ. – ಯಾಕೆಂದರೆ ಜೀವವೆಂಬುದು ಷರತ್ತುಬದ್ಧವಾಗಿ ದಯಪಾಲಿಸಲ್ಪಟ್ಟದ್ದಾಗಿದ್ದು ಅದನ್ನು ಸೃಷ್ಟಿಸಿದಾತನಿಗೆ ಅದನ್ನು ರದ್ದುಮಾಡಲು ಸಂಪೂರ್ಣವಾದ ಹಕ್ಕು ಇದೆ; ಆದರೆ ನಿಷಿದ್ಧವಾದ ಹಣ್ಣಲ್ಲಿ ಪಾಲುತೆಗೆದುಕೊಂಡ ಕಾರಣ ತಂದೆಯಾದ ಆದಾಮನಿಗೆ ನಿತ್ಯವಾದ ಯಾತನೆಯು ಒಂದು ನ್ಯಾಯಯುತವಾದ ಶಿಕ್ಷೆಯಾದೀತೆಂದು ಗ್ರಹಿಸಲು ಮನಸ್ಸಿಗೆ ಯಾವುದೇ ನಿರ್ದಿಷ್ಟವಾದ ಸಾಮರ್ಥ್ಯದ ಅವಶ್ಯಕತೆ ಇಲ್ಲ. ಇದನ್ನು ಊಹಿಸಬಹುದಾದ ಬುದ್ಧಿಪೂರ್ವಕ ಹಾಗೂ ಇಚ್ಛಾಪೂರ್ವಕವಾದ ಅವಿಧೇಯತೆಯೆಂಬ ಆಪಾದನೆಯೊಂದಿಗೆ ಸೇರಿಸುವಾಗಲೂ ಇದು ಸಾಧ್ಯವಿಲ್ಲ. ಇದಕ್ಕೂ ಹೆಚ್ಚಾಗಿ ನಿತ್ಯಯಾತನೆಯಂಥಾಃ ಶಿಕ್ಷೆಯನ್ನು ಆದಾಮನ

ಲೆಕ್ಕವಿಲ್ಲದಷ್ಟು ಮಿಲಿಯಾಂತರ ಸಂತಾನದವರ ಮೇಲೆ ಬರಮಾಡುವಂತೆ ಅನುಮತಿಸುವುದು ನ್ಯಾಯವೆನಿಸದು. ಆದರೆ ಮರಣದಂಡನೆಯು ತಂದೆಯಾದ ಆದಾಮನ ಮೇಲೆ ಬಂದ ಕಾಯಿಲೆ, ಬೇನೆ ಮತ್ತು ತೊಂದರೆ ಪುಂತಾದ ತನ್ನ ಎಲ್ಲಾ ದಾರುಣವಾದ ಸಹವರ್ತನದೊಂದಿಗೆ ಸ್ವಾಭಾವಿಕವಾಗಿ ಆತನ ಸಂತಾನದವರ ಮೇಲೆಯೂ (ಅಶುದ್ಧವಾದ ಚಿಲುಮೆಯು ಶುದ್ಧವಾದ ನೀರನ್ನು ಉಕ್ಕಿಸಲಾರದಂತೆ) ಇಳಿದು ಬಂತು ಎಂಬುದನ್ನು ವಿವೇಚನಾ ಪೂರ್ವಕವೂ ನ್ಯಾಯಸಮ್ಮತವೂ ಆಗಿದೆ ಎಂದು ಎಲ್ಲರೂ ಕಂಡುಕೊಳ್ಳ ಬಹುದಾಗಿದೆ – ಈ ಶಿಕ್ಷೆಯ ಮುಂದೆ ಎಲ್ಲರ ಬಾಯಿಗಳೂ ಮುಚ್ಚಿಹೋಗುತ್ತವೆ – ಎಲ್ಲರೂ ಇದರ ನ್ಯಾಯವನ್ನು, ದೇವರ ಒಳ್ಳೇತನವನ್ನು ಮತ್ತು ಕಟ್ಟುಪಾಡನ್ನು ಒಪ್ಪಿಕೊಳ್ಳಲೇಬೇಕಾಗುತ್ತದೆ.

ಪಾಪದ ವಿರುದ್ಧವಾಗಿ ಪ್ರಕಟಿಸಲಾದ ಶಿಕ್ಷೆಯನ್ನು ಖಚಿತವಾಗಿ ತಿಳಿದುಕೊಂಡ ಮೇಲೆ, ಈ ಶಿಕ್ಷೆಯ ಅಥವಾ ಶಾಪದ ಸಂಬಳವಾಗಿ, ಅಪರಾಧಿಯು ಈ ಶಿಕ್ಷೆಯಿಂದ ಅಂದರೆ ಮರಣವೆಂಬ ಸೆರೆಮನೆಯಿಂದ ಪಾರಾಗುವಂತೆ ಯಾವ ರೀತಿಯ ನ್ಯಾಯದ ಅವಶ್ಯಕತೆ ಇದೆ ಎಂಬುದನ್ನು ನಾವು ಸುಲಭವಾಗಿ ಕಂಡುಕೊಳ್ಳುತ್ತೇವೆ (ಯೆಶಾಯ 61:1 ನೋಡಿರಿ). ಒಬ್ಬನು ಪಾಪ ಮಾಡಿದ್ದರಿಂದಲೇ ಹೊರತು ಇಡೀ ಜನಾಂಗವು ಪಾಪಮಾಡಿದ್ದರಿಂದ ಈ ಶಿಕ್ಷೆಯು ಬಂದಿಲ್ಲವಾದುದರಿಂದ ಈ ಮರಣ ಶಿಕ್ಷೆಯು ನೇರವಾಗಿ ಆದಾಮನ ಮೇಲೆ ಮಾತ್ರವೇ ಮತ್ತು ಆತನ ಮೂಲಕವಾಗಿ ಪರೋಕ್ಷವಾಗಿ ವಂಶಪಾರಂಪರ್ಯವಾದ ಆತನ ಜನಾಂಗದವರ ಮೇಲೆ ಬೀಳುತ್ತದೆ. ಇದರ ಸಂಪೂರ್ಣವಾದ ಸತ್ಯತೆಗಳಿಗೆ ಅನುಸಾರವಾಗಿ ನ್ಯಾಯವು ಇದಕ್ಕೆ ತಕ್ಕುದಾದ ಕ್ರಯವನ್ನು ಹಕ್ಕಿನಿಂದ ಕೇಳಬಹುದಾಗಿದೆ – ನ್ಯಾಯವು ಆದಾಮನನ್ನು ಮತ್ತು ಆತನ ಜನಾಂಗದವರನ್ನು ಈ ಶಿಕ್ಷೆಯಿಂದ ಬಿಡಿಸುವ ಮೊದಲು ಆದಾಮನ ಜೀವಕ್ಕೆ ಬದಲಾಗಿ ಮತ್ತೊಬ್ಬನ ಜೀವವನ್ನು ಕೇಳಬಹುದಾಗಿದೆ. ಈ ದಂಡನೆಯನ್ನು ತೆರುವುದಾದರೆ, ಇದನ್ನು ಸಮಗ್ರವಾಗಿ ತೆರಬೇಕಾಗುತ್ತದೆ – ಒಂದೇ ಪಾಪವು ಎಲ್ಲರನ್ನೂ ದಂಡನೆಗೊಳಮಾಡಿದ್ದರಿಂದ ಈ ಎಲ್ಲರಿಗಾಗಿ ಒಂದೇ ಸಮರ್ಪಣೆ. ನಾವೀಗಾಗಲೇ ಕಂಡುಕೊಂಡಂತೆ ದಂಡನೆಗೊಳಗಾದ ಆದಾಮನು ಪರಿಪೂರ್ಣನಾಗಿದ್ದರೂ ಆತನು ಒಬ್ಬ ದೇವದೂತನಾಗಲೀ ಅಥವಾ ಪ್ರಧಾನ ದೇವದೂತನಾಗಲೀ, ದೇವರಾಗಲೀ ಆಗಿರಲಿಲ್ಲ. ಆತನು ಒಬ್ಬ ಸಾಮಾನ್ಯ ಮನುಷ್ಯನಾಗಿದ್ದನು. – ತನ್ನ ಸ್ವಭಾವದಲ್ಲಿ ಆತನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯವ ನಾಗಿದ್ದನು, ಅತ್ಯಂತ ಕರಾರುವಾಕ್ಕಾದ ನ್ಯಾಯವು ಆತನಿಗಿಂತ ಹೆಚ್ಚಾದವನನ್ನಾಗಲೀ, ಕಡಿಮೆಯಾದ ವನನ್ನಾಗಲೀ ಆತನ ಬದಲಿಯಾಗಿ ಅಂಗೀಕರಿಸಲಾರದು. ಇದೇ ಸ್ಥಿತಿಗೆ ಅನುಸಾರವಾಗಿ ಆತನು ಸರ್ವ ಸಂಪೂರ್ಣನೂ ಮತ್ತು ದೇವರ ಶಾಪದಿಂದ ಮುಕ್ತನಾದವನೂ ಆಗಿರಬೇಕಾಗುತ್ತದೆ. ಆದರೆ ಅಂಥಃ ವ್ಯಕ್ತಿಯನ್ನು ಮಾನವರಲ್ಲಿ ಕಂಡುಕೊಳ್ಳಲು ಸಾಧ್ಯವಿಲ್ಲ. ಯಾಕೆಂದರೆ ಎಲ್ಲರೂ ಆದಾಮನ ಸಂತಾನದವರು ಮತ್ತು ವಂಶಪಾರಂಪರ್ಯವಾಗಿ ಆತನ ಶಿಕ್ಷೆಯಲ್ಲಿ ಮತ್ತು ಅವನತಿಯಲ್ಲಿ ಪಾಲುದಾರರೂ ಆಗಿದ್ದಾರೆ. ಆದುದರಿಂದ ಆತ್ಮೀಕ ಸ್ವಭಾವವುಳ್ಳ ಯಾರಾದರೊಬ್ಬರು ಪರಲೋಕದ ಆಸ್ಥಾನದಿಂದ ಇಳಿದು ಮಾನವ ಸ್ವಭಾವನ್ನು ಧರಿಸಿಕೊಂಡು ಬಂದು ತನ್ನನ್ನು ಆದಾಮನಿಗೆ ಬದಲಾಗಿ ಮತ್ತು ಆದಾಮನ ಮೂಲಕ ತಮ್ಮ ಜೀವವನ್ನು ಕಳಕೊಂಡವರೆಲ್ಲರ ಬದಲಾಗಿ ಈಡುಬಲಿಯಾಗಿ ಅರ್ಪಿಸುವ ಅಗತ್ಯತೆ ಕಂಡು ಬಂತು.

ದೇವರಲ್ಲಿ ತಮ್ಮ ಪ್ರಥಮ ವಾಸಸ್ಥಾನವನ್ನು ಮತ್ತು ನಿಷ್ಠೆಯನ್ನಿಟ್ಟುಕೊಂಡಿದ್ದ ದೇವದೂತರುಗಳಲ್ಲಿ, ದೇವರ ಇಚ್ಛೆಯನ್ನು ನೆರವೇರಿಸಲು ಮತ್ತು ಮಾನವರ ಈಡುಬಲಿ ಬೆಲೆಯಾಗಲು ಅನೇಕರು ಸಂತೋಷದಿಂದ ಸಿದ್ಧರಿದ್ದಿರಬಹುದು ಎಂಬುದರಲ್ಲಿ ಸಂಶಯವಿಲ್ಲ; ಆದರೆ ಹಾಗೆ ಮಾಡುವುದೆಂದರೆ ಅದು ಅತ್ಯಂತ ದೊಡ್ಡ ಪ್ರಯೋಗವೂ ಮತ್ತು ದೇವರಲ್ಲಿ ತಮ್ಮ ನಿಷ್ಠೆಯನ್ನು ಪ್ರಕಟಿಸುವ ಅತ್ಯಂತ ಕಠಿಣವಾದ ಪರೀಕ್ಷೆಯೂ ಆಗುತ್ತದೆ. ಮತ್ತು ಆ ರೀತಿಯಲ್ಲಿ ತನ್ನ ಭಕ್ತಿಯನ್ನೂ, ನಿಷ್ಠೆಯನ್ನೂ ಮತ್ತು ಆತನ ನಂಬಿಕೆಯನ್ನೂ ಪ್ರಕಟಿಸುವವನು ದೇವರ ಎಲ್ಲಾ ದೇವದೂತ ಮಕ್ಕಳಲ್ಲಿ ಅತ್ಯಂತ ಉನ್ನತ ಸ್ಥಾನವನ್ನು ಅಲಂಕರಿಸುವನು. ಆತನು ಎಲ್ಲಾ ದೇವದೂತರು ಗಳಿಗಿಂತಲೂ, ದೊರೆತನಗಳು ಮತ್ತು ಅಧಿಕಾರಗಳಿ ಗಿಂತಲೂ, ಹೆಸರಿಡುವ ಎಲ್ಲಾ ಹೆಸರುಗಳಿಗಿಂತಲೂ ಅತ್ಯಂತ ಶ್ರೇಷ್ಠನಾಗಿರುತ್ತಾನೆ. ಇದಕ್ಕೂ ಹೆಚ್ಚಾಗಿ, ದೈವಿಕ ಉದ್ದೇಶದ ಒಂದ ಭಾಗ ಯಾರಾದರೂ ತನ್ನ ಸ್ವಂತ ಅಭಿಲಾಷೆಗಳನ್ನು ನೆರವೇರಿಸುವಲ್ಲಿ ಈ ಅವಕಾಶವನ್ನು ಉಪಯೋಗಿಸಿಕೊಳ್ಳುತ್ತಾನೋ ಅಂಥವನನ್ನು ಅವಮಾನಿಸಿ ಕೆಳದರ್ಜೆಗೆ ಇಳಿಸಲಾಗುವುದು. ಅದೇ ಸಮಯದಲ್ಲಿ ಇದಕ್ಕೆ ವ್ಯತಿರಿಕ್ತವಾಗಿ, ಯಾರು ತಮ್ಮನ್ನು ದೀನನಾಗಿಸಿಕೊಂಡು, ಪರಲೋಕದ ತಂದೆಯ ಇಚ್ಛೆ ಮತ್ತು ಯೋಜನೆಗೆ ವಿಧೇಯರಾಗುತ್ತಾರೋ ಅವರನ್ನು ಅನುರೂಪವಾಗಿ ಉನ್ನತಿಗೆ ತರಲಾಗುವುದು. ದೇವರು ತನ್ನ ಯೋಜನೆಯನ್ನು ಈ ವೈಶಿಷ್ಟ್ಯಗಳನ್ನು ಅವಶ್ಯವೆನಿಸುವಂತೆ ಅಳವಡಿಸುವನು. ಹೇಗೆಂದರೆ ಲೋಕದ ಮೇಲೆ ದೈವಿಕ ಅನುಕಂಪ ಮತ್ತು ಪ್ರೀತಿಯನ್ನು ವ್ಯಕ್ತಪಡಿಸಲು, ಅದಲ್ಲದೇ ತಂದೆಯ ಒಬ್ಬನೇ ಕುಮಾರನ ಪ್ರೀತಿ, ದೈನ್ಯತೆ ಮತ್ತು ವಿಧೇಯತೆಯನ್ನು ಲೋಕಕ್ಕೆ ತೋರ್ಪಡಿಸಲು ಅವಕಾಶವನ್ನು ಒದಗಿಸಿದನು. ಹಾಗೂ ತನ್ನ ಪ್ರೀತಿಪಾತ್ರನಾದ ಮಗನನ್ನು ಘನಪಡಿಸಲು ಸಂತೋಷವುಳ್ಳವನಾಗಿದ್ದನು.

ನಾವು ನೋಡಿದಂತೆ , ನಮ್ಮ ಕರ್ತನಾದ ಯೇಸು (ತನ್ನ ಮಾನವ ಪೂರ್ವ ಸ್ಥಿತಿಯಲ್ಲಿ ನಾವು ಆತನನ್ನು ಒಬ್ಬ ಪ್ರಧಾನ ದೇವದೂತನೆಂದೂ, ಅತ್ಯಂತ ಶ್ರೇಷ್ಟನಾದ ಪ್ರಧಾನದೂತನೆಂದು, ವಾಕ್ಯವೆಂದೂ, ತಂದೆ ದೇವರ ಏಕೈಕ ಪಡೆದಾತನೆಂದೂ, ಕೃಪೆ ಮತ್ತು ಸತ್ಯಭರಿತನೆಂದೂ ನಾವು ಮಾನ್ಯ ಮಾಡುತ್ತೇವೆ) ಈವರೆಗೆ ಸೃಷ್ಟಿಯ ಎಲ್ಲಾ ಕಾರ್ಯಗಳಲ್ಲಿ ದೇವರ ನಿಯೋಗಿಯಾಗಿ ಮತ್ತು ದೇವರಿಂದ ಪಡಕೊಂಡವರಲ್ಲಿ ಪ್ರಪ್ರಥಮನಾಗಿ, ಸೃಷ್ಟಿಯ ಮೊದಲೇ ಎಲ್ಲರಿಗಿಂತಲೂ ಮೊದಲು ದೇವರ ಬಳಿ ಇದ್ದವನಾಗಿ, ಮತ್ತು ಆತನನ್ನು ನಿಕಟವಾಗಿ ಬಲ್ಲವನಾಗಿ, ಆತನ ಮಹಿಮೆಯನ್ನು ನೋಡಿದವನಾಗಿ ಆತನ ಶಕ್ತಿಯ ನಾಲೆಯಾಗಿದ್ದಾನೆ. ಆತನು ಈಗಾಗಲೇ ಪ್ರಥಮನಾಗಿದ್ದು, ಪರಲೋಕ ರಾಜ್ಯದ ಪ್ರಮುಖನಾಗಿದ್ದು, ತಂದೆದೇವರ ನಂತರದವನಾಗಿರುವುದರಿಂದ ಅಪೋಸ್ತಲನು ಈ ವಿಮೋಚನಾ ಕಾರ್ಯವು, ಮಾನವರ ಬಗ್ಗೆ ದೇವರ ಚಿತ್ತವನ್ನು ನೆರವೇರಿಸುವ ಈ ಮಹಾ ಭಾಗ್ಯವು ಆತನಿಗೆ ವಿಶೇಷವಾದ ಭರವಸೆಯ ಗುರುತಾಗಿ ಮತ್ತು ಕೃಪೆಯಾಗಿ ನೀಡಲಾಗಿದೆ ಎಂದಿದ್ದಾನೆ. ಯಾಕೆಂದರೆ, ದೇವರ ನಿಯಮಗಳಿಗನುಸಾರವಾಗಿ ಈ ಗೌರವವು ಅತ್ಯಂತ ವಿಧೇಯತ್ವ, ದೀನತೆ ಮತ್ತು ಸ್ವಾರ್ಥತ್ಯಾಗಕ್ಕೆ ಮಾತ್ರವೇ ಅನ್ವಯವಾಗುತ್ತದೆ. (ಮತ್ತಾಯ 23:12, ಯಾಕೋಬ 4:10, 1 ಪೇತ್ರ 5:6 ಇವುಗಳನ್ನು ನೋಡಿರಿ). ಮಗನಲ್ಲಿನ ಭರವಸೆಯೊಂದಿಗೆ ಮತ್ತು ಆತನ ನಿಷ್ಠಾವಂತಿಕೆಯ ಫಲವಾದ ಅತ್ಯುನ್ನತ ಸ್ಥಾನವನ್ನು ಪಡಕೊಳ್ಳಬೇಕೆಂಬ ಆಕಾಂಕ್ಷೆಯಿಂದ ತಂದೆಯು ಆತನಿಗೆ ಪ್ರಥಮ ಅವಕಾಶವನ್ನು ಕೊಡುತ್ತಾನೆ. ಆತನು ಈ ಹಿಂದೆಯೆಲ್ಲಾ, ದೇವರ ಯೋಜನೆಯಲ್ಲಿ ಪೂರ್ವೋನ್ನತಿಯನ್ನು ಹೊಂದಿದವನಾಗಿದ್ದನು; ಆದುದರಿಂದ ಇವು ತಂದೆಯನ್ನು ಪ್ರಸನ್ನಗೊಳಿಸಿ ಆತನಲ್ಲಿಯೇ ಎಲ್ಲಾ ಸರ್ವೋತ್ಕೃಷ್ಟತೆ ನೆಲೆಸಲಿ ಎಂದು ಬಯಸಿದನು. – "ಸಭೆಯೆಂಬ ದೇಹಕ್ಕೆ ಆತನು ಶಿರಸ್ಸು; ಆತನು ಆದಿಸಂಭೂತನು. ಎಲ್ಲಾದರಲ್ಲಿ ಪ್ರಮುಖನಾಗುವಂತೆ ಸತ್ತವರೊಳಗಿಂದ ಮೊದಲು ಎದ್ದು ಬಂದವನು ಆತನೇ. ತಂದೆಯಾದ ದೇವರು ಆತನಲ್ಲಿ ತನ್ನ ಸರ್ವಸಂಪೂರ್ಣತೆಯು ವಾಸವಾಗಿರಬೇಕೆಂತಲೂ ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತದಿಂದ ತಾನು ಸಮಾಧಾನವನ್ನುಂಟುಮಾಡಿ ಭೂಪರಲೋಕದಲ್ಲಿರುವ ಸಮಸ್ತವನ್ನೂ ಆತನ ಮೂಲಕ ತನಗೆ ಸಂಧಾನ ಪಡಿಸಿಕೊಳ್ಳಬೇಕೆಂತಲೂ ನಿಷ್ಕರ್ಷೆಮಾಡಿದನು" – 1 ಕೊಲೊಸ್ಸೆ 1:18–20.

ಒಂದು ಆತ್ಮೀಕ ಜೀವವನ್ನು ಮಾನವರ ವಿಮೋಚನೆಗಾಗಿ ಆರಿಸಿಕೊಳ್ಳುವುದು ಮತ್ತು ಆತ್ಮೀಕ ಜೀವಿಯ ಅಸ್ಥಿತ್ವದ ಬಲಿಯು ಲೋಕದ ಜೀವದ ಅಸ್ಥಿತ್ವದ ವಿಮೋಚನೆಯ ಬೆಲೆಯಾಗುವ ಅಗತ್ಯವಿತ್ತು ಎಂಬ ಅಭಿಪ್ರಾಯವನ್ನು ಮೂಡಿಸುವುದಿಲ್ಲ. ಇದಕ್ಕೆ ತೀರಾ ವ್ಯತಿರಿಕ್ತವಾಗಿದೆ ದೈವಿಕ ನ್ಯಾಯವು ಎಂದಿಗೂ ಮಾನವರಿಗಾಗಿ ಆತ್ಮಿಕ ಜೀವದ ಬಲಿದಾನವನ್ನು ಅಂಗೀಕರಿಸದೆ ಇರುವ ಪ್ರಕಾರ ಹೋರಿ ಮತ್ತು ಆಡುಗಳ ಬಲಿಯನ್ನು ಈಡುಬಲಿಯ ಬೆಲೆಯಾಗಿ ಅಂಗೀಕರಿಸಿ ಕೊಳ್ಳುವುದಿಲ್ಲ. ಹೋರಿ ಮತ್ತು ಆಡುಗಳ ರಕ್ತವು ಕೀಳು ಸ್ವಭಾವದವುಗಳಾದುದರಿಂದ ಅವು ಪಾಪವನ್ನು ನಿವಾರಿಸಲಾರದಂತೆ, ದೇವದೂತರುಗಳ ಮತ್ತು ಪ್ರಧಾನ ದೇವದೂತರುಗಳ ರಕ್ತವು ಸಹಾ ಆದಾಮನ ಪಾಪವನ್ನು ನಿವಾರಿಸಲಾರದು ಅಥವಾ ಆತನಿಗಾಗಿ ಸೂಕ್ತವಾದ ಪ್ರಾಯಶ್ಚಿತ್ತ ಬಲಿಯಾಗಲಾರದು. ಯಾಕೆಂದರೆ, ಇವುಗಳು ಮಾನವ ಸ್ವಭಾವದಲ್ಲವಾಗಿವೆ. ಪಾಪದ ಕಾರಣ ಮಾನವನ ಜೀವವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. ಹೀಗಾಗಿ ಮಾನವನ ಜೀವಕ್ಕಾಗಿ ಮತ್ತೊಬ್ಬ ಮಾನವನ ಜೀವವನ್ನು ಮಾತ್ರವೇ ವಿಮೋಚನೆಯ ಬೆಲೆ ಅಥವಾ ಈಡುಬಲಿಯ ಬೆಲೆಯನ್ನಾಗಿ ಅಂಗೀಕರಿಸಲಾಗುವುದು. ಈ ಕಾರಣದಿಂದ, ನಮ್ಮ ಕರ್ತನು ತನ್ನ ಮಾನವ ಪೂರ್ವದ ಮಹಿಮಾ ಸ್ಥಿತಿಯನ್ನು ಬಿಟ್ಟು, ತನ್ನನ್ನು ದೀನನಾಗಿಸಿಕೊಂಡು, ಮಾನವನಾಗುವುದು ಅಗತ್ಯವಾಗಿತ್ತು. ಯಾಕೆಂದರೆ ಮಾನವನಾಗುವುದರಿಂದ ಮಾತ್ರವೇ ಆತನು ಈಡುಬಲಿಯ ಬೆಲೆಯನ್ನು ತೆರಬಹುದಾಗಿತ್ತು.

ಪರಿಶುದ್ಧ ಗ್ರಂಥಗಳು ನಮ್ಮ ಕರ್ತನು ತನ್ನ ಶ್ರೇಷ್ಟವಾದ ಆತ್ಮೀಕ ಸ್ವಭಾವವನ್ನು ಬಿಟ್ಟುಕೊಟ್ಟು, ಕೆಳಮಟ್ಟದ ಮಾನವ ಸ್ವಭಾವವನ್ನು ಧರಿಸುವುದರ ಮೂಲಕ ತನ್ನನ್ನು ತಗ್ಗಿಸಿಕೊಂಡನು ಎಂಬುದನ್ನು ಸೂಚಿಸುವಾಗ ಅವು ನಮ್ಮ ಪಾಪದ ಬಲಿಯೆಂದು ಎಲ್ಲಿಯೂ ಹೇಳುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ತಾನು ಪಾಪದ ಬಲಿಯಾಗುವಂತೆ, ನಮ್ಮ ಈಡುಬಲಿಯ ಬೆಲೆಯಾಗುವಂತೆ ಆತನು ತನ್ನನ್ನು ತಗ್ಗಿಸಿಕೊಂಡನು. ಅಪೋಸ್ತಲನು ಇದನ್ನು ನಿರ್ಧಿಷ್ಟವಾಗಿ ಸೂಚಿಸುವಂತೆ – "ಇದಲ್ಲದೆ ಮಕ್ಕಳು ರಕ್ತಮಾಂಸಧಾರಿ ಗಳಾಗಿರುವುದರಿಂದ ಆತನೂ ಅವರಂತೆಯೇ ಆದನು. ತನ್ನ ಮರಣದಿಂದಲೇ ಮರಣಾಧಿಕಾರಿಯನ್ನು ಅಂದರೆ ಸೈತಾನನ್ನು ಅಡಗಿಸಿಬಿಡುವುದಕ್ಕೂ ಅವರಂತೆ ರಕ್ತಮಾಂಸಧಾರಿಯಾದನು" ಮತ್ತು "ನಿಜವಾಗಿಯೂ, ಆತನು ದೇವದೂತರನ್ನು ಹಿಡಿದವನೆಂದು ಬರೆದಿಲ್ಲ; ಅಬ್ರಹಾಮನ ಸಂತತಿಯನ್ನು ಕೈಹಿಡಿದಿದ್ದಾನಷ್ಟೆ. ಆತನು ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರಿಗೆ ಸಮಾನಾಗಿರಬೇಕಾಗಿ ಬಂತು" (ಇಬ್ರಿಯ 2:14 ಮತ್ತು 16, 17). "ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ ಮನುಷ್ಯನ ಮೂಲಕ ಸತ್ತವರಿಗೆ ಪುನರುತ್ಥಾನ ವುಂಟಾಗುವುದು" (1 ಕೊರಿಂಥ 15:21) ಎಂದು ಆತನು ಈ ವಿಷಯವನ್ನು ಬಹು ಸ್ಪಷ್ಟವಾಗಿ ಹೇಳುತ್ತಾನೆ. ಅಪೋಸ್ತಲನಾದ ಯೋಹಾನನು ಸಹಾ ಇಂಥಃಹುದೇ

ಸಾಕ್ಷಿಯನ್ನು ನೀಡುವಂತೆ "ಆ ವಾಕ್ಯವೆಂಬಾತನು ನರವತಾರ ಎತ್ತಿದನು" (ಯೋಹಾನ 1:14) ಎಂದಿದ್ದಾನೆ. ಇದಕ್ಕೆ ನಮ್ಮ ಕರ್ತನಾದ ಯೇಸುವು ಈ ಲೋಕಕ್ಕೆ ಬಂದಮೇಲೆ ಮತ್ತು ಆತನು ಪುರುಷ ಅವಸ್ಥೆಯನ್ನು ಪಡಕೊಂಡ ಮೇಲೆ ಹೇಳಿದ "ದೇವರು ತನ್ನ ಮಗನ ಮುಖಾಂತರ ಲೋಕಕ್ಕೆ ರಕ್ಷಣೆಯಾಗಬೇಕೆಂದು ಆತನನ್ನು ಕಳುಹಿಸಿ ಕೊಟ್ಟನೇ ಹೊರತು ತೀರ್ಪುಮಾಡುವುದಕ್ಕಾಗಿ ಕಳುಹಿಸಲಿಲ್ಲ" (ಯೋಹಾನ 3:17) ಎಂಬ ಮಾತುಗಳು ತಾಳೆಯಾಗುತ್ತವೆ. ಈ ಪ್ರಪಂಚವು ಇನ್ನೂ ರಕ್ಷಿಸಲ್ಪಟ್ಟಿದೆ ಅಥವಾ ತನ್ನನ್ನೇ ಸಮರ್ಪಿಸಿಕೊಂಡು ಲೋಕವನ್ನು ವಿಮೋಚಿಸುವಂತೆ ಒಬ್ಬಾತನನ್ನು ಕಳುಹಿಸಲ್ಪಟ್ಟಿದೆ ಎಂಬುದರ ಹೊರತಾಗಿ ಪ್ರಪಂಚದ ರಕ್ಷಣೆಗೆ ಬೇರೆ ಏನಾದರೂ ಮಾಡಲ್ಪಟ್ಟಿದೆ ಎಂಬುದನ್ನೂ ಆತನು ತಿಳಿಸಿರುವುದಿಲ್ಲ. ಆತನ ನಿಯೋಗದಲ್ಲಿನ ಪ್ರಥಮ ಹೆಜ್ಜೆಯೆಂದರೆ, ನಮ್ಮ ಕರ್ತನು ಪ್ರಕಟಿಸಿರುವಂತೆ – "ಮನುಷ್ಯಕುಮಾರನು ಸಹ ಸೇವೆಮಾಡಿಸಿಕೊಳ್ಳುವುದಕ್ಕೆ ಬರಲಿಲ್ಲ, ಸೇವೆಮಾಡುವುದಕ್ಕೂ, ಅನೇಕರನ್ನು ಬಿಡಿಸಿಕೊಳ್ಳುವುದಕ್ಕಾಗಿ ತನ್ನ ಪ್ರಾಣವನ್ನು ಈಡು ಕೊಡುವುದಕ್ಕೂ ಬಂದನು" (ಮಾರ್ಕ 10;45). ಇಲ್ಲಿ ಪ್ರಪಂಚವು ಸೃಷ್ಟಿಸಲ್ಪಡುವ ಮುಂಚಿನಿಂದಲೂ ಆತನು ತಂದೆಯ ಬಳಿಯಲ್ಲಿದ್ದಾಗಿನ ತನ್ನ ಮಹಿಮೆಯನ್ನು ಬದಿಗಿಟ್ಟು, ತನ್ನ ಉನ್ನತ ಸ್ವಭಾವವನ್ನು ಮಾನವ ಸ್ವಭಾವದೊಂದಿಗೆ ಬದಲಾಯಿಸಿಕೊಳ್ಳುವುದರ ಮೂಲಕ ನಮ್ಮ ಕರ್ತನು ತನ್ನ ಜೀವವನ್ನು ಈಡುಬಲಿಯಾಗಿ ಅರ್ಪಿಸಲಿಲ್ಲ, ಆದರೆ ತನ್ನ ಮುಂದೆ ಸಮೀಪವಾಗಿದ್ದ ಕಾರ್ಯಗಳಿಗೆ ಬೇಕಾದ ಸಿದ್ಧತೆಗಳನ್ನು ಮಾಡಿ ಕೊಂಡನೆಂಬುದಕ್ಕೆ ಸಾಕಾರಾತ್ಮಕವಾದ ಪುರಾವೆಗಳು ದೊರೆಯುತ್ತವೆ. ಆತನ ಪುರುಷಾವಸ್ಥೆಯನ್ನು ಮುಟ್ಟಿದ ಕೂಡಲೇ, ಆತನಿಗೆ ಮೂವತ್ತುವರ್ಷಗಳು ತುಂಬುತ್ತಲೇ. ಧರ್ಮಶಾಸ್ತ್ರದ ನೇಮಕದ ಪ್ರಕಾರ, ಆತನು ದೇವರಿಗೆ ತನ್ನನ್ನು ಪ್ರತಿಷ್ಠಿಸಿಕೊಳ್ಳುವುದರ ಸಂಕೇತವಾಗಿ ಸ್ನಾನಿಕನಾದ ಯೋಹಾನನ ಮೂಲಕ ಯೊರ್ದಾನ್ ಹೊಳೆಯಲ್ಲಿ ಮುಳುಗಿ ಆ ಮೂಲಕ ತನ್ನನ್ನೇ ಜೀವಂತ ಕಾಣಿಕೆಯಾಗಿ ಸಮರ್ಪಿಸಿಕೊಂಡನು.

ಆಗ ಅಪೋಸ್ತಲನು ಹೇಳುವಂತೆ "ಇಗೋ, ದೇವರ ಚಿತ್ತವನ್ನು ನೆರವೇರಿಸುವುದಕ್ಕಾಗಿ ನಾನು ಬಂದಿದ್ದೇನೆ" ಗ್ರಂಥದ ಸುರುಳಿಯಲ್ಲಿ ನನ್ನನ್ನು ಕುರಿತು ಬರೆದದೆ ಎಂಬ ಪ್ರವಾದನೆಯೊಂದು ನೆರವೇರಿತು. ಆತನು ದೇವರ ಚಿತ್ತವನ್ನು ನೆರವೇರಿಸುವುದಕ್ಕಾಗಿ ಬಂದಿದ್ದಾನೆ, ಪಾಪಗಳಿಗಾಗಿ ಬಲಿ ಅರ್ಪಿಸಲು ಬಂದಿದ್ದಾನೆ. ಆದುದರಿಂದ ಈ ಹಿಂದೆ ಆತನು ಅದನ್ನು ಸಮರ್ಪಿಸಲಿಲ್ಲ. ಆತನ ಪ್ರತಿಷ್ಠೆಯ ಆ ಕಾರ್ಯದ ಮುಖಾಂತರ ಆತನು ಮರಣದ ಪರ್ಯಂತ ದೇವರ ಸೇವೆಗಾಗಿ ತನ್ನನ್ನೇ ಸಜೀವ ಕಾಣಿಕೆಯನ್ನಾಗಿ ಅರ್ಪಿಸಿಕೊಂಡನು. ಈ ನಿರ್ಧಿಷ್ಟವಾದ ಸಂಗತಿಯ ಬಗ್ಗೆ ಆತನು ಎರಡನೆಯದನ್ನು ಸ್ಥಾಪಿಸುವಂತೆ, ಪ್ರತಿಸಾಂಕೇತಿಕವಾದ, ಪಾಪಕ್ಕೆ ತಕ್ಕುದಾದ ಬಲಿಸಮರ್ಪಣೆಯೆಂದರೆ ತನ್ನನ್ನೇ (ಮತ್ತು ಆತನ ಸದಸ್ಯರು) ಜೀವಬಲಿಯಾಗಿ ಸಮರ್ಪಿಸುವ ಸಲುವಾಗಿ ಸಾಂಕೇತಿಕವಾದ ಧರ್ಮಶಾಸ್ತ್ರದ ಒಡಂಬಡಿಕೆಯ ಬಲಿಗಳನ್ನು ಬದಿಗಿಟ್ಟನು ಎಂಬ ಅಪೋಸ್ತಲನ ಮಾತುಗಳನ್ನು ನಾವು ಗುರುತಿಟ್ಟುಕೊಳ್ಳಬೇಕಾಗುತ್ತದೆ. ಈ ಮೂಲಕ ಆತನು ತನ್ನ ಮತ್ತು ದೇವರ ನಡುವಿನ ನೂತನ ಒಡಂಬಡಿಕೆಯೊಂದಕ್ಕೆ ಮುದ್ರೆಹಾಕಿದ್ದಾನೆ ಮತ್ತು ಈ ನೂತನ ಒಡಂಬಡಿಕೆಯ ಮಧ್ಯಸ್ಥಗಾರನಾಗಿದ್ದಾನೆ. "ಮಾನವನಾದ ಕ್ರಿಸ್ತನು ತನ್ನನ್ನು ಸಮರ್ಪಿಸಿಕೊಂಡನೇ ಹೊರತು ಮಾನವ ಪೂರ್ವದಲ್ಲಿ ವಾಕ್ಯನಾಗಿದ್ದವನಲ್ಲ" ಎಂಬುದಾಗಿ ನಮ್ಮ ಮೂಲಪಾಠವು ಸಹಾ ಹೇಳುತ್ತದೆ.

## ಕಾರ್ಯಕ್ರಮದ ಮೊದಲ ಹಂತ
## The First Step in the Program

ಅಪೋಸ್ತಲನು ಇಬ್ರಿಯ 2:5–9ರಲ್ಲಿ ದೇವರ ಸಮಗ್ರ ಯೋಜನೆಯನ್ನು ಪುನರ್‌ಪರಿಶೀಲಿಸಿ, ಮಾನವರ ಪುನರ್‌ವಶಕ್ಕಾಗಿರುವ ದೇವರ ವಾಗ್ದಾನಗಳನ್ನು ಗಮನಿಸಿ ಪ್ರವಾದಿಯಾದ ದಾವೀದನ ಮಾತುಗಳನ್ನು (ಕೀರ್ತನೆ 8:4–8) ಉಲ್ಲೇಖಿಸುತ್ತಾ ದೇವರ ಯೋಜನೆಯು ಅಂತಿಮವಾಗಿ ಮಾನವರನ್ನು ಸರ್ವಸಂಪೂರ್ಣರನ್ನಾಗಿ, ಭೂಲೋಕ ಮತ್ತು ಅದರಲ್ಲಿರುವ ಎಲ್ಲಾ ಸೃಷ್ಟಿಯ ಒಡೆಯನಾಗಿ ಅವುಗಳನ್ನು ಸೃಷ್ಟಿಕರ್ತನಾದ ದೇವರ ನಿಯಮಗಳಿಗೆ ಸಾಮರಸ್ಯವಾಗಿ ನಿಯಂತ್ರಿಸು ವಂತಾಗಬೇಕು ಎಂದು ತಿಳಿಸುತ್ತಾ "ನಾವು ಎಲ್ಲಾ ಸಂಗತಿಗಳೂ ಇನ್ನೂ ಆತನ (ಪ್ರವಾದನೆಯಲ್ಲಿ ಸೂಚಿಸಿರುವಂತೆ 'ಮಾನವನ') ವಶಕ್ಕೆ ಒಪ್ಪಿಸಲ್ಪಟ್ಟಿವೆ ಎಂದು ಕಾಣಲಿಲ್ಲ" ಎಂದು ಹೇಳುತ್ತಾನೆ. ನಾವು ಮಾನವನನ್ನು ಇನ್ನೂ ದೇವರ ಸ್ವರೂಪದಲ್ಲಿ ಮತ್ತು ಈ ಲೋಕದ ಒಡೆಯನನ್ನಾಗಿ ಇನ್ನೂ ಕಾಣಲಿಲ್ಲ; ಆದರೆ ನಾವು ಈ ದೆಸೆಯಲ್ಲಿ ದೇವರ ಉದ್ದೇಶವು ಆಗಲೇ ಪ್ರಾರಂಭವಾಗಿರುವುದನ್ನು ನೋಡುತ್ತೇವೆ. ನಾವು ಈ ಯೋಜನೆಯ ಮೊದಲ ಹೆಜ್ಜೆಯಾಗಿ ಅಂದರೆ, ದೇವದೂತರಿಗಿಂತ ಸ್ವಲ್ಪ ಕಡಿಮೆ ಮಾಡಲಟ್ಟ ಒಬ್ಬಾತನು, ಯೇಸುವು ಪ್ರಭಾವವನ್ನು ಮಾನವನ್ನೂ ಕಿರೀಟವಾಗಿ ಹೊಂದಿರುವುದನ್ನು ನಾವು ನೋಡುತ್ತೇವೆ (ಮಾನವ ಸ್ವಭಾವದಲ್ಲಿ ಪರಿಪೂರ್ಣನು). ಆತನು ದೇವರ ಕೃಪೆಯಿಂದ ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇ ಬೇಕಾಯಿತು (ಇಬ್ರಿಯ 2:9) ಹಾಗಾಗಿ ಮಾನವರು ಪುನರ್‌ವಶ ಹೊಂದಲು ಸಾಧ್ಯ. ನಾವು ಈ ರೀತಿಯಲ್ಲಿ

ನಮ್ಮ ಪುನರ್ವಶಕ್ಕಾಗಿ ಮಹಿಮೆಯಲ್ಲಿಯೂ, ಗೌರವದಲ್ಲಿಯೂ ಮತ್ತು ಸರ್ವಸಂಪೂರ್ಣವಾದ ಸಮರ್ಪಕತೆಯನ್ನು ಹೊಂದಿದ್ದ ಪ್ರಥಮ ಆದಾಮನಿಗೆ ಸರಿಸಮಾನವಾದವನ ಸೂಕ್ತವಾದ ಈಡುಬಲಿಯ ಕ್ರಯವನ್ನೊದಗಿಸುವ ಮಾನವ ರಕ್ಷಣಾ ಕಾರ್ಯವು ಯೆಹೋವನಿಂದ ಪ್ರಾರಂಭಗೊಂಡದ್ದನ್ನು ನೋಡುತ್ತೇವೆ. ಆತನು ಈ ಉದ್ದೇಶವನ್ನು ಪೂರೈಸುವುದಕ್ಕಾಗಿ ಮೇಲಣ ಸ್ವಭಾವದ ಮಹಿಮೆಯನ್ನು ತ್ಯಜಿಸಿ, ಈ ಹಿಂದೆ ತಾನು ದೇವದೂತರುಗಳಿಗಿಂತ ಹೆಚ್ಚಿನ ಮಹಿಮೆಯನ್ನು ಹೊಂದಿದ್ದರೂ ಈಗ ಅವರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಲ್ಪಟ್ಟನು. ಈತನು ಈ ಉದ್ದೇಶಕ್ಕಾಗಿಯೇ – ನಮ್ಮ ಜನಾಂಗದ ವಿರುದ್ಧ ಇದ್ದ ದಂಡನೆಯಾದ **ಮರಣವನ್ನು ಎಲ್ಲಾ ಮನುಷ್ಯರಿಗಾಗಿ ಅನುಭಸುವುದಕ್ಕಾಗಿಯೇ** ನೀಡಲ್ಪಟ್ಟನೆಂದು ನಾವು ನೋಡುತ್ತೇವೆ. ಇದನ್ನು ನೋಡಿ ನಮ್ಮ ಬಂಧಮುಕ್ತತೆ ಮತ್ತು ಪುನಃವಶಕ್ಕಾಗಿ ಹಾಗೂ ಪೂರ್ಣವಾದ ಪ್ರಾಯಶ್ಚಿತ್ತ ಸಂಧಾನಕ್ಕಾಗಿ, ದೇವರು ನ್ಯಾಯವಂತನಾಗಿದ್ದಾಗ್ಯೂ ಯೇಸುವನ್ನು ನಂಬುವವರ ನ್ಯಾಯ ಪ್ರತಿಪಾದಕನಾಗಿ ನಿರಪೇಕ್ಷವಾದ ನ್ಯಾಯದ ನೆಲೆಯಲ್ಲಿ ವ್ಯವಸ್ಥೆಗೊಳಿಸಿದ ನಮ್ಮ ಪರಲೋಕದ ತಂದೆಯ ಒಳ್ಳೆಯ ಉದ್ಧೇಶಕ್ಕಾಗಿ ನಾವು ಆನಂದ ಪಡಬೇಕಾಗಿದೆ. ಈ ರೀತಿಯಲ್ಲಿ ನಮ್ಮ ಕರ್ತನಾದ ಯೇಸುವು ಮಾನವರ ಪಾಪದ ಸಲುವಾಗಿ ಅರ್ಪಿಸಿದ ಬಲಿಯು ಆತ್ಮೀಕವಾದುದಲ್ಲ. ಹಾಗಾಗಿದ್ದರೆ ಅದು ಯುಕ್ತವೂ ಅಂಗೀಕರಾರ್ಹವೂ ಆದ ಬಲಿ ಆಗುತ್ತಿದ್ದಿಲ್ಲ. ಯಾಕೆಂದರೆ ಅದು ಎಲ್ಲಾ ನಿರ್ಧಿಷ್ಟತೆಗಳಲ್ಲಿ ಆದಾಮನ ಈಡುಬಲಿಯ ಅನುರೂಪವಾದ ಬೆಲೆಯಾಗುತ್ತಿದ್ದಿಲ್ಲ.

## "ಈಡುಬಲಿ" (ಬಂಧಮುಕ್ತತೆ) ಮತ್ತು "ವಿಮೋಚನೆ" (ಬಿಡಿಸಿಕೊಳ್ಳು) ಇವುಗಳ ಅರ್ಥಪೂರ್ಣತೆ

## The Significance of "Ransom" and "Redeem"

ಇದು ನಮ್ಮನ್ನು ಈಡುಬಲಿ (ಬಂಧಮುಕ್ತತೆ) ಎಂಬ ಪದದ ಪರಿಗಣನೆಗೆ ತರುತ್ತದೆ. ನೂತನ ಒಡಂಬಡಿಕೆಯಲ್ಲಿ ಇದಕ್ಕೆ ಮಿತಿಯಾದ ಮತ್ತು ಬಹಳ ಖಾತರಿಯಾದ ಮಹತ್ವವಿದೆ. ಇದು ಎರಡು ಸಾರಿ ಮಾತ್ರವೇ ಕಂಡುಬರುತ್ತದೆ. ಒಮ್ಮೆ ಕರ್ತನು ತಾನೇ ತನ್ನ ಕಾರ್ಯದ ಬಗ್ಗೆ ವಿವರಣೆ ನೀಡುವಾಗ ಮತ್ತು ಮತ್ತೊಮ್ಮೆ ಅಪೋಸ್ತಲನು ಆ ಕಾರ್ಯ ಮುಗಿದ ಮೇಲೆ ನೀಡುವ ವಿವರಣೆಯಲ್ಲಿ. ಇದಕ್ಕೆ ನಮ್ಮ ಕರ್ತನು ಉಪಯೋಗಿಸಿರುವ ಗ್ರೀಕ್ ಪದ lutron-anti. ಇದು "ಸರಿಸಮನಾದ ಬೆಲೆ ಅಥವಾ ಅನುಗುಣವಾದ ಕ್ರಯ". ಹೀಗೆ ನಮ್ಮ ಕರ್ತನು "ಮನುಷ್ಯಕುಮಾರನು ಸೇವೆ ಮಾಡಿಸಿಕೊಳ್ಳುವುದಕ್ಕೆ ಬರಲಿಲ್ಲ, ಸೇವೆ ಮಾಡುವುದಕ್ಕೂ . . . . . **ಈಡುಕೊಡುವುದಕ್ಕೂ** ಬಂದನು" (ಮಾರ್ಕ 10:45) ಎಂದಿದ್ದಾನೆ. ಅಪೋಸ್ತಲನಾದ ಪೌಲನು ಸಹಾ ಇದೇ ಪದವನ್ನು ಉಪಯೋಗಿಸುತ್ತಾನೆ, ಆದರೆ, ಅದನ್ನು ವಿವಿಧವಾದ ರೀತಿಯಲ್ಲಿ ಮಿಶ್ರವಮಾಡುತ್ತಾನೆ. anti – lutron ಅಂದರೆ ಅನುಗುಣವಾದ ಕ್ರಯ. ಆತನು ಹೇಳಿದ್ದೇನೆಂದರೆ "ಆತನು ಎಲ್ಲರ ವಿಮೋಚನಾರ್ಥವಾಗಿ (lutron-anti) ತನ್ನನ್ನು ಒಪ್ಪಿಸಿಕೊಟ್ಟನು. ಇದೇ ತಕ್ಕ ಸಮಯಗಳಲ್ಲಿ ಹೇಳಬೇಕಾದ ಸಾಕ್ಷಿಯು" (1 ತಿಮೋ. 2:6).

ಈ ವಾಕ್ಯಭಾಗಗಳ ಅರ್ಥದ ಬಗ್ಗೆ ದ್ವಂದ್ವಾರ್ಥವಾಗಲೀ ಅಥವಾ ವಿವಾದವಾಗಲೀ ಇಲ್ಲ. ದೇವರ ಮಾತುಗಳನ್ನು ಕಪಟಯುಕ್ತವಾಗಿ ಉಪಯೋಗಿಸುವುದ ಮೂಲಕ ಅದರ ನಿಜವಾದ ಅರ್ಥಕ್ಕೆ, ನಮ್ಮ ಮಧ್ಯಸ್ತಗಾರನು ನೆರವೇರಿಸಿದ ಬಲಯುಕ್ತವಾದ ಮಹಾ ಕಾರ್ಯದ ಸಾಕ್ಷಿಗೆ ದಕ್ಕೆಯಾಗಬಹುದಾಗಿದೆ. ಈ ಈಡುಬಲಿಯ – ಅನುರೂಪವಾದ ಬೆಲೆತೆರುವಿಕೆಯನ್ನು ಪರಿಗಣಿಸುವಾಗ ಅದರಲ್ಲಿನ ಹೆಚ್ಚಿನ ಬಲವು ಮತ್ತು ಸಮಗ್ರವಾದ ಪ್ರಾಯಶ್ಚಿತ್ತ ಸಂಧಾನ ಕಾರ್ಯದ ಬಗ್ಗೆ ಅದು ಬೀರಿರುವ ಹೆಚ್ಚಿನ ಬೆಳಕು ಕಂಡುಬರುತ್ತದೆ. ಇದು ಹೊಂದಿರುವ ಭಾವನೆ ಮತ್ತು ಆಲೋಚನೆಯು ಮಾತ್ರವೇ, ಏನೆಂದರೆ, ಆದಾಮನು ತನ್ನ ಅವಿಧೇಯತೆಯ ಮೂಲಕ, ತನ್ನ ಅಸ್ಥಿತ್ವವನ್ನು, ತನ್ನ ಆತ್ಮವನ್ನು ಮತ್ತು ಭೂಮಿಯ ಮೇಲೆ ಜೀವದ ಬಗ್ಗೆ ಇದ್ದ ತನ್ನ ಎಲ್ಲಾ ಹಕ್ಕನ್ನು ಕಳಕೊಂಡನು. ಆದುದರಿಂದ ನಮ್ಮ ಕರ್ತನಾದ ಯೇಸುಕ್ರಿಸ್ತನು, ಆತನ ಮರಣದ ಮೂಲಕವಾಗಿ ಅದು ಒಂದು ಅನುರೂಪವಾದ ಬೆಲೆಯಾಗುವುದರ ಮೂಲಕ ತಂದೆಯಾದ ಆದಾಮನ ಆತ್ಮಕ್ಕೆ ಪೂರ್ಣವಾದ ಮತ್ತು ನಿಶ್ಚಿತವಾದ ಕುಡಿಯೊಂದನ್ನು ತೆತ್ತು, ಪರಿಣಾಮವಾಗಿ ಆದಾಮನ ಬೀಳುವಿಕೆ ಮತ್ತು ನಷ್ಟದ ಮೂಲಕ ಆತನ ಎಲ್ಲ ಜನಾಂಗಗಳ, ಎಲ್ಲಾ ಮಾನವ ಆತ್ಮಗಳ ಪಾಲು ತೆಗೆದುಕೊಳ್ಳುತ್ತಾನೆ – ರೋಮಾ. 5:12.

ಇದೇ ಆಲೋಚನೆಯು ವಿಪುಲವಾಗಿ ಇನ್ನಿತರ ಪರಿಶುದ್ಧ ಬರಹಗಳಲ್ಲಿಯೂ ವ್ಯಕ್ತವಾಗಿದೆ. ಅವು ನಮ್ಮ ಕರ್ತನ ಕಾರ್ಯವನ್ನು ಉದ್ಧಾರದ ವಿಮೋಚಿಸುವ, ಕೊಂಡುಕೊಳ್ಳುವ ಕಾರ್ಯ ಮುಂತಾಗಿ ಹೇಳುತ್ತವೆ. ನಾವು ನಮ್ಮ ಗಮನವನ್ನು ವಿಶೇಷವಾಗಿ 'ಈಡುಬಲಿ' (ransom, anti-lutron) ಎಂಬುದರ ಬಗ್ಗೆ ಸೆಳೆದಿದ್ದೇವೆ. ಯಾಕೆಂದರೆ, ಇದು ಅದರ ಭಾವನೆಗಳನ್ನು ಅತಿ ಪರಿಶುದ್ಧವಾಗಿ ಮತ್ತು ಅತ್ಯಂತವಾಗಿ ಅನರ್ಥ ಮಾಡಿಕೊಳ್ಳದ ರೀತಿಯಲ್ಲಿ ಪ್ರಸ್ತುತಿಪಡಿಸುತ್ತದೆ.

'ವಿಮೋಚನೆ' 'ವಿಮೋಚಿಸಿದ' ಮತ್ತು 'ವಿಮೋಚಕ' (ಉದ್ಧಾರಕ) ಎಂಬ ಪದಗಳು ಬೆಲೆತೆತ್ತ ಭಾವನೆಗಳನ್ನು ಹೊಂದಿದ್ದು, ಅದಕ್ಕೆ ಕೂಡಿಕೆಯಾಗಿ ಬಿಡುಗಡೆಗೊಳಿಸುವ ಭಾವನೆಯನ್ನೂ ಹೊಂದಿದೆ. ಅಂದರೆ ಯಾರಿಗಾಗಿ ಈ ಬೆಲೆಯು ಅಥವಾ ಕ್ರಯವನ್ನು ಕಟ್ಟಲಾಗಿದೆಯೋ ಅವರುಗಳ ವಿಮೋಚನೆ. ಆದುದರಿಂದ ಈ ಪದಗಳು ಇಂಗ್ಲಿಷ್ ಮತ್ತು ಮೂಲಭಾಷೆ ಇವೆರಡರಲ್ಲಿಯೂ ಕೆಲವೊಮ್ಮೆ ತ್ಯಾಗ (ಬಲಿ) ಅಥವಾ ವಿಮೋಚನೆಯ ಬೆಲೆಯನ್ನು ತೆರುವುದು ಎಂಬ ಸಂಬಂಧದಲ್ಲಿ ಉಪಯೋಗಿಸಲಾಗುತ್ತದೆ. ಮತ್ತು ಉಳಿದ ಸಂಧರ್ಭಗಳಲ್ಲಿ ವಿಮೋಚನೆಗೊಂಡವರನ್ನು ಸ್ವತ್ರಂತ್ರರಾಗಿರಿಸುವಂತೆ ವ್ಯವಸ್ಥೆಮಾಡುವ ಅಥವಾ ಅವರ ಬಿಡುಗಡೆಯ ಸೂಚಕವಾಗಿ ಉಪಯೋಗಿಸಲಾಗುತ್ತದೆ. ಮತ್ತು ಈಡುಬಲಿ ಸಿದ್ಧಾಂತದ ಅನೇಕ ವಿರೋಧಿಗಳ ಮತ್ತು ಅವರ ಮುಖ್ಯಸ್ಥನಾದ ಸೈತಾನನ ಕುತಂತ್ರದ ಪ್ರಯತ್ನವಾಗಿ ಕೆಲವೊಮ್ಮೆ ಮರಣದ ದಂಡನೆಯ ಶಾಪದಿಂದ ಮಾನವರ ಬಿಡುಗಡೆಗಾಗಿ ತೆತ್ತ ಬೆಲೆಯಿಂದ ನಮ್ಮ ಗಮನವನ್ನು ಬೇರೆಡೆ ಹರಿಸುವುದಕ್ಕಾಗಿ 'ಬಿಡಿಸಿಕೊ' 'ವಿಮೋಚನೆ' ಎಂಬ ಪದಗಳು ಇರುವ ವಾಕ್ಯಭಾಗಗಳು ಕೇವಲ ಮಾನವರನ್ನು ಮರಣದಿಂದ ಸಂಪೂರ್ಣವಾಗಿ ಬಿಡುಗಡೆಗೊಳಿಸುವುವು ಮಾತ್ರವೇ ಆಗಿವೆ ಎಂದು ಹೇಳುತ್ತಾ ಬಿಡುಗಡೆಯ ಬಗ್ಗೆ ಗಮನವನ್ನು ಬೇರೆಡೆ ಸೆಳೆಯುತ್ತಾ ಮತ್ತು ಅವರು ದೇವರ ಮಾತುಗಳನ್ನು ಕಪಟಯುಕ್ತವಾಗಿ ಬಳಸುತ್ತಾ "ಮುಂದಿನ ಬಿಡುಗಡೆಯು ಈಗ ಮತ್ತು ಮುಂದಿನ ಆಶೀರ್ವಾದಗಳೆಲ್ಲವೂ ದೇವರ ಕೃಪೆಯಿಂದ ಮಗನ ಮೂಲಕವಾಗಿ ಮತ್ತು ಆತನು ನಮ್ಮೆಲ್ಲರ ಪರವಾಗಿ ಅರ್ಪಿಸಿದ ಆತನ ಸ್ವಂತ ಈಡುಬಲಿಯ ಮುಖಾಂತರವಾಗಿ ಮಾನವರಿಗೆ ದೊರೆಯುತ್ತದೆ ಮತ್ತು ಅದು ಕಲ್ವಾರಿಯಲ್ಲಿ "ತೀರಿತು" ಎಂಬ ಸತ್ಯವನ್ನು ಮಂಕುಗೊಳಿಸಲು ಪ್ರಯತ್ನಿಸುತ್ತಾರೆ" – ಯೋಹಾನ 19:30.

ನಮ್ಮ 'Common version English Bible' ನ ಅನುವಾದಕರು ಗ್ರೀಕ್ ಪದಗಳನ್ನು ಭಾಷಾಂತರಿಸುವಾಗ ಗಣನೀಯವಾಗಿ ಬೇರೆಯೇ ಆದ ಅರ್ಥವುಳ್ಳ 'ರಿಡೀಮ್' ಎಂಬ ಪದವನ್ನು ಉಪಯೋಗಿಸುವುದರ ಮೂಲಕ ತಮಗೆ ಅರಿವಿಲ್ಲದೆಯೇ ಈಡುಬಲಿಯ ವಿರೋಧಿಗಳಿಗೆ ಸಹಾಯ ಮಾಡಿದ್ದಾರೆ. ಇಂಗ್ಲಿಷ್ ಓದುಗರು ಈ ವಿಷಯವನ್ನು ತಮ್ಮ ಮನಸ್ಸಿನ ಮುಂದೆ ಇಟ್ಟುಕೊಳ್ಳುವಂತೆ ನಾವಿಲ್ಲಿ 'ರಿಡೀಮ್', 'ರಿಡೀಮ್ಡ್' ಮತ್ತು 'ರಿಡೆಮ್ಷನ್' ಎಂದು ಭಾಷಾಂತರಿಸಲಾದ ಎಲ್ಲಾ ಗ್ರೀಕ್ ಪದಗಳನ್ನೂ ನೀಡುವವರಾಗಿದ್ದೇವೆ. ಪ್ರತಿಯೊಂದನ್ನು ಅನುಸರಿಸುವುದರಿಂದ ಮೇಧಾವಿ ನಿಘಂಟುಕಾರರರಾದ ಪ್ರೊ॥ ಯಂಗ್‌ರವರು ತಮ್ಮ ವಿಭಜನಾತ್ಮಕ ಹೊಂದಾಣಿಕೆಗಳ ಮೂಲಕ ನೀಡಿದ ಅರ್ಥವಿವರಣೆಯು ನಮಗೆ ತಿಳಿದುಬರುತ್ತದೆ. ಅವು ಈ ರೀತಿಯಾಗಿವೆ :

'ರಿಡೀಮ್' ಎಂಬ ಪದವನ್ನು ಕೆಲವೊಮ್ಮೆ ಗ್ರೀಕ್ ಪದವಾದ 'agorazo' ಎಂಬುದರ ಭಾಷಾಂತರವಾಗಿ ಉಪಯೋಗಿಸುವುದುಂಟು. ಪ್ರೊ॥ ಯಂಗ್‌ರವರು ಈ ಪದವನ್ನು 'ಸಾರ್ವಜನಿಕ ಸ್ಥಳದಲ್ಲಿ ಪಡಕೊಳ್ಳುವುದು' (to acquire at the forum) ಎಂದು ಅರ್ಥೈಸುತ್ತಾರೆ. ಇನ್ನೂ ಹೆಚ್ಚು ಅಕ್ಷರಶಃವಾಗಿ, ಇದು ಮುಕ್ತಮಾರುಕಟ್ಟೆಯಲ್ಲಿ ಕೊಂಡುಕೊಳ್ಳುವುದನ್ನು ಸೂಚಿಸುತ್ತದೆ. Agora ಎಂಬ ಪದವು ಮೂಲವಾಗಿ ಮಾರುಕಟ್ಟೆ ಸ್ಥಳವನ್ನು ಸೂಚಿಸುತ್ತದೆ ಮತ್ತು ಪರಿಶುದ್ಧ ಗ್ರಂಥದಲ್ಲೆಲ್ಲಾ ಇದನ್ನು ಇದೇ ರೀತಿಯಾಗಿ ಉಪಯೋಗಿಸಲಾಗಿದೆ : ಮತ್ತಾಯ 20:3; ಮಾರ್ಕ 12:38; ಲೂಕ 7:32, ಅ.ಕೃ. 16:19 ಇವುಗಳಲ್ಲಿರುವುದೆಲ್ಲವೂ ಇಂಥಾಃ ಸಂಗತಿಗಳಾಗಿದ್ದು agora ಎಂಬ ಪದವನ್ನು ಇಲ್ಲಿ 'ರಿಡೀಮ್ಡ್' ಎಂಬುದಾಗಿ ನೂತನ ಒಡಂಬಡಿಕೆಯಲ್ಲಿ ಭಾಷಾಂತರಿಸಲಾಗಿದೆ :

"ನೀನು ಯಜ್ಞಾರ್ಪಿತನಾಗಿ ಸಕಲ ಕುಲ ಭಾಷೆ ಜನಾಂಗಗಳವರಿಂದ ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡಿ" – ಪ್ರಕಟನೆ 5:9.

"ಭೂಲೋಕದೊಳಗಿಂದ ಕೊಂಡುಕೊಳ್ಳಲ್ಪಟ್ಟ ಆ ಲಕ್ಷದ ನಾಲ್ವತ್ತುನಾಲ್ಕು ಸಾವಿರ ಜನರೇ ಹೊರತು ಬೇರೆ ಯಾರೂ ಆ ಹಾಡನ್ನು ಕಲಿಯಲಾರರು" – ಪ್ರಕಟನೆ 14:3.

"ಇವರು ಮನುಷ್ಯರೊಳಗಿಂದ ಸ್ವಕೀಯ ಜನರಾಗಿ ಕೊಂಡುಕೊಳ್ಳಲ್ಪಟ್ಟು ದೇವರಿಗೂ ಯಜ್ಞದ ಕುರಿಯಾದಾತನಿಗೂ ಪ್ರಥಮಫಲದಂತಾದರು" – ಪ್ರಕಟನೆ 14:4.

ಈ ಪ್ರತಿಯೊಂದು ಪ್ರಕರಣದಲ್ಲಿನ ಭಾವನೆಯು 'ಸಾರ್ವಜನಿಕವಾದ ಕೊಂಡುಕೊಳ್ಳುವಿಕೆ'ಯಾಗಿದೆ; ಮತ್ತು ನೂತನ ಒಡಂಬಡಿಕೆಯ ಎಲ್ಲಾ ಕಡೆಗಳಲ್ಲಿ agarazo ಎಂಬ ಈ ಪದದ ಉಪಯೋಗವು ಖಡಾಖಂಡಿತವಾಗಿ ವಾಣಿಜ್ಯ ಸೂಚನೆಯನ್ನು ಬೆಂಬಲಿಸುತ್ತವೆ. ಈ ಪದವು ನೂತನ ಒಡಂಬಡಿಕೆಯಲ್ಲಿ ಒಟ್ಟಾರೆ ಮೂವತ್ತೊಂದು ಬಾರಿ ಬರುತ್ತದೆ. ಮೇಲಿನ ಮೂರು ಸಂದರ್ಭಗಳಲ್ಲಿ ಇದನ್ನು 'ರಿಡೀಮ್ಡ್' ಎಂಬುದಾಗಿ ತರ್ಜುಮೆ ಗೊಳಿಸಲಾಗಿದೆ, ಹದಿಮೂರು ಸಂಧರ್ಭಗಳಲ್ಲಿ 'ಕೊಂಡುಕೊಳ್ಳಲಾಗಿದೆ' (bought) ಎಂಬ ಅರ್ಥದಲ್ಲಿಯೂ, ಹದಿನೈದು ಸಂಧರ್ಭಗಳಲ್ಲಿ "ಕೊಂಡುಕೋ" (buy) ಎಂಬರ್ಥದಲ್ಲಿಯೂ ಉಪಯೋಗಿಸಲಾಗಿದೆ. ನಾವು ಈ ಪದದ ಮಹತ್ವದ ಬಗ್ಗೆ

ವಿಶೇಷ ಗಮನವನ್ನು ಸೆಳೆಯುತ್ತೇವೆ. ಯಾಕೆಂದರೆ, ನಮ್ಮ ಜನಾಂಗವನ್ನು ಶಾಪದಿಂದ ವಿಮೋಚಿಸುವುದಕ್ಕಾಗಿ ಬೆಲೆತೆತ್ತು ಕೊಂಡುಕೊಳ್ಳಲಾಗಿದೆ ಎಂಬುದನ್ನು ಅಲ್ಲಗಳೆಯುವ ಧೋರಣೆಯು ಪ್ರಚಲಿತವಾಗಿದೆ ಮತ್ತು ಬೆಳೆಯತೊಡಗಿದೆ – ಇದು ಒಮ್ಮೆ ದೇವಜನರಿಗೆ ವಿತರಿಸಲ್ಪಟ್ಟ "ಶಾಶ್ವತವಾಗಿರುವಂತೆ ಒಪ್ಪಿಸಲ್ಪಟ್ಟ ನಂಬಿಕೆಯನ್ನು ಬುಡಮೇಲು ಮಾಡುವುದಾಗಿದೆ".

'ರಿಡೀಮ್', 'ರಿಡೀಮ್ಡ್' ಮತ್ತು 'ರಿಡೆಮ್ಷನ್' ಎಂದು ಭಾಷಾಂತರಿಸಲ್ಪಟ್ಟ ಮತ್ತೊಂದು ಪದವು ಮೇಲಿನದಕ್ಕೆ ಸಂಬಂಧಿಸಿದೆ ಮತ್ತು ಅದರಿಂದ ಮೊದಲೇ ಜೋಡಿಸಲ್ಪಟ್ಟು 'Out of - exagorazo' ವನ್ನು ಸೂಚಿಸುತ್ತದೆ. ಪ್ರೊ॥ ಯಂಗ್‌ರವರು ಈ ಪದಕ್ಕೆ 'To acquire out of Forum' ಎಂಬ ಅರ್ಥ ವಿವರಣೆಯನ್ನು ನೀಡುತ್ತಾರೆ. ಇನ್ನೂ ಹೆಚ್ಚು ವಾಸ್ತವವಾಗಿ "ಸಾರ್ವಜನಿಕವಾಗಿ ಕೊಂಡುಕೊಂಡು ಸ್ವಾಧೀನ ಪಡಿಸಿಕೊಳ್ಳುವುದು'. ನೂತನ ಒಡಂಬಡಿಕೆಯಲ್ಲಿರುವ ಇದರ ಏಕೈಕ ಉಪಯೋಗವು ಇಲ್ಲಿದೆ :

"ಕ್ರಿಸ್ತನು ನಮ್ಮ ನಿಮಿತ್ತ ಶಾಪವಾಗಿ ಧರ್ಮಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ ನಮ್ಮನ್ನು ಬಿಡಿಸಿದನು" (ಗಲಾತ್ಯ 3:13). ಅಪೋಸ್ತಲನು ಇಲ್ಲಿ ಯೆಹೂದ್ಯರಾಗಿದ್ದ ಕ್ರೈಸ್ತರು ಯೆಹೂದಿ ಧರ್ಮಶಾಸ್ತ್ರದ ಮತ್ತು ಅದರ ಒಡಂಬಡಿಕೆಯ ಅಧೀನದಲ್ಲಿದ್ದವರಾಗಿದ್ದು ಅದರ ದಂಡನೆಯಿಂದ ಕೊಂಡುಕೊಳ್ಳಲ್ಪಟ್ಟವರಾಗಿರುವುದು ಮಾತ್ರವಲ್ಲ ಅದರ ಸಾಮ್ರಾಜ್ಯದಿಂದ ಬಿಡುಗಡೆ ಹೊಂದಿದ್ದಾರೆ ಎಂದು ಸೂಚಿಸುವವನಾಗಿದ್ದಾನೆ. agorazo ಎಂಬ ಪದವು ಕೊಂಡುಕೊಳ್ಳುವಿಕೆಯನ್ನು ಸೂಚಿಸುತ್ತದೆ ಮತ್ತು ಇದಕ್ಕೆ ಮೊದಲಲ್ಲಿ ಜೋಡಿಸಲಾದ ex ಎಂಬುದು ಆ ಕೊಂಡುಕೊಳ್ಳುವ ನಿಮಿತ್ತವಾದ ಬಿಡುಗಡೆಯನ್ನು ಸೂಚಿಸುತ್ತದೆ. ಆದಕಾರಣ ಅವರು ಇನ್ನುಮುಂದೆ ಧರ್ಮಶಾಸ್ತ್ರ ಆಳ್ವಿಕೆಯ ಅಧೀನದಲ್ಲಿ ಇರುವವರಲ್ಲ.

"ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ, ಪುತ್ರರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ ಆತನು ಸ್ತ್ರೀಯರಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು" (ಗಲಾತ್ಯ 4:4–5). ಇದು ಮೇಲಿನವುಗಳಿಗೆ ಸಮವಾದ ಹೇಳಿಕೆಯಾಗಿದೆ ಮತ್ತು ಧರ್ಮಶಾಸ್ತ್ರ (ಒಡಂಬಡಿಕೆ) ಸಾಮ್ರಾಜ್ಯದ ಅಧೀನರಾಗಿದ್ದ ಯೆಹೂದಿ ಜನರನ್ನು ಕೊಂಡುಕೊಳ್ಳುವುದನ್ನು ಮತ್ತು ನಂಬಿಗಸ್ತರು ದೇವರ ಮಕ್ಕಳಾಗುವಂತೆ ಅವರನ್ನು ಅದರಿಂದ ಬಿಡುಗಡೆಗೊಳಿಸುವುದನ್ನೂ ಸೂಚಿಸುವುದಾಗಿದೆ – ಯೋಹಾನ 1:12ರೊಂದಿಗೆ ಹೋಲಿಸಿರಿ.

"ಆದಕಾರಣ ನೀವು ನಡಕೊಳ್ಳುವ ರೀತಿಯನ್ನು ಕುರಿತು ಚೆನ್ನಾಗಿ ನೋಡಿಕೊಳ್ಳಿರಿ. ಜ್ಞಾನವಿಲ್ಲದವರಾಗಿರದೆ ಜ್ಞಾನವಂತರಾಗಿರ್ರಿ. ಈದಿನಗಳು ಕೆಟ್ಟವುಗಳಾಗಿವೆ" (ಎಫೆಸ 5:15:16) "ಸಮಯವನ್ನು ಸುಮ್ಮನೆ ಕಳೆದುಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿ ಹೊರಗಿನವರೊಂದಿಗೆ ಜ್ಞಾನವುಳ್ಳವರಾಗಿ ನಡೆದುಕೊಳ್ಳಿರಿ" (ಕೊಲೊಸ್ಸೆ 5:5). ಇದು ಸಹಾ exagorazo ಎಂಬ ಪದದ ಅದೇ ರೀತಿಯ ಉಪಯೋಗವಾಗಿದೆ; ಕರ್ತನ ಜನರು ತಮ್ಮ ಹೃದಯಕ್ಕೆ ಹತ್ತಿರವಾದ ಬೆಲೆಬಾಳುವ ಆಸಕ್ತಿಗಳಿಗೆ ಹೋಲಿಸಿದರೆ ತಾವು ಕೆಡುಕಿನ ಮಧ್ಯದಲ್ಲಿದ್ದೇವೆ ಎಂಬುದನ್ನು ಮನದಟ್ಟುಮಾಡಿಕೊಳ್ಳುತ್ತಾರೆ, ಇದರ ಧೋರಣೆಯೆಂದರೆ ಅವರ ಚೈತನ್ಯವನ್ನು ಪಾಪಮಯವೂ, ಮೂರ್ಖವುಳ್ಳದ್ದೂ ಆಗಿದ್ದು ದೇವರ ಮಕ್ಕಳಾಗಿ ಅವರ ಹೃದಯಗಳಿಗೆ ಅತ್ಯಂತ ನಿಕಟವಾದ ಮತ್ತು ಹೆಚ್ಚು ತೂಕವುಳ್ಳ ಆಸಕ್ತಿಗಳೊಂದಿಗೆ ಹೋಲಿಸಿದಾಗ ಕನಿಷ್ಟ ಲಾಭವಿಲ್ಲದ ಸಂಗತಿಗಳ ಬಗ್ಗೆ ಅವರ ಸಮಯ, ಶಕ್ತಿ ಮತ್ತು ಪ್ರಭಾವವನ್ನೂ ಹೀರುವುದು. ಆದುದರಿಂದ ನಾವು ಕೆಟ್ಟ ಸಮಯಗಳಿಂದ ಮತ್ತು ಅನುಕೂಲಕರವಲ್ಲದ ಈ ಪ್ರಭಾವಗಳಿಂದ, ಹೆಚ್ಚಿನ ಹಿತಾಸಕ್ತಿಗಳಿಗೆ ಸಮರ್ಪಿಸಿ ಕೊಳ್ಳಲು ಸಾಧ್ಯವಾಗುವ ಅನುಪಾತವುಳ್ಳ ಸಮಯಕ್ಕೆ ಸುರಕ್ಷಿತವಾಗಿ ಹೊರಬರಬೇಕು ಹಾಗೂ ನಮ್ಮ ಸ್ವಂತ ಆಧ್ಯಾತ್ಮಿಕ ಪೋಷಣೆಗೆ, ಬಲಗೊಳ್ಳುವಿಕೆಗೆ ಮತ್ತು ಇತರರ ಆಧ್ಯಾತ್ಮಿಕ ಸಂಗತಿಗಳನ್ನು ಕೊಂಡುಕೊಳ್ಳಬೇಕು. ಇಂಥಾಃ ಕೊಂಡುಕೊಳ್ಳುವಿಕೆಗೆ ಸ್ವಾರ್ಥತ್ಯಾಗ, ನಮ್ಮ ಸ್ವಂತ ಸ್ವಾಭಾವಿಕ ಹಸಿವೆಗಳ ಮತ್ತು ಧೋರಣೆಗಳ ತೃಪ್ತಿಪಡಿಸಿಕೊಳ್ಳುವುದರ ತ್ಯಾಗ ಮತ್ತು ಇತರರ ಒಳ್ಳೆಯ ಅಭಿಪ್ರಾಯ ಮತ್ತು ಸಾಂಗತ್ಯವನ್ನು ಸಹಾ ತೆರಬೇಕಾದ ಬೆಲೆ ತೆರಬೇಕಾಗುತ್ತದೆ. ನಾವೂ ಈ ಹಿಂದಿನಂತೆ ಅದೇ ಅತಿರೇಕವುಗಳ ಕಡೆಗೆ ಅವರೊಂದಿಗೆ ಹೋಗದಿರುವುದನ್ನು ಅವರು ಅಪರೂಪವಾದದ್ದೆಂದು ಆಲೋಚಿಸುತ್ತಾರೆ – "ತಾವು ಮಾಡುವ ಅಪರಿಮಿತವಾದ ಪಟಿಂಗತನದಲ್ಲಿ ನೀವು ಸೇರದೇ ಇದ್ದುದಕ್ಕೆ ಅವರು ಆಶ್ಚರ್ಯಪಟ್ಟು ನಿಮ್ಮನ್ನು ದೂಷಿಸುತ್ತಾರೆ" – 1 ಪೇತ್ರ 4:4.

'lutroo' ಎಂಬ ಮತ್ತೊಂದು ಗ್ರೀಕ್ ಪದವನ್ನು ಸಹಾ "ರಿಡೀಮ್ಡ್" ಎಂಬುದಾಗಿ ಭಾಷಾಂತರಿಸಲಾಗಿದೆ. ಪ್ರೊ॥ ಯಂಗ್‌ರವರು lutroo ಎಂಬ ಈ ಪದವನ್ನು "ಕ್ರಯದಿಂದ ಸಡಲಿಸುವುದು" [To loose by a price] ಎಂಬುದನ್ನು ಸೂಚಿಸುವಂತೆ ಅರ್ಥೈಸುತ್ತಾರೆ. ಅಂದರೆ, ಕ್ರಯಮೊಂದನ್ನು ತೆರುವುದರ ಮೂಲಕ ಬಿಡುಗಡೆಗೊಳಿಸುವುದು ಇದರರ್ಥ. ಈ ಪದದ ಮೂಲವು 'lutron' ಎಂಬುದು. ಇದಕ್ಕೆ ಮೇಲೆ ಗಮನಿಸಿದಂತೆ 'anti' ಎಂಬ ಪದವನ್ನು ಹಿಂದಕ್ಕೆ ಅಥವಾ ಮುಂದಕ್ಕೆ

ಜೋಡಿಸುವಾಗ, 'ಅನುಗುಣವಾದ ಬೆಲೆ'ಯನ್ನು ಸೂಚಿಸುತ್ತದೆ.

`lutroo' ಎಂಬ ಈ ಪದವು ಹೊಸ ಒಡಂಬಡಿಕೆಯಲ್ಲಿ ಮೂರು ಸಾರಿ ಈ ರೀತಿಯಲ್ಲಿ ಕಾಣಿಸಿಕೊಳ್ಳುತ್ತದೆ :–

"ನಾವಾದರೋ ಇಸ್ರಾಯೇಲ್ ಜನರನ್ನು ಬಿಡಿಸತಕ್ಕವನು ಆತನೇ ಎಂದು ನಿರೀಕ್ಷಿಸಿಕೊಂಡಿದ್ದೆವು" (ಲೂಕ 24:21). ನಮ್ಮ ಕರ್ತನು ಮರಣಪಟ್ಟಾಗ ಅಪೋಸ್ತಲರಿಗೆ ಬಹಳ ನಿರಾಸೆಯುಂಟಾಯಿತು. ಮತ್ತು ಈ ನಿರಾಶೆಯನ್ನು ವ್ಯಕ್ತಪಡಿಸುವಂತೆ 'ಕರ್ತನು ತಮ್ಮನ್ನು ಅಂದರೆ ಇಸ್ರಾಯೇಲ್ಯರನ್ನು ಒಂದು ಕ್ರಯತೆತ್ತು ರೋಮಾಯರ ನೊಗದಿಂದ ಬಿಡಿಸುತ್ತಾನೆಂದು ನಿರೀಕ್ಷಿಸಿಕೊಂಡಿದ್ದೆವು' ಎಂಬ ಮಾತುಗಳನ್ನು ಹೇಳಿದರು. ಅವರಿನ್ನೂ ಪವಿತ್ರಾತ್ಮನಿಂದ ಧಾರಣಗೊಂಡಿರಲಿಲ್ಲ. ಅವರು ದೇವರ ಯೋಜನೆಯ ಉದ್ದ, ಆಗಲ, ಎತ್ತರ ಮತ್ತು ಆಳವನ್ನು ಅರ್ಥಮಾಡಿಕೊಂಡಿರಲಿಲ್ಲ. ಈ ಯೋಜನೆಯಿಂದ ಇಸ್ರಾಯೇಲ್ಯರು ಮಾತ್ರವಲ್ಲ, ಇಡೀ ಪ್ರಪಂಚದವರೇ ರೋಮಾಯರ ನೊಗದಿಂದ ಸೈತಾನನ ನೊಗದಿಂದಲೂ, ಮರಣವೆಂಬ ಮಹಾ ಕಾರಾಗೃಹ ದಿಂದಲೂ ನಮ್ಮ ಕರ್ತನು ತೆತ್ತ ಈಡುಬಲಿಯ ಬೆಲೆಯಿಂದ ವಿಮೋಚಿಸಲ್ಪಟ್ಟರು ಮತ್ತು ಇದು ಆತನ ಮರಣದಲ್ಲಿ ನೆರವೇರಿತು.

"ಆತನು ನಮ್ಮನ್ನು ಸಕಲ ಅಧರ್ಮದಿಂದ ವಿಮೋಚಿಸುವುದಕ್ಕೂ ಸತ್ಕ್ರಿಯೆಗಳಲ್ಲಿ ಆಸಕ್ತರಾದ ಸ್ವಕೀಯ ಜನರನ್ನು ತನಗಾಗಿ ಪರಿಶುದ್ಧಮಾಡುವುದಕ್ಕೂ ನಮಗೋಸ್ಕರ ತನ್ನನ್ನು ಒಪ್ಪಿಸಿಕೊಟ್ಟನು" (ತೀತ 2:14). ಮಾನವ ಜಾತಿಯ ಸಲುವಾಗಿ ನಮ್ಮ ಕರ್ತನು ತೆತ್ತ ಬೆಲೆಯು ದೇವರ ನಿಗದಿತ ಸಮಯದಲ್ಲಿ, ಮಿಲಿಯಾಂತರಯುಗದಲ್ಲಿ ಅವರನ್ನು ಸಮಾಧಿಯಿಂದ ಎಬ್ಬಿಸಿ ಸುರಕ್ಷಿತಗೊಳಿಸುವ ಉದ್ದೇಶದಿಂದ ಕೂಡಿದ್ದೂ, ನಂತರದಲ್ಲಿ ಅವರು ನೂತನ ಒಡಂಬಡಿಕೆಯ ಷರತ್ತುಗಳಿಗನುಸಾರವಾಗಿ ದೇವರ ಸಾಮರಸ್ಯಕ್ಕೆ ಹಿಂತಿರುಗಿ ಬರುವ ಅವಕಾಶವನ್ನೂ ಕಲ್ಪಿಸುವುದೂ ಮಾತ್ರವಾಗಿರದೆ, ಇದಕ್ಕೂ ಹೆಚ್ಚಾಗಿ ಅದು ಶುಭಸಮಾಚಾರವನ್ನು ಈಗ ಕೇಳುವವರಿಗೆ ದುಷ್ಟತನದ ಗುಲಾಮಗಿರಿಯಿಂದ ಬಿಡುಗಡೆಯುಂಟು ಮಾಡುವದೂ ಆಗಿತ್ತು. ನಾವು ಇನ್ನೆಂದಿಗೂ ಪಾಪದ ದಾಸರಾಗಬಾರದು, ಆದರೆ ನಮಗಾಗಿ ಮರಣಪಟ್ಟವನ, ನಮ್ಮನ್ನು ತನ್ನ ಅಮೂಲ್ಯವಾದ ರಕ್ತಚೆಲ್ಲಿ ಸಂಪಾದಿಸಿಕೊಂಡಾತನ ದಾಸರಾಗಬೇಕು.

"ನಿಮಗೆ ಬಿಡುಗಡೆಯಾದದ್ದು ಬೆಳ್ಳಿ ಬಂಗಾರ ಮೊದಲಾದ ನಶಿಸಿಹೋಗುವ ವಸ್ತುಗಳಿಂದಲ್ಲ. ಪೂರ್ಣಾಂಗವಾದ ನಿಷ್ಕಳಂಕವಾದ ಕುರಿಯ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ" (1 ಪೇತ್ರ 1:18–19). ಇದರಲ್ಲಿನ ಭಾವನೆಗಳು ಈ ಹಿಂದಿನ ಭಾವನೆಗಳಿಗೆ ಸಮವಾಗಿವೆ. ಇದು ಮರಣದಿಂದ ನಮ್ಮ ಅಂತಿಮವಾದ ಬಿಡುಗಡೆಯ ಬಗ್ಗೆ, ಪುನರುತ್ಥಾನದ ಬಗ್ಗೆ ಹೆಚ್ಚಾಗಿ ಸಂಬಂಧಿಸದೆ, ಪ್ರಸ್ತುತದಲ್ಲಿ ಇದು ನಮ್ಮನ್ನು ಕೆಡುಕನ ಮಾರ್ಗದಿಂದ, ವ್ಯರ್ಥವಾದ ಸಂಭಾಷಣೆಗಳು, ಮೂರ್ಖತನದ ಮಾತುಕತೆಗಳು ಮತ್ತು ಸಾಮಾನ್ಯವಾದ ದುಷ್ಟತನಗಳಿಂದ ಸಡಲಿಸಲ್ಪಡುವ ಬಗ್ಗೆ ಸಂಬಂಧಿಸಿದೆ. ಈ ಬಿಡುಗಡೆಯನ್ನೂ ಮತ್ತು ಇದಕ್ಕೂ ಹೆಚ್ಚಾಗಿ ಮುಂಬರಲಿರುವ ಪುನರುತ್ಥಾನದ ವೈಭವವಾದ ಬಿಡುಗಡೆಯನ್ನು ಕ್ರಿಸ್ತನು ತನ್ನ ಪರಿಶುದ್ಧ ರಕ್ತದ ಬೆಲೆಯಿಂದ ಕೊಂಡುಕೊಂಡಿದ್ದಾನೆ. ಈ ಈಡುಬಲಿಯ ಬೆಲೆಯನ್ನು ತೆರದ ಹೊರತಾಗಿ, ನ್ಯಾಯವನ್ನು ತೃಪ್ತಿಪಡಿಸದೆ, ದೇವರು ನಮ್ಮನ್ನು ಆತನ ಮಕ್ಕಳೆಂದು ಅಂಗೀಕರಿಸಲಾರನು. ಈ ಕಾರಣದಿಂದ ಆತನು ನಮ್ಮೊಂದಿಗೆ ಆತನ ಮಕ್ಕಳೆಂಬಂತೆ ವ್ಯವಹರಿಸಲಾರನು, ನಮ್ಮನ್ನು ಆತನ ಕುಟುಂಬಕ್ಕೆ ಪವಿತ್ರಾತ್ಮಪುತ್ರತ್ವದ ಮುದ್ರೆ ಒತ್ತಲಾರನು. ಆದುದರಿಂದ, ಈಗ ನಂಬಿಗಸ್ತರಿಗೆ ಮುಕ್ತವಾಗಿರುವ ಆತನ ಕೃಪೆಯ ಈ ವಿವಿಧವಾದ ಪಾರುಪತ್ಯಗಳು ಈಗ ನಮಗೆ ರಕ್ಷಣೆಯ ಪರ್ಯಂತದ **ದೇವರ ಶಕ್ತಿ**ಯಾಗಿದ್ದು, ನಮ್ಮ ಹೃದಯಗಳಲ್ಲಿ ಪಾಪದ ಶಕ್ತಿಯನ್ನು ಬೇಧಿಸುವುದಾಗಿದೆ. ಇಲ್ಲವಾದಲ್ಲಿ, ನಮ್ಮಲ್ಲಿ ಕರ್ತನ ಮನಸ್ಸು ಅಥವಾ ಆತ್ಮನು ಆಳುವ ಶಕ್ತಿಯಾಗಿ ಸ್ಥಾಪಿತವಾಗುತ್ತಿರಲಿಲ್ಲ ಮತ್ತು ಅವುಗಳು ನಮಗೆ ಬರುತ್ತಿರಲಿಲ್ಲ.

'Redeemed' ಎಂದು ತರ್ಜುಮೆಗೊಂಡಿರುವ ಮತ್ತೊಂದು ಗ್ರೀಕ್ ಪದವೆಂದರೆ 'lutrosis'. ಪ್ರೊ॥ ಯಂಗ್‍ರವರು ಇದಕ್ಕೆ ಇದರ ಅರ್ಥವಿವರಣೆಯನ್ನು 'ಸಡಲಿಸುವುದು' (loosing) ಎಂಬುದಾಗಿ ಕೊಡುತ್ತಾರೆ – ಅಕ್ಷರಶಃವಾಗಿ 'ಬಂಧನದಿಂದ ಬಿಚ್ಚುವುದು' ಅಥವಾ 'ಬಿಡುಗಡೆ ಗೊಳಿಸುವುದು' ಎಂದಾಗುತ್ತದೆ. ಈ ಪದದಲ್ಲಿ 'ಕ್ರಯ' ಅಥವಾ 'ಬೆಲೆ' ತೆರುವುದು ಎಂಬುದರ ಆಲೋಚನೆ ಇರುವುದಿಲ್ಲ. ಆದುದರಿಂದ ಇದನ್ನು ನಮ್ಮ ಇಂಗ್ಲಿಷ್ ಪದ 'Redemption' ಆಗಿ ತರ್ಜುಮೆಗೊಳಿಸಬಾರದಿತ್ತು. ಇದನ್ನು 'Deliverence' (ವಿಮೋಚನೆ) ಎಂತಲೇ ಭಾಷಾಂತರಿಸಬೇಕು. ಇದು ಹೊಸಒಡಂಬಡಿಕೆಯಲ್ಲಿ ಎರಡು ಸಾರಿ ಕಾಣಿಸಿಕೊಳ್ಳುತ್ತದೆ :–

"ಆಕೆ ಅದೇ ಗಳಿಗೆಯಲ್ಲಿ ಹತ್ತರಕ್ಕೆ ಬಂದು ದೇವರಿಂದಾದ ಉಪಕಾರವನ್ನು ನೆನಸಿ ಕೊಂಡಾಡಿದ್ದಲ್ಲದೆ

ಯೆರೂಸಲೇಮಿನ **ಬಿಡುಗಡೆ**ಯನ್ನು ಹಾರೈಸುತ್ತಿದ್ದವರೆಲ್ಲರ ಸಂಗಡ ಆತನ (ಮಗುವಾದ ಯೇಸು) ವಿಷಯದಲ್ಲಿ ಮಾತನಾಡುವವಳಾದಳು" (ಲೂಕ 2:38). ಅನ್ನಳು ಯೆರೂಸಲೇಮಿನಲ್ಲಿ ಯೆರೂಸಲೇಮಿನ ಬಿಡುಗಡೆಯನ್ನು ಬಯಸುವವರೆಲ್ಲರ – ರೋಮಾಯ ನೊಗದಿಂದ ಸ್ವಾತಂತ್ರ್ಯವನ್ನು ನಿರೀಕ್ಷಿಸುತ್ತಿದ್ದವರೆಲ್ಲರ ಸಂಗಡ ಮಾತನಾಡಿದಳು. ಆದರೆ, ಆಕೆ ಈಡುಬಲಿಯ ಬೆಲೆ ತೆರುವುದರ ಮೂಲಕ ಇನ್ನೂ ಹೆಚ್ಚಿನ ಬಿಡುಗಡೆಯು ದೊರಕುವದೆಂದು ಅವಶ್ಯವಾಗಿ ಅರ್ಥವಾಗಲಿಲ್ಲ.

"ಕ್ರಿಸ್ತನು. . . ಮಹಾಯಾಜಕನಾಗಿ ಬಂದು . . . ಹೋತಗಳ ಮತ್ತು ಕುರಿಯ ರಕ್ತವನ್ನು ತೆಗೆದುಕೊಳ್ಳದೆ ಸ್ವಂತ ರಕ್ತವನ್ನೇ ತೆಗೆದುಕೊಂಡು ನಮಗೋಸ್ಕರ ನಿತ್ಯ **ವಿಮೋಚನೆ**ಯನ್ನು ಸಂಪಾದಿಸಿಕೊಂಡವನಾಗಿ ಒಂದೇ ಸಾರಿ ದೇವರ ಸನ್ನಿಧಾನಕ್ಕೆ ಪ್ರವೇಶಿಸಿದನು" (ಇಬ್ರಿಯ 9:11–12). ಇಲ್ಲಿ ಅಪೋಸ್ತಲನು ನಮ್ಮ ಕರ್ತನು ಯಾವ ರೀತಿಯಲ್ಲಿ ನಿತ್ಯವಾದ ವಿಮೋಚನೆಯನ್ನು ಸಂಪಾದಿಸಿದನು ಎಂಬುದನ್ನು ಸೂಚಿಸುತ್ತಿಲ್ಲ. ಆದುದರಿಂದ ಆತನು ನೀಡಿದ ಕ್ರಯದ ಬಗ್ಗೆ ಇಲ್ಲಿ ಹೇಳಿರುವುದಿಲ್ಲ; ಆತನು ಇಲ್ಲಿ ಕೇವಲ ದೇವಜನರ ಪ್ರಸ್ತುತವಾದ ಮತ್ತು ಮುಂದಿನ ಬಿಡುಗಡೆಯ ಬಗ್ಗೆ ಸೂಚಿಸುತ್ತಾನೆಯೇ ಹೊರತು ನಮ್ಮ ಕರ್ತನು ಪವಿತ್ರವಾದ ದೇವರ ಸನ್ನಿಧಾನವನ್ನು ಪ್ರವೇಶಿಸುವ ಮೊದಲು – ತನ್ನನ್ನೇ ಈಡುಬಲಿಯ ಬೆಲೆಯಾಗಿ ಸಮರ್ಪಿಸಿಕೊಳ್ಳುವ ಪೂರ್ವದಲ್ಲಿ ಆ ಬಿಡುಗಡೆಯು ಸಂಪಾದನೆಗೊಂಡ ವಿಧಾನದ ಬಗ್ಗೆ ಅಲ್ಲ.

ಹೊಸಒಡಂಬಡಿಕೆಯಲ್ಲಿ "redeemed" ಎಂಬುದಾಗಿ ಭಾಷಾಂತರಗೊಂಡ ಮತ್ತೊಂದು ಗ್ರೀಕ್ ಪದವೆಂದರೆ 'poieolutrosin'. ಪ್ರೊ॥ ಯಂಗ್‌ರವರು ಇದನ್ನು 'To make a loosing' ie 'to set at liberty' ಸಡಲಿಕೆಯನ್ನುಂಟುಮಾಡುವುದು ಅಂದರೆ ಬಿಡುಗಡೆಗಾಗಿ ಸ್ವಾತಂತ್ರಕ್ಕೆ ಅಣಿಗೊಳಿಸುವುದು ಎಂದು ಅರ್ಥೈಸಿದ್ದಾರೆ. ಇದು ಒಂದೇ ಸಾರಿ ಮಾತ್ರವೇ ಕಾಣಿಸಿಕೊಳ್ಳುತ್ತದೆ.

"ಇಸ್ರಾಯೇಲ್ ಜನರ ದೇವರಾಗಿರುವ ಕರ್ತನಿಗೆ ಸ್ತೋತ್ರವು . . . ಆತನು . . ತನ್ನ ಪ್ರಜೆಯನ್ನು ಪರಾಮರಿಸಿ ಅವರಿಗೆ ಬಿಡುಗಡೆಯನ್ನುಂಟುಮಾಡಿದ್ದಾನೆ" (ಲೂಕ 1:68). ಇದರ ಹಿಂದಿನ ವಚನದ ಪ್ರಕಾರ ಇದೊಂದು ಪ್ರವಾದನಾ ವಚನವೆಂದು ತಿಳಿದುಬರುತ್ತದೆ. ಪೂರೈಸಲ್ಪಡದ ಸಂಗತಿಗಳನ್ನು ಇಲ್ಲಿ ನೆರವೇರಿದಂತೆ ಹೇಳಲಾಗಿದೆ. ಇಸ್ರಾಯೇಲ್ಯರ ಬಿಡುಗಡೆಗಾಗಿ ಪ್ರಥಮ ಹೆಜ್ಜೆಯನ್ನು ಕೈಗೆತ್ತಿಕೊಳ್ಳಲಾಗಿದೆ. ಈ ಸಮಗ್ರ ಸಂಗತಿಯು ಈಗಾಗಲೇ ನೆರವೇರಿದೆಯೋ ಎಂಬಂತೆ ಇದನ್ನು ಸಂತೋಷಕರವಾಗಿ ಹೇಳಲಾಗಿದೆ. ಈ ಮಾತುಗಳಲ್ಲಿ ಬಿಡುಗಡೆಯನ್ನು ಯಾವ ರೀತಿಯಲ್ಲಿ ಸಂಪಾದಿಸಿಕೊಳ್ಳಲಾಗುವುದು ಎಂಬುದರ ಆಲೋಚನೆ ಇರುವುದಿಲ್ಲ. ಪರಿಶುದ್ಧ ಗ್ರಂಥದ ಇತರೆ ಕಡೆಗಳಲ್ಲಿ ಇದು ಅನುರೂಪವಾದ ಬೆಲೆತೆತ್ತು ಸಂಪಾದಿಸಿಕೊಳ್ಳಲಾಗುವುದು ಎಂದು ಹೇಳಲಾಗಿದೆ. ಇದು ಈಡುಬಲಿಯ ಬೆಲೆಯಾಗಿದ್ದು ದೇವರ ರಾಜ್ಯದ ಸಿದ್ಧತೆಯಲ್ಲಿ ಕಂಡುಬರುತ್ತದೆ. ಈ ಪದವನ್ನು "redeemed" ಎಂಬುದಾಗಿ ತರ್ಜುಮೆಗೊಳಿಸಬಾರದಿತ್ತು. ಇಂಗ್ಲಿಷ್ ಓದುಗರ ಆಲೋಚನೆಯನ್ನು ಕಾಪಾಡುವಂತೆ ಸುಮಾರಾಗಿ 'Delivered' ('ಬಿಡುಗಡೆಗೊಳಿಸಲಾಗಿದೆ') ಎಂದು ಇರಬೇಕಿತ್ತು.

ಸರಿಯಾದ ರೀತಿಯಲ್ಲಿ ಭಾಷಾಂತರಿಸದೆ "redemption' ಎಂಬುದಾಗಿ ಭಾಷಾಂತರಿಸಲ್ಪಟ್ಟ ಮತ್ತೊಂದು ಗ್ರೀಕ್ ಪದವೆಂದರೆ, 'apolutrosis' ಎಂಬುದು. ಇದರಲ್ಲಿ ಕೊಂಡುಕೊಂಡ ಬೆಲೆಯ ಬಗ್ಗೆ ಯಾವುದೇ ಆಲೋಚನೆ ಇರುವುದಿಲ್ಲ. ಆದರೆ, ಕೇವಲ 'ಬಿಡುಗಡೆ' 'ಸ್ವತಂತ್ರವಾಗಿ ಬಿಡುವುದು' ಎಂಬುದನ್ನು ಸೂಚಿಸುತ್ತದೆ. ಪ್ರೊ॥ ಯಂಗ್‌ರವರು ಇದರ ಅರ್ಥವನ್ನು 'loosing away' ಎಂದು ನೀಡುತ್ತಾರೆ. ಈ ಪದವು ಹತ್ತು ಬಾರಿ ಕಾಣಿಸಿಕೊಳ್ಳುತ್ತದೆ. ಒಂದು ಬಾರಿ ಮಾತ್ರವೇ ಸರಿಯಾದ ರೀತಿಯಲ್ಲಿ "Deliverence" ಬಿಡುಗಡೆ ಎಂಬುದಾಗಿ ಭಾಷಾಂತರಿಸಲಾಗಿದೆ. ಈ ಕೆಳಗಿನವುಗಳನ್ನು ಗಮನಿಸಿರಿ :–

(1) "ಇವು ಸಂಭವಿಸುವುದಕ್ಕೆ ತೊಡಗುವಾಗ ಮೇಲಕ್ಕೆ ನೋಡಿರಿ, ನಿಮ್ಮ ತಲೆ ಎತ್ತಿರಿ; ನಿಮ್ಮ ಬಿಡುಗಡೆ ಸಮೀಪವಾಗಿದೆ ಅಂದನು" (ಲೂಕ 21:28). ಇದರಲ್ಲಿ ಈಡುಬಲಿಯ ಅಥವಾ ಸಭೆಯ ಬಿಡುಗಡೆಯ ಹಿಂದಿನ ಷರತ್ತುಗಳ ಸೂಚನೆ ಇರುವುದಿಲ್ಲ, ಆದರೆ ಬಿಡುಗಡೆಯ ಬಗ್ಗೆ ಮಾತ್ರವೇ ತಿಳಿಸಿದೆ.

(2) "ಅವರು ನೀತಿವಂತರೆಂದು ನಿರ್ಣಯ ಹೊಂದುವುದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತ ಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವುದು" (ರೋಮಾ. 3:24). ಈ ಮಾತುಗಳಲ್ಲಿ ಅಪೋಸ್ತಲನು 'ಈಡು ಬಲಿಯ ಬೆಲೆ'ಯ ಬಗ್ಗೆ ಸೂಚಿಸುವುದಿಲ್ಲ, ಆದರೆ ಕರ್ತನ ಜನರು ಹೊಂದಿಕೊಳ್ಳುವ ಬಿಡುಗಡೆಯ ಬಗ್ಗೆ ಮಾತ್ರವೇ ಹೇಳುತ್ತಾನೆ. ಈಗ ಹಾಗೆಂದು ಎಣಿಕೆಯಾಗುವುದು, ಬರುತ್ತಾ ಬರುತ್ತಾ ಪುನರುತ್ಥಾನದಲ್ಲಿ ಪ್ರತೀಕ್ಷೆಯುಳ್ಳವುಗಳಾಗುವುದು. ಆತನು ದೇವರ ದೃಷ್ಟಿಕೋನದಲ್ಲಿ ಈ ಪ್ರಸ್ತಾಪವನ್ನು ಮಾಡುವವನಾಗಿದ್ದಾನೆ; ವಿಶ್ವಾಸಿಗಳು ಮುಕ್ತವಾಗಿ, ಷರತ್ತುಗಳಿಲ್ಲದೆಯೇ ಅವರ ಯಾವುದೇ ಅರ್ಹತೆಯ ಕಾರ್ಯವನ್ನು ನಡೆಸದೆ

ನೀತಿನಿರ್ಣಯ ಹೊಂದಿಕೊಳ್ಳುವರು. ಇದು ದೇವರು ನಮ್ಮ ಕರ್ತನಾದ ಯೇಸುವಿನಲ್ಲಿ ಒದಗಿಸಿರುವ ಬಿಡುಗಡೆಯ ಮೂಲಕ ನೆರವೇರುವುದು. ಮುಂದಣ ಮಾತುಗಳಲ್ಲಿ ಅಪೋಸ್ತಲನು ಈ ಬಿಡುಗಡೆಯು ಯಾವ ರೀತಿ ನೆರವೇರುವುದೆಂದು ಹೇಳಲು ಮುಂದುವರೆಯುತ್ತಾನೆ – "ಈತನು (ಕ್ರಿಸ್ತನು) ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು ದೇವರು ಈತನನ್ನು ಮುಂದಿಟ್ಟನು" – ರೋಮಾ. 3:25. 'ಕೃಪಾಧಾರ'ವೆಂದರೆ ಅಕ್ಷರಶಃವಾಗಿ ಆತನ ರಕ್ತದಲ್ಲಿ ವಿಶ್ವಾಸವಿಡುವುದರ ಮೂಲಕ ದೊರೆಯುವ 'ಕೃಪೆಯ ಸ್ಥಾನ' ಅಥವಾ 'ಕೃಪೆಯ ನಾಲೆ'. ಇದು ಈ ಲೋಕದ ಎಲ್ಲರ ಪಾಪನಿವಾರಣೆಗಾಗಿ ನೀಡಲ್ಪಟ್ಟ ಈಡುಬಲಿಯ ಬೆಲೆಯಾಗಿದೆ.

(3) "ಇದು ಮಾತ್ರವಲ್ಲದೆ ಪ್ರಥಮ ಫಲವಾಗಿರುವ ಪವಿತ್ರಾತ್ಮ ವರವನ್ನು ಹೊಂದಿದ ನಾವಾದರೋ (ನಿಷ್ಠಾವಂತ ಸಭೆಯು) ದೇವಪುತ್ರರ ಪದವಿಯನ್ನು ಅಂದರೆ ದೇಹಕ್ಕೆ (ಸಭೆ, ಅದರ ಶಿರದೊಂದಿಗೆ ಸೂಕ್ತ ಸಮಯದಲ್ಲಿ ಮಹಿಮೆಹೊಂದಲಿರುವ ಕ್ರಿಸ್ತನ ದೇಹಕ್ಕೆ) ಬರಬೇಕಾದ ವಿಮೋಚನೆಯನ್ನು ಎದುರು ನೋಡುತ್ತಾ ನಮ್ಮೊಳಗೆ ನರಳುತ್ತೇವೆ" (ರೋಮಾ. 8:23) ಎಂಬ ಈ ಹೇಳಿಕೆಯಲ್ಲಿ ಕಲ್ವಾರಿಯಲ್ಲಿ ಸಾಧಿಸಲ್ಪಟ್ಟ ವಿಮೋಚನೆಯ ಬಗ್ಗೆ, ಕೊಂಡುಕೊಳ್ಳಲ್ಪಟ್ಟ ಕ್ರಯದ ಬಗ್ಗೆ ಕಿಂಚಿತ್ತಾದರೂ ಸೂಚನೆ ಇರುವುದಿಲ್ಲ: ಇದು ಅಪ್ಪಟವಾಗಿ ಸಭೆಯ ಬಿಡುಗಡೆಯನ್ನು ಸೂಚಿಸುತ್ತದೆ. ಇದು ಕಲ್ವಾರಿಯಲ್ಲಿ ಪೂರೈಸಿದ ವಿಮೋಚನೆಯ ಫಲಿತಾಂಶದ ಭಾಗವಾಗಿದೆ – ಇದುವೇ ಈಡುಬಲಿ.

(4) "ಕ್ರಿಸ್ತ ಯೇಸು ನಮಗೆ ದೇವರ ಕಡೆಯಿಂದ ಜ್ಞಾನವೂ ನೀತಿ ಶುದ್ಧೀಕರಣ ವಿಮೋಚನೆಗಳಿಗೆ ಕಾರಣನೂ ಆದನು" (1 ಕೊರಿಂಥ 1:30). ಇದರಲ್ಲಿ ಯಾವುದೂ ಕಲ್ವಾರಿಯಲ್ಲಿ ಕೊಡಲ್ಪಟ್ಟ ಈಡುಬಲಿಯ ಬೆಲೆಯ ಬಗ್ಗೆ ಸೂಚಿಸುವುದಿಲ್ಲ. ಅಪೋಸ್ತಲನು ನಮ್ಮ ಕರ್ತನು ನಮಗೆ ಮಾಡಿದ ಯಾವುದರ ಬಗ್ಗೆಯೂ ಇಲ್ಲಿ ಮಾತನಾಡುವುದಿಲ್ಲ, ಆದರೆ ಆತನು ನಮಗೆ ಇನ್ನೂ ಮಾಡಬೇಕಾದುದರ ಬಗ್ಗೆ ಮಾತನಾಡುವವನಾಗಿದ್ದಾನೆ. ಆತನು ನಮ್ಮ ವಿವೇಕವಾಗಿದ್ದಾನೆ, ಇದರಿಂದ ನಾವು ನಮ್ಮ ಸ್ವಂತಚಿತ್ತವನ್ನು ಬದಿಗೆ ಸರಿಸಿ ಆತನ ಚಿತ್ತವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಈ ರೀತಿಯಾಗಿ ನಾವು ಸ್ವಸ್ಥ ಚಿತ್ತದ, ಶಾಂತ ಮನಸ್ಸಿನ ಚೈತನ್ಯವನ್ನು ಹೊಂದಿಕೊಳ್ಳುತ್ತೇವೆ ಮತ್ತು 'ಆತನ ಜ್ಞಾನದಲ್ಲಿ ನಡೆಯುತ್ತೇವೆ'. ಆತನೇ ನಮ್ಮ ನೀತಿಯು, ನಮ್ಮ ಪ್ರತಿನಿಧಿಯಾಗಿ ಆತನು ಎಲ್ಲರಿಗಾಗಿ ತನ್ನನ್ನೇ ಈಡುಬಲಿಯಾಗಿ ಅರ್ಪಿಸಿದ್ದಾನೆ. ಈಗ ಆತನು ತನ್ನ ನೀತಿವಂತಿಕೆಯಲ್ಲಿ ಆತನ ಮೂಲಕವಾಗಿ ತಂದೆಯ ಬಳಿಗೆ ಬಂದವರ ಪ್ರತಿನಿಧಿಯಾಗಿರುತ್ತಾನೆ. ಆತನು ನಮ್ಮನ್ನು ಶುದ್ಧಿಮಾಡುವಾತನು, ಇದರಲ್ಲಿ ಆತನ ಅರ್ಹತೆಯ ಮೂಲಕವಾಗಿ, ನಾವು ತಂದೆಯಿಂದ ಪರಿಪೂರ್ಣರೆಂದು ಎಣಿಸಲ್ಪಟ್ಟು ಜೀವಂತ ಬಲಿಗಳಾಗಿ ಅಂಗೀಕರಿಸಲ್ಪಟ್ಟಿದ್ದೇವೆ. ಅದೇ ಸಮಯದಲ್ಲಿ ನಿಜವಾಗಿಯೂ ನಮ್ಮಲ್ಲಿರುವ ಕ್ರಿಸ್ತನ ಶಕ್ತಿಯು ನಮ್ಮನ್ನು ಆತನಿಗೆ ಜೀವಂತ ಬಲಿಗಳನ್ನಾಗಿ, ಆತನ ಹೆಜ್ಜೆಜಾಡಿನಲ್ಲಿ ನಡೆಯುವಂತೆಯೂ, ನಮ್ಮ ಒಡಂಬಡಿಕೆಯನ್ನು ಪೂರೈಸುವಂತೆಯೂ ನಮ್ಮನ್ನು ಪ್ರಸ್ತುತಿಪಡಿಸುತ್ತದೆ. ಆತನು ನಮ್ಮನ್ನು ಬಿಡುಗಡೆ ಗೊಳಿಸುವವನಾಗಿದ್ದಾನೆ (ಇದನ್ನು ರಿಡೆಂಪ್ಷನ್ ಎಂದು ತಪ್ಪಾಗಿ ಭಾಷಾಂತರಿಸಲಾಗಿದೆ). ಅದರಲ್ಲಿ ಆತನು ಜೀವಿಸುವವನು ಎಂಬ ಸತ್ಯವು, ದೇವರ ಕೃಪೆಯಿಂದ ತನ್ನ ಅಮೂಲ್ಯವಾದ ರಕ್ತದ ಮುಖಾಂತರ ಕೊಂಡುಕೊಂಡು ನಾವೂ ಸಹಾ ಜೀವಿಸುವವರೆಂದು ಖಾತರಿಪಡಿಸುತ್ತಾನೆ. ಆತನು ಸೂಕ್ತ ಸಮಯದಲ್ಲಿ ತನ್ನ ಅಮೂಲ್ಯವಾದ ಸ್ವರಕ್ತದಿಂದ ಕೊಂಡುಕೊಂಡ ಆತನ ಸಭೆಯನ್ನು ಭ್ರಷ್ಟತೆಯ, ಮರಣದ ಬಂಧನದಿಂದ ವಿಮುಕ್ತಿ ಗೊಳಿಸುತ್ತಾನೆ. ಇದು ಕೊಂಡುಕೊಳ್ಳುವಿಕೆಯಲ್ಲ, ಬಿಡುಗಡೆಯು ಇಲ್ಲಿ ಸೂಚಿತವಾಗಿದೆ. ಯಾಕೆಂದರೆ, ಆತನು ಅದನ್ನು ಕೊಂಡುಕೊಂಡಿರುವುದರಿಂದ ಆತನಿಗೆ ಜ್ಞಾನ, ನ್ಯಾಯ ನಿರ್ಣಯ, ಶುದ್ಧೀಕರಣ, ಬಿಡುಗಡೆ ಇವುಗಳ ಬಗ್ಗೆ ಏನಾದರೂ ಮಾಡಲು ಅಧಿಕಾರವಿದೆ.

(5) ಈ ಕೃಪಾದಾನವು ಆತನ ಪ್ರಿಯನಲ್ಲಿಯೇ ನಮಗೆ ದೊರೆಯಿತು. "ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆ ಆಯಿತು. ಇದು ದೇವರ ಕೃಪಾತಿಶಯವೇ" (ಎಫೆಸ 1:7). ಇಲ್ಲಿ ಅಪೋಸ್ತಲನು ಕಲ್ವಾರಿಯಲ್ಲಿ ಕೊಂಡುಕೊಂಡ ವಿಮೋಚನೆಯ ಬಗ್ಗೆ ಸೂಚಿಸುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಆತನು ತಂದೆಯೊಡನೆ ನಮ್ಮ ಅಂಗೀಕಾರದ ಬಗ್ಗೆ ಮಾತನಾಡುತ್ತಾನೆ ಮತ್ತು ಯೆಹೋವನೊಡನೆ ಈ ಅಂಗೀಕಾರವು ಆತನು ತನ್ನ ಪ್ರಿಯ ಮಗನಾದ ಯೇಸುಕರ್ತನ ಮೂಲಕ ಮಾಡಿದ ಕೆಲವೊಂದು ಸಂಗತಿಗಳ ಮೇಲೆ ಆಧಾರವಾಗಿದೆಯೆಂದು ಪ್ರಕಟಿಸುತ್ತಾನೆ. ಮತ್ತು ಆತನ ರಕ್ತದ (ಯಜ್ಞ ಅಥವಾ ಈಡುಬಲಿ) ಮೂಲಕವಾಗಿ ನಮಗೆ ಬಿಡುಗಡೆಯುಂಟಾಗಿದೆ. ಈ ವಾಕ್ಯದ ರಚನೆಯು ನಮ್ಮ ಬಿಡುಗಡೆಯು ಪಾಪದ ದಂಡನೆಯಾದ ಮರಣದಿಂದ ಎಂದು ತೋರಿಸುತ್ತದೆ. ಯಾಕೆಂದರೆ ಆತನು ಈ ಬಿಡುಗಡೆಯನ್ನು 'ಪಾಪ ಪರಿಹಾರ' ಅಥವಾ 'ಪಾಪಕ್ಷಮಾಪಣೆ' ಎಂದು ವಿವರಿಸುತ್ತಾನೆ. ಹಾಗಾದರೆ, ಈ ಪರಿಚ್ಛೇದದ ಅರ್ಥ :

ಪರಲೋಕದ ತಂದೆಯ ಮನಸ್ಸಿನಲ್ಲಿ ಈಗಾಗಲೇ 'ಚಿಕ್ಕ ಹಿಂಡನ್ನು' ದೈವಿಕ ಸ್ವಭಾವವುಳ್ಳ ತನ್ನ ಮಕ್ಕಳನ್ನಾಗಿ, ತಾನು ಪ್ರಥಮವಾಗಿ ಪಡೆದವನಾದ ಅತ್ಯಂತ ಪ್ರಿಯನಾದ ಮಗನೊಂದಿಗೆ ಅಂದರೆ ನಮ್ಮ ಕರ್ತನಾದ ಯೇಸುವಿನೊಂದಿಗೆ ಸಹ–ಬಾಧ್ಯಸ್ತರನ್ನಾಗಿ ಪಡಕೊಳ್ಳುವ ಪೂರ್ವನಿರ್ಣಯವಿದ್ದು ಆತನು ನಮ್ಮ ಬಗೆಗಿದ್ದ ಈ ಉದ್ದೇಶವನ್ನು ನೆರವೇರಿಸಲು ತನ್ನ ಕೃಪೆಯ ಅಗತ್ಯತೆಯನ್ನು ತಿಳಿದು ಆ ದೆಸೆಯಲ್ಲಿ ಹೆಜ್ಜೆಯನ್ನಿಟ್ಟಿದ್ದಾನೆ. ಆತನು ತನ್ನ ಪ್ರಿಯ ಮಗನಲ್ಲಿ ನಮ್ಮನ್ನು ಅಂಗೀಕಾರಾರ್ಹರನ್ನಾಗಿ ಮಾಡಿದ್ದಾನೆ. ಆ ಪ್ರಿಯನಲ್ಲಿ, ಆತನ ರಕ್ತದ ಮೂಲಕ, ಆತನ ಯಜ್ಞದ ಮೂಲಕ ನಾವು ದೇವರ ಶಾಪ ಮತ್ತು ಕ್ರೋಧದಿಂದ ಬಿಡುಗಡೆ ಹೊಂದಿಕೊಳ್ಳುತ್ತೇವೆ – ನಮ್ಮ ಪಾಪಗಳು ಪರಿಹರಿಸಲ್ಪಡುತ್ತವೆ ಮತ್ತು ಇವುಗಳಿಂದ ನಾವು ಮುಕ್ತರೂ, ನಿರ್ದೋಷಿಗಳೂ ಆಗುತ್ತೇವೆ.

(6) "ದೇವರು ಸಂಪಾದಿಸಿಕೊಂಡ ಜನರಿಗೆ ವಿಮೋಚನೆ (ಬಿಡುಗಡೆ)ಯಾಗುವುದೆಂಬುದಕ್ಕೆ ಪವಿತ್ರಾತ್ಮನು ನಮ್ಮ ಬಾಧ್ಯತೆಗೆ ಸಂಚಕಾರವಾಗಿದ್ದಾನೆ. ವಿಮೋಚನೆಯು ದೇವರ ಮಹಿಮೆಗೆ ಎಷ್ಟೋ ಪ್ರಖ್ಯಾತಿಯನ್ನು ಉಂಟುಮಾಡುವುದು" (ಎಫೆಸ 1:14). ಮಾನವರ ಬದಲಿಯಾಗಿ ಅವರ ಪಾಪಗಳಿಗೆ ಯೇಸುಕ್ರಿಸ್ತನು ಪ್ರಾಯಶ್ಚಿತ್ತ ಯಜ್ಞವಾಗಿ ಸಂಪಾದಿಸಿದ ಬಾಧ್ಯತೆಯು ಸಾಮಾನ್ಯವಾಗಿ ಮಾನವ ಜಾತಿಯನ್ನು ಅಥವಾ ಸುವಾರ್ತಾ ಹಾಗೂ ಕ್ರಿಸ್ತನ ಮದಲಗಿತ್ತಿಯಾದ ಸಭೆಯ ಷರತ್ತುಗಳಿಗನುಸಾರವಾಗಿ ಈ ಭಾಗ್ಯವನ್ನು ಒಪ್ಪಿಕೊಳ್ಳುವ ಅನೇಕ ಮಂದಿಯನ್ನು ಒಳಗೊಂಡಿದೆ. ಬಿಡುಗಡೆಯ ಕಾಲವು ಮಿಲಿಯಾಂತರ ಯುಗದಲ್ಲಿದೆ ಮತ್ತು ಕ್ರೈಸ್ತ ಸಭೆಯು ಮೊದಲಿಗೆ – 'ಮುಂಜಾವಿನಲ್ಲಿಯೇ' ಬಿಡುಗಡೆ ಹೊಂದಿಕೊಳ್ಳಬೇಕು. ಆದರೆ ಈ ಭೂಮಿಯು ಮಾನವನ ಸ್ಥಿರಾಸ್ಥಿಯ ಭಾಗವಾಗಿದ್ದು ಎಲ್ಲರಿಗಾಗಿ ಸಮರ್ಪಿಸಿದ ಅದೇ ಯಜ್ಞದ ಮೂಲಕವಾಗಿ ಕೊಂಡುಕೊಳ್ಳಲ್ಪಟ್ಟಿದೆ. ಆದುದರಿಂದ ಅದೂ ಸಹಾ ತನ್ನ ಪಾಲಿನ ಶಾಪದಿಂದ ವಿಮೋಚಿಸಲ್ಪಟ್ಟು ದೇವರ ಉದ್ಯಾನವನವಾದ 'ಪರದೈಸ್' ಆಗ ಬೇಕಾಗಿದೆ. ಕೊಂಡುಕೊಳ್ಳುವಿಕೆಯ ಕಾರ್ಯ ನೆರವೇರಿದೆ ಆದರೆ ಬಿಡುಗಡೆಯು ದೇವರ ಸೂಕ್ತಸಮಯಕ್ಕಾಗಿ ಕಾಯುತ್ತಿದೆ.

(7) "ಆ ಕುಮಾರನಲ್ಲಿ (ಆತನ ರಕ್ತದ ಮೂಲಕವಾಗಿ) ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು" (ಕೊಲೊಸ್ಸೆ 1:14). ಈ ಹೇಳಿಕೆಯು ಸಹಾ ಮೇಲಿನ ಹೇಳಿಕೆಯಂತೆಯೇ ಇದೆ. ಸಭೆಯಾದ ನಮಗೆ ಈಗಾಗಲೇ ಬಿಡುಗಡೆಯಾಗಿದೆ, ಅಂದರೆ ನಮ್ಮ ಪಾಪಗಳ ಕ್ಷಮಾಪಣೆ ಮತ್ತು ಆ ಮೂಲಕ ತಂದೆ ದೇವರೊಂದಿಗೆ ಸಾಮರಸ್ಯವುಂಟಾಗಿದೆ. ಇಲ್ಲಿನ 'ರಿಡೆಮ್ಷನ್' ಎಂಬ ಪದದಲ್ಲಿ ಪಾಪಪ್ರಾಯಶ್ಚಿತ್ತ ಬಲಿಯ ಯಾವುದೇ ಸೂಚನೆ ಇರುವುದಿಲ್ಲ ಆದರೆ ಕೇವಲ ನಮ್ಮ ಮೇಲಿನ ಪರಿಣಾಮಗಳು ಅಂದರೆ ನಮ್ಮನ್ನು ನಮ್ಮ ಪಾಪಗಳಿಂದ ಬಿಡುಗಡೆಗೊಳಿಸುವುದಷ್ಟೇ ಇದೆ. ಹೇಗೂ ಅಪೋಸ್ತಲನು ಈ ಯಜ್ಞವನ್ನು ನಿರ್ಲಕ್ಷಿಸುವುದಿಲ್ಲ, ಆದರೆ ಬಂಧನದಿಂದ ಮತ್ತು ಪಾಪದ ನಿಯಂತ್ರಣದಿಂದ ನಮ್ಮ ಬಿಡುಗಡೆಯು ನಮ್ಮ ಕರ್ತನ ಅಮೂಲ್ಯ ರಕ್ತದ ಪರಿಣಾಮಕತ್ವ ಶಕ್ತಿ – ಆತನ ಮರಣ, ಪಾಪಪ್ರಾಯಶ್ಚಿತ್ತ ಯಜ್ಞ ಮತ್ತು ಸಮರ್ಪಿಸಿದ ಈಡುಬಲಿಯಿಂದಲೇ ಎಂದು ಪ್ರಕಟಿಸುತ್ತಾನೆ.

(8) "ದೇವರ ಪವಿತ್ರಾತ್ಮನನ್ನು ದುಃಖಪಡಿಸಬೇಡಿರಿ; ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆ ಹೊಂದಿದ್ದೀರಲ್ಲಾ" (ಎಫೆಸ 4:30). ಇಲ್ಲಿ ಕಲ್ವಾರಿಯಲ್ಲಿ ನೆರವೇರಿಸಿದ ಈಡುಬಲಿಯ ಬಗ್ಗೆ ಯಾವುದೇ ಉಲ್ಲೇಖವಿರುವುದಿಲ್ಲ. ಆದಾಗ್ಯೂ, ಈ ಬಲಿಯು ಮುಗಿಯುವವರೆಗೆ ಮತ್ತು ಅರ್ಹತೆಯು ಮಹಾ ಪವಿತ್ರದಲ್ಲಿ ಪ್ರಸ್ತುತಿಪಡಿಸುವವರೆಗೆ ಮತ್ತು ಅದು ತಂದೆಯಿಂದ ಅಂಗೀಕಾರವಾಗುವವರೆಗೆ, ಪವಿತ್ರಾತ್ಮನು ಯಾರಮೇಲೆಯೂ ದೇವರ ಮಕ್ಕಳೆಂದು ಮುದ್ರಿಸಲು ಬರುವುದಿಲ್ಲ. ಈಗ ಮುದ್ರೆಹೊಂದಿದವರು ಈ ಪುತ್ರತ್ವದ ಮುದ್ರೆಯನ್ನು, ದೈವಿಕ ಸ್ವಭಾವದ ಈ ಪಡೆಯುವಿಕೆಯನ್ನು ಕಾಪಾಡಿಕೊಳ್ಳಬೇಕು, ಮತ್ತು ಇದನ್ನು ಕಳಕೊಳ್ಳಬಾರದು. ಆತ್ಮನನ್ನು ಮುದ್ರಿಸುವುದು ಆತ್ಮದ ಮೊದಲನೆಯ ಫಲವು; ಇದುವೇ ಪ್ರಸ್ತುತ ಜೀವನದಲ್ಲಿ ಸಂಪರ್ಕವನ್ನುಂಟು ಮಾಡುವಂಥಾದ್ದು. ದೈವಿಕ ಸ್ವಭಾವದ ಪೂರ್ಣ ಮಟ್ಟದ ಆಶೀರ್ವಾದಗಳಿಗಾಗಿ, ನಾವು ತಂದೆಯಿಂದ ನೇಮಕವಾದ ಸಮಯದವರೆಗೆ ಅಂದರೆ ಆ 'ಬಿಡುಗಡೆಯ ದಿನ', 'ಮಿಲಿಯಾಂತರ ದಿನ'ದವರೆಗೆ ಕಾಯಬೇಕಾಗುತ್ತದೆ. ಪರಿಶುದ್ಧ ಗ್ರಂಥವು ಕ್ರಿಸ್ತನ ಮದಲಗಿತ್ತಿಯಾದ ಸಭೆಯ ಬಗ್ಗೆ ಪ್ರಕಟಿಸುವಂತೆ ಆ ದಿನದಲ್ಲಿ "ಉದಯಕಾಲದಲ್ಲಿಯೇ ದೇವರು ಇದರ ಸಹಾಯಕ್ಕೆ ಬರುವನು" (ಕೀರ್ತನೆ 46:5). ಯಾರಾರು ಪವಿತ್ರಾತ್ಮನನ್ನು ಮತ್ತು ಆತನ ಮುದ್ರೆಯನ್ನು ಕಳೆದುಕೊಳ್ಳುತ್ತಾರೋ ಅಂಥವರಿಗೆ ಪ್ರಥಮ ಪುನರುತ್ಥಾನದಲ್ಲಿ, ಪಾಪದ ಮತ್ತು ಮರಣದ ಶಕ್ತಿಯಿಂದ ಬಿಡುಗಡೆ ಹೊಂದುವ ಆ ದಿನದ ಉದಯಕಾಲದಲ್ಲಿ ಯಾವುದೇ ಪಾಲಾಗಲೀ, ಭಾಗವಾಗಲೀ ಇರುವುದಿಲ್ಲ.

(9) "ಈ ಕಾರಣದಿಂದ ಆತನು ಒಂದು ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ. ಮೊದಲನೆಯ ಒಡಂಬಡಿಕೆಯ ಕಾಲದಲ್ಲಿ ನಡೆದ ಅಕ್ರಮಗಳ ಪರಿಹಾರಕ್ಕಾಗಿ ಆತನು ಮರಣವನ್ನು ಅನುಭವಿಸಿದ್ದರಿಂದ ದೇವರಿಂದ ಕರೆಯಿಸಿಕೊಂಡವರು ವಾಗ್ದಾನವಾಗಿದ್ದ

ನಿತ್ಯಬಾಧ್ಯತೆಯನ್ನು ಹೊಂದುವುದಕ್ಕೆ ಆತನ ಮೂಲಕ ಮಾರ್ಗವಾಯಿತು**"** (ಇಬ್ರಿಯ 9:15). ಮತ್ತೊಂದೆಡೆ ಈ ತಪ್ಪಾದ ಭಾಷಾಂತರವು ಸ್ವಲ್ಪಮಟ್ಟಿಗೆ ಅರ್ಥವನ್ನು ಮಂಕುಗೊಳಿಸಿದೆ; ಆದರೆ ಆಲೋಚನೆಯು 'ಬಿಡುಗಡೆ' ಎಂದು ಕಂಡುಬಂದಲ್ಲಿ ಎಲ್ಲವೂ ಸ್ಪಷ್ಟವಾಗುತ್ತದೆ. ನಮ್ಮ ಕರ್ತನ ಮರಣವು ಅನ್ಯಜನರಿಗಿಂತ ಇಸ್ರಾಯೇಲ್ಯರಿಗೆ ಹೆಚ್ಚು ಅರ್ಥವುಳ್ಳದ್ದಾಗಿದೆ. ಇದು ಆದಾಮನ ಅಪರಾಧಗಳಿಂದ ಮತ್ತು ಅದರ ದಂಡನೆಯಿಂದ, ಮರಣದಿಂದ ವಿಮೋಚನೆ ಮಾತ್ರವಲ್ಲ, ಆದರೆ ಇದಕ್ಕೂ ಹೆಚ್ಚಾಗಿ ಧರ್ಮಶಾಸ್ತ್ರದ ಒಡಂಬಡಿಕೆಗಳನ್ನು ಪಾಲಿಸುವಲ್ಲಿ ವಿಫಲವಾದ ಕಾರಣ ಆ ಜನಾಂಗದ ಮೇಲೆ ಇದ್ದ 'ಶಾಪ' ಅಥವಾ ದಂಡನೆಗಳಿಂದ ಯೆಹೂದ್ಯರಿಗೂ ಬಿಡುಗಡೆ ಯಾಗಿದೆ. ಇಸ್ರಾಯೇಲ್ಯರು ಉಳಿದ ಮಾನವರಂತೆ ಆದಾಮನ ಮೇಲೆರಗಿ ಬಂದ ಶಾಪಕ್ಕೆ ತುತ್ತಾಗಿದ್ದರು; ಆದರೆ ಇದರೊಂದಿಗೆ ಅವರು ಮೋಶೆಯ ಮಧ್ಯಸ್ಥಿಕೆಯಲ್ಲಿ ಸಿನಾಯ್ ಬೆಟ್ಟದಲ್ಲಿ ಅವರಿಗೆ ನೀಡಲ್ಪಟ್ಟಿದ್ದ ಧರ್ಮಶಾಸ್ತ್ರದ ವಿಧಿಗಳನ್ನು ತಪ್ಪದೇ ಪಾಲಿಸಲು ವಿಫಲರಾದ ಕಾರಣವಾದ 'ಶಾಪ'ಕ್ಕೂ ತುತ್ತಾಗಿದ್ದರು. ಆಜ್ಞೆಗಳಿಂದ ಶಾಪ ಹೊಂದಿ, ಬೀಳುವಿಕೆಯಿಂದ ಗಾಯಗೊಂಡಿ ಕ್ರಿಸ್ತನು ನಮ್ಮನ್ನು ವಿಮೋಚಿಸುತ್ತಾನೆ, ಒಂದೇ ಸಾರಿಗೆ. ಈ ಬಗ್ಗೆ ಸಂಗೀತವೊಂದರಲ್ಲಿ ಹೀಗೆ ಉಲ್ಲೇಖಿಸಲಾಗಿದೆ :

***" Cursed by the Law, bruised by the fall,***
***Christ hath redeemed us, once for all "***

**"ಧರ್ಮಶಾಸ್ತ್ರದಿಂದ ಶಾಪಗ್ರಸ್ತರಾದವರನ್ನು,**
**ಬೀಳುವಿಕೆಯಿಂದ ಗಾಯಗೊಂಡವರಾದ**
**ನಮ್ಮನ್ನು ಕ್ರಿಸ್ತನು ಒಮ್ಮೆಲೇ ವಿಮೋಚಿಸಿದ್ದಾನೆ"**

(10) **"ಕೆಲವರು** ತಾವು ಯಾತನೆಯ ಯಂತ್ರಕ್ಕೆ ಕಟ್ಟಲ್ಪಟ್ಟಾಗ ಶ್ರೇಷ್ಠಪುನರುತ್ಥಾನವನ್ನು ಹೊಂದುವುದ ಕ್ಕೋಸ್ಕರ ಬಿಡುಗಡೆ ಬೇಡವೆಂದು ಹೇಳಿ ಮುರಿಸಿಕೊಂಡು ಸತ್ತರು**"** (ಇಬ್ರಿಯ 11:35). ಈ ಒಂದು ಸಂಧರ್ಭದಲ್ಲಿ ಅನುವಾದಕರು ಈ ಮಾತನ್ನು ಸರಿಯಾದ ಅರ್ಥದಲ್ಲಿ ತರ್ಜುಮೆಗೊಳಿಸಿದಾರೆ; ಬಹುಶಃ ಅವರು ಮೊದಲಿಗೆ 'ರಿಡೆಂಪ್ಷನ್' (ವಿಮೋಚನೆ) ಎಂಬುದಾಗಿ ತರ್ಜುಮೆಗೊಳಿಸಲು ಪ್ರಯತ್ನಿಸಿದ್ದಿರಬಹುದು. ಆದರೆ, **"**ವಿಮೋಚನೆ ಬೇಡ**"** ಎಂಬುದು ವಿಲಕ್ಷಣವಾದ ಓದುವಿಕೆ ಆಗುವುದೆಂದು ಗ್ರಹಿಸಿ ವಿಮೋಚನೆ (ರಿಡೆಂಪ್ಷನ್)ಗೆ ಬದಲಾಗಿ ಬಿಡುಗಡೆ (ಡೆಲಿವರೆನ್ಸ್) ಎಂಬ ಪದವನ್ನು ಹಾಕಿದ್ದಾರೆ.

ಹಳೆ ಒಡಂಬಡಿಕೆಯಲ್ಲಿ 'ರಿಡೀಮ್', 'ರಿಡೀಮ್ಡ್' 'ರಿಡೀಮರ್' ಮತ್ತು 'ರಿಡೆಮ್ಷನ್' ಇವುಗಳು ಸಾಮಾನ್ಯವಾಗಿ ಮೂಲ ಇಬ್ರಿಯ ಭಾಷೆಯ ಪದಗಳ ಒಳ್ಳೆಯ ಭಾಷಾಂತರಗಳಾಗಿವೆ. ಉದಾಹರಣೆಗೆ: **"**ಗಾಲ್**"** ಎಂಬುದು ಮುಯ್ಯಿ ತೀರಿಸುವುದರ ಅಥವಾ ಪುನಃಪಾವತಿಸುವ ಮೂಲಕ ಉಂಟುಮಾಡುವ 'ಮುಕ್ತಿ'ಯನ್ನು ಸೂಚಿಸುತ್ತದೆ**"** – ಯಂಗ್.

**"ನಾನಂತೂ ನನ್ನ ವಿಮೋಚಕನು ಜೀವಿಸುತ್ತಾನೆಂದು ಬಲ್ಲೆನು"** – ಯೋಬ 19:35.

**"ದೇವರು ತಮ್ಮ ಶರಣನೂ ಪರಾತ್ಪರನು ತಮ್ಮ ವಿಮೋಚಕನೂ ಆಗಿದ್ದಾನೆ** – ಕೀರ್ತನೆ 78:35.

**" ನಿನ್ನ ಜೀವವನ್ನು ನಾಶನದಿಂದ ತಪ್ಪಿಸುವವನೂ .... ."** – ಕೀರ್ತನೆ 103:4).

**"ಅವನ ಬಂಧುಗಳಲ್ಲಿ ಯಾರಾದರೂ ಈಡುಕೊಟ್ಟು ಅವನನ್ನು ಬಿಡಿಸಬಹುದು, ಅವನ ದೊಡ್ಡಪ್ಪ ಚಿಕ್ಕಪ್ಪಂದಿರಾಗಲೀ ಇವರ ಮಕ್ಕಳಾಗಲೀ ಅಥವಾ ಸಮೀಪಬಂಧುಗಳಲ್ಲಿ ಯಾರೇ ಆಗಲೀ ಈಡು ಕೊಟ್ಟು ಅವನನ್ನು ಬಿಡಿಸಬಹುದು"** – ಯಾಜಕ 25:48,49.

**"ಲಾಭಪಡೆಯದೆ ನಿಮ್ಮನ್ನು ಮಾರಿದೆನು, ಹಣ ತೆಗೆದುಕೊಳ್ಳದೆ ನಿಮ್ಮನ್ನು ಬಿಡುಗಡೆ ಮಾಡುವೆನು"** – ಯೆಶಾಯ 52:3.

**"ನಿಮಗೆ ಬಿಡುಗಡೆಯಾದದ್ದು ಬೆಳ್ಳಿ ಬಂಗಾರ ಮೊದಲಾದ ನಶಿಸಿಹೋಗುವ ವಸ್ತುಗಳಿಂದಲ್ಲ"** – 1 ಪೇತ್ರ 1:18.

**"ಆದರೆ ಚಿಯೋನಿಗೂ ದ್ರೋಹವನ್ನು ಬಿಟ್ಟುಬಿಟ್ಟ ಯಾಕೋಬ್ಯರ ಬಳಿಗೂ ವಿಮೋಚಕನಾಗಿ ಬರುವನು"** – ಯೆಶಾಯ 59:20.

ನಮ್ಮ ಇಂಗ್ಲಿಷ್ ನ್ಯೂ ಟೆಸ್ಟಮೆಂಟ್‌ನಲ್ಲಿ 'ರಿಡೆಂಪ್ಷನ್' ಎಂಬ ಪದವು ಕಂಡುಬರುವ ಸಂಧರ್ಭಗಳನ್ನು ಉಲ್ಲೇಖಿಸುವ ನಮ್ಮ ಉದ್ದೇಶವೇನೆಂದರೆ, ಇದರ ಮೂಲ ಗ್ರೀಕ್ ಪದವು ಈಡುಬಲಿ ಬೆಲೆಯ ಆಲೋಚನೆಯನ್ನು ಹೊಂದಿಲ್ಲದ ಕಾರಣ ಓದುಗರು ಕೆಲವೊಂದು ಕುತರ್ಕಿ ಬರಹಗಾರರ ಮತ್ತು ಬೋಧಕರುಗಳ ವಂಚನೆಯ ಪದ್ಧತಿಗಳಿಗೆ ಒಳಗಾಗದಂತೆ ಅವರನ್ನು ಕಾಪಾಡುವುದು. ಈಡುಬಲಿಯನ್ನು ನಿರಾಕರಿಸಿ, ಈ ಲೋಕವು ನಮ್ಮ ಕರ್ತನ ಮರಣದಿಂದ ಕೊಂಡುಕೊಳ್ಳಲ್ಪಟ್ಟಿತೆಂಬುದನ್ನು ನಿರಾಕರಿಸಿ, ಇವರುಗಳು 'ರಿಡೀಮ್' (ವಿಮೋಚನೆ) ಎಂಬ ಪದವು 'ಡೆಲಿವರ್' (ಬಿಡುಗಡೆ) ಎಂಬ ಪದದ ಬದಲಾಗಿ ಉಪಯೋಗಿಸಿರುವ ಪರಿಚ್ಛೇದಗಳನ್ನು ಉದಹರಿಸಲು ಒಲವುತೋರುತ್ತಾರೆ ಮತ್ತು 'ಬಿಡುಗಡೆ' (ಡೆಲಿವರ್) ಎಂಬುದು ಮಾತ್ರವೇ ಎಲ್ಲಾ ಸಂಧರ್ಭಗಳಲ್ಲಿಯೂ 'ರಿಡೀಮ್' (ವಿಮೋಚನೆ) ಎಂಬುದರ ಅರ್ಥ ಎಂಬ

ಊಹೆಯನ್ನು ನೀಡುತ್ತಾರೆ. ನಮ್ಮ ಅನುವಾದಕರ ಈ ಅಲಕ್ಷ್ಯಮನೋಭಾವದ ದೃಷ್ಟಿಯಿಂದ ಸುರಕ್ಷಿತವಾದ ಮತ್ತು ಸರಿಯಾದ ಒಂದೇ ಪದ್ಧತಿಯೆಂದರೆ, ಇಂಥಾಃ ಪ್ರಕರಣಗಳಲ್ಲಿ ಪದದ ಅರ್ಥದ ಮೇಲೆ ಹೆಚ್ಚು ಅವಲಂಬನೆಯಿರುವುದರಿಂದ ಮೂಲ ಪದವನ್ನೂ ಅದರ ಅರ್ಥವನ್ನೂ ಕಂಡುಕೊಳ್ಳುವುದು.

ಅನೇಕ ಸಂಧರ್ಭಗಳಲ್ಲಿ, ನೂತನ ಒಡಂಬಡಿಕೆಯ ಬರಹಗಾರರ ಮೂಲಕ ಪವಿತ್ರಾತ್ಮನು ನಮ್ಮ ಜನಾಂಗವನ್ನು ಕೊಂಡುಕೊಂಡ ಮತ್ತು ಅದಕ್ಕಾಗಿ ನೀಡಿದ ಸೂಕ್ತಬೆಲೆಯ ಭಾವನೆಯನ್ನು ಕೇವಲ ವಾಣಿಜ್ಯ ವ್ಯವಹಾರದ ಲೇವಾದೇವಿ ಅಥವಾ ಕೊಂಡುಕೊಂಡ ವಸ್ತುವಿನ ಬೆಲೆಯ ನೆಲೆಯಲ್ಲಿ ಪ್ರಬಲವಾದ ಮಾತುಗಳಲ್ಲಿ ವ್ಯಕ್ತವಾಗಿದೆ. ಈ ಪದವನ್ನು ಉಪಯೋಗಿಸಿರುವ ಇತರೆ ಪ್ರಕರಣಗಳಲ್ಲಿ ಈ ಪದವು ಕೇವಲ 'ಬಿಡುಗಡೆ' (ಡೆಲಿವರೆನ್ಸ್) ಎಂಬ ಅರ್ಥನೀಡುತ್ತದೆ ಎಂಬುದನ್ನು ನಾವು ತೋರಿಸಿ ಕೊಟ್ಟಿದ್ದೇವೆ. ಅಂಥಾಃ ಬಿಡುಗಡೆಯಲ್ಲಿ ಯಾವುದನ್ನೂ ಈಡುಬಲಿಯ (Ransom or anti-lutron - corresponding price) ಫಲವಾಗಿ ಹೊಂದಿ ಕೊಳ್ಳಲಾಗುವುದು ಎಂಬ ಆಲೋಚನೆಗೆ ವಿರೋಧವಿಲ್ಲ. ಆದರೆ ಸಾಮಾನ್ಯವಾಗಿ ಈ ಸಂದರ್ಭವು ಸ್ಪಷ್ಟವಾಗಿ ವಿಮೋಚನೆಯು ಆ ರೀತಿಯಾಗಿ ಹೊಂದಿಕೊಳ್ಳಲಾಗುತ್ತದೆ ಎಂದು ಪ್ರಸ್ತಾಪಿಸುತ್ತದೆ.

ನಮ್ಮ ಕರ್ತನು ತನ್ನ ಸ್ವಂತ ಪ್ರಾಣವನ್ನು ತೆರುವುದರ ಮೂಲಕ ಮತ್ತು ತನ್ನ ಪರಿಶುದ್ಧ ರಕ್ತವನ್ನು ಚೆಲ್ಲುವುದರ ಮೂಲಕ ಈ ಲೋಕವನ್ನು ಕೊಂಡುಕೊಂಡಿದ್ದಾನೆ ಎಂಬ ಭರವಸೆಯು ದೇವರ ವಾಕ್ಯದ ಮಾತುಗಳಲ್ಲಿ ವಿಶದವಾಗಿರುವಾಗ, ಮರಣ ದಂಡನೆಯಿಂದ ವಿಮೋಚನೆಯು ದೇವರ ನ್ಯಾಯದ ಉಲ್ಲಂಘನೆ ಯಾಗಲಾರದು, ಆದರೆ ಪ್ರೀತಿಯ ಮೂಲಕ ಅದರ ತೃಪ್ತಿಪಡಿಸುವುದಾಗಿದೆ ಎಂದು ದೇವಜನರು ತಿಳಿದುಕೊಳ್ಳುವಂತೆ ಅವರಿಗೆ ಪೂರ್ಣ ಭರವಸೆಯನ್ನು ನೀಡುವ ಸಲುವಾಗಿದೆ. ಇದು ನಮಗೆ ಬದಲಾಗಲಾರದ ದೇವರ ನಿಯಮಗಳ ಬಗ್ಗೆಯೂ ಭರವಸೆ ನೀಡುವುದಾಗಿದೆ. ಅದನ್ನು ಮುರಿಯಲು ಸಾಧ್ಯವಿಲ್ಲ, ಆದರೆ ವಿಮೋಚನೆಯು ಅಂಥಾಃ ದುಬಾರಿ ಬೆಲೆಯಿಂದ ಒದಗುವುದು. ದೇವರ ಪ್ರೀತಿ ಮತ್ತು ನ್ಯಾಯವು ಪೂರ್ಣವಾದ ಸಾಮರಸ್ಯದೊಂದಿಗೆ ಕಾರ್ಯವೆಸಗುವುದು ಎಂಬ ಭರವಸೆಯು ನಮಗೆ ಈ ತತ್ವಗಳೇ ಈ ವಿಶ್ವವನ್ನು ಸದಾಕಾಲ ಆಳುವುದು ಮತ್ತು ಮಧ್ಯಸ್ತಗಾರನಾದ ಯೇಸುವಿನ ಮೂಲಕ ದೇವರ ಸಾಂಗತ್ಯಕ್ಕೆ ಬರುವವರೆಲ್ಲರ ಮೇಲಿನ 'ಕ್ರೋಧ' ಮತ್ತು 'ಶಾಪ'ವನ್ನು ತೆಗೆದುಹಾಕುವುದು ಎಂಬ ಪೂರ್ಣವಿಶ್ವಾಸವನ್ನು ನೀಡುವುದಾಗಿದೆ. ಈ ಕೃಪೆಯನ್ನು ಹೊಂದಿಕೊಳ್ಳದವರೆಲ್ಲರನ್ನು ಎರಡನೆಯ ಮರಣದಲ್ಲಿ ನುಂಗಲ್ಪಡುವರು ಯಾಕೆಂದರೆ "ದೇವರ ಕೋಪವು ಅವರ ಮೇಲೆ ನೆಲೆಗೊಂಡಿರುವುದು" – ಯೋಹಾನ 3:36, ಅ.ಕೃ. 3:23, ಪ್ರಕಟನೆ 22:3.

'ರಿಡೀಮ್ಡ್'ದ ವಿಷಯದಲ್ಲಿ, ದೇವರ ಪ್ರೀತಿ ಮತ್ತು ನ್ಯಾಯವು ಯಾವ ರೀತಿಯಲ್ಲಿ ನಮ್ಮ ಪಾಪ ಕ್ಷಮಾಪಣೆಯ ವಿಷಯದಲ್ಲಿ ವ್ಯವಸ್ಥೆಮಾಡಿದೆಯೋ ಅದು ಮುಖ್ಯವಲ್ಲ, ಯಾಕೆಂದರೆ ಅದು ಅವರಿಗೆ ಉಚಿತವಾದ ಕೊಡುಗೆ, ಅದನ್ನು ಇದ್ದಂತೆ ಪಡೆದುಕೊಳ್ಳಬೇಕಷ್ಟೆ. ನಾವು ಅದನ್ನು ಕೊಂಡುಕೊಳ್ಳಲಾರೆವು, ಅಥವಾ ನಾವು ಈ ಕೊಡುಗೆಗಾಗಿ ದೇವರಿಗೆ ಪರಿಹಾರ ಸಲ್ಲಿಸಲಾರೆವು. ಆಗ ಉದ್ಭವಿಸುವ ಪ್ರಶ್ನೆ ಏನೆಂದರೆ, ಅದು ನಮಗೆ ಕೊಡುಗೆಯಾದರೆ, ನಾವು ಆ ಬಗ್ಗೆ ತನಿಖೆಮಾಡುವ ಕಷ್ಟ ಏಕೆ ಪಡಬೇಕು? ಕರ್ತನು ಏತಕ್ಕೆ ಈ ಕೊಡುಗೆಯು ನಮಗೆ ಒಂದು ಕ್ರಯದ ಮೇರೆಗೆ, ಕ್ರಿಸ್ತನ ಮರಣದ ಬೆಲೆಯಿಂದಾಗಿ ದೊರೆಯಿತೆಂಬುದನ್ನು ಬಯಲುಮಾಡಲು ನಿರ್ಧಿಷ್ಟತೆ ಉಳ್ಳವನಾಗಿದ್ದಾನೆ? ದೇವರ ವಾಕ್ಯಗಳು ಯಾಕೆ ಆತನ ಮರಣವೇ ಇದಕ್ಕೆ ತೆರಬೇಕಾದ ಸರಿಯಾದ ಕ್ರಯ, ನಮ್ಮ ಪಾಪ ಪರಿಹಾರಕ್ಕಾಗಿ ಸಲ್ಲಿಸಲೇ ಬೇಕಾಗಿದ್ದ ಅನುರೂಪವಾದ ಬೆಲೆಯೆಂದು ನಿರ್ಧಿಷ್ಟವಾಗಿ ಹೇಳುತ್ತವೆ? ಇದಕ್ಕೆ ಉತ್ತರವಾಗಿ ನಾವು ಹೇಳುವುದೇನೆಂದರೆ, ದೇವರು ಈ ರೀತಿಯಲ್ಲಿ ನಮಗೆ ನಮ್ಮ ಪರವಾದ ಆತನ ಕಾರ್ಯಾಚರಣೆಗಳ ವಿವರಗಳನ್ನು ನಾವು ಆತನನ್ನೂ ಆತನ ನಿಯಮಗಳನ್ನೂ, ಅದರ ಸಂಘಟನೆಗಳನ್ನೂ, ಕಾರ್ಯವೈಖರಿಯನ್ನೂ ಅರ್ಥಮಾಡಿಕೊಳ್ಳಲಿ ಎಂಬ ಉದ್ಧೇಶದಿಂದ ನೀಡುವವನಾಗಿದ್ದಾನೆ. ಆತನು ಪಾಪದ ವಿರೋಧವಾದ ತನ್ನ ಸ್ವಂತ ದಂಡನೆಯ ತೀರ್ಪನ್ನು ರದ್ದುಪಡಿಸುತ್ತಿಲ್ಲ ಅಥವಾ ಬದಿಗಿಡುತ್ತಿಲ್ಲ – ಪಾಪವು ನಿಷಿದ್ದವಾದುದಲ್ಲ, ಅನುಮತಿಸಲ್ಪಟ್ಟಿದೆ, ಕ್ಷಮಿಸಬಹು ದಾದದ್ದು ಎಂದು ಹೇಳುತ್ತಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಆತನು ಇದನ್ನು ನಮಗೆ ವಿವರಿಸುವವನಾಗಿದ್ದಾನೆ. ಆತನ ನೀತಿನಿರ್ಣಯವು ನಿರಪೇಕ್ಷವಾದುದು. ಆತನ ಪ್ರೀತಿಯು ನ್ಯಾಯವನ್ನು ಮೀರಿಸುವ ಅಥವಾ ಉಚ್ಚಾಟಿಸುವಂಥಾಃ ಘರ್ಷಣೆಯನ್ನುಂಟುಮಾಡುವ ಯಾವುದೇ ಸಾಧ್ಯತೆಗಳಿಲ್ಲ. ಪಾಪದ ಮತ್ತು ಪಾಪಿಗಳ ವಿರೋಧವಾದ ಆತನ ಈ ನ್ಯಾಯದಂಡನೆಯನ್ನು ಬದಿಗಿರಿಸಬಹುದಾದ ಒಂದೇ ಒಂದು ಮಾರ್ಗವೆಂದರೆ ಸೂಕ್ತವಾದ ಬೆಲೆತೆತ್ತು – ಈಡುಬಲಿಯ ಮೂಲಕವಾಗಿ ನ್ಯಾಯದ ಅಗತ್ಯತೆಯನ್ನು ಪೂರೈಸುವುದು. ಮಾನವರು ಪಾಪಮಾಡಿದ್ದಾರೆ ಮತ್ತು ಅದರ ದಂಡನೆಯಾದ ಮರಣಕ್ಕೆ ಗುರಿಯಾಗಿದ್ದಾರೆ ಮತ್ತು ಮರಣವನ್ನು ಅಪ್ಪುವವರಾಗಿದ್ದಾರೆ. ಕೇವಲ ದೇವರ ಪ್ರೀತಿ ಮತ್ತು ಕರುಣೆಗಳು ಒದಗಿಸಿಕೊಡಬಹುದಾದ ತಂದೆಯಾದ

ಆದಾಮನ ಬದಲಿ ಅಲ್ಲದೆ ಆತನಿಗೆ ಬೇರೆ ಯಾವುದೇ ನಿರೀಕ್ಷೆ ಇರುವುದಿಲ್ಲ. ಈ ಬದಲಿಯು ನಾವು ಕಂಡುಕೊಂಡಂತೆ ಆದಾಮನ ಸ್ವಭಾವವನ್ನೇ, ಅಂದರೆ ಮಾನವ ಸ್ವಭಾವವನ್ನೇ ಹೊಂದಿರಬೇಕು. ಈ ಬದಲಿಯೂ ಪಾಪಮಾಡುವ ಪೂರ್ವದಲ್ಲಿದ್ದ ಆದಾಮನಂತೆಯೇ ಪಾಪದಿಂದ ಮುಕ್ತನಾಗಿರಬೇಕು, ಶಾಪದಿಂದ ಮುಕ್ತನಾಗಿರಬೇಕು, ಕ್ರೋಧದಿಂದ ಮುಕ್ತನಾಗಿರಬೇಕು; ಪವಿತ್ರನೂ, ನಿರುಪದ್ರವಿಯೂ, ಪಾಪದಿಂದಲೂ, ಪಾಪಿಗಳಿಂದಲೂ ಪ್ರತ್ಯೇಕಿಸಲ್ಪಟ್ಟವನೂ, ಅದೇರೀತಿಯಲ್ಲಿ ದೇವರಿಂದ ಅಂಗೀಕೃತನೂ ಆಗಿರತಕ್ಕದ್ದು. ಹೇಗೆ ಆದಾಮನು ಪಾಪ ಮಾಡುವ ಮೊದಲು ಇದ್ದನೋ ಅದೇ ಪ್ರಕಾರವಾಗಿ ಇರತಕ್ಕದ್ದು.

ನಮ್ಮ ಕರ್ತನಾದ ಯೇಸುಕ್ರಿಸ್ತನು ಮಾಂಸಶರೀರಧಾರಿ (ಅದು ಪಾಪಮಯ ಶರೀರವಲ್ಲ) ಯಾದುದ್ದನ್ನು ನಾವು ನೋಡಿದ್ದೇವೆ. ಅದು ಪವಿತ್ರವೂ, ನಿರುಪದ್ರವಿಯೂ, ಪಾಪಿಗಳಿಂದ ಪ್ರತ್ಯೇಕವಾದುದೂ ಆಗಿದೆ. (ನಾಲ್ಕನೆಯ ಅಧ್ಯಾಯ ನೋಡಿರಿ). ನಮ್ಮ ಕರ್ತನಾದ ಯೇಸುವು ಈ ರೀತಿಯಲ್ಲಿ ಒಬ್ಬ ಸರ್ವ ಸಂಪೂರ್ಣನಾದ ಸಮರ್ಪಕ ವ್ಯಕ್ತಿಯಾಗಿದ್ದನು, ಪ್ರಥಮ ಮಾನವನ ಪ್ರತಿರೂಪನಾಗಿದ್ದನು ಮತ್ತು ಈ ರೀತಿಯಾಗಿ ಆತನು ಆಗಲೇ ನಮ್ಮ ವಿಮೋಚಕನೂ, ನಮ್ಮಗಳ ಸಲುವಾಗಿ ಪ್ರಾಣ ಕೊಡಲೂ ಮತ್ತು ಆದಾಮನ ಮತ್ತು ಆತನ ಜನಾಂಗದವರು ಕಳಕೊಂಡ ಎಲ್ಲಾ ಮಾನವ ಹಕ್ಕುಗಳನ್ನು ಕೊಂಡುಕೊಂಡು ಅವರ ವಿಮೋಚನೆಗೆ ಸಿದ್ಧನಾದ ಸ್ವಯಂ ಈಡುಬಲಿಯೂ ಆಗಿದ್ದನು ಎಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ನಮ್ಮ ಕರ್ತನಾದ "ಯೇಸು ಕ್ರಿಸ್ತನು ಎಂಬ ಮನುಷ್ಯನು" ತನ್ನನ್ನು ಪ್ರತಿಷ್ಠಿಸಿಕೊಂಡನು, ಸ್ವಯಂ ಅರ್ಪಿಸಿಕೊಂಡನು, ಮಾನವನ ಪರವಾಗಿ ತನ್ನದೆಲ್ಲವನ್ನೂ ಬಿಟ್ಟುಕೊಟ್ಟನು. ಈ ವಿಷಯವಾದ ತನ್ನ ಬೋಧನೆಗಳಲ್ಲಿ ಆತನು ಇವುಗಳನ್ನು ಸ್ಪಷ್ಟವಾಗಿ ಮುಂದಿಟ್ಟಿದ್ದಾನೆ. ಹೊಲದಲ್ಲಿ ನಿಧಿಯನ್ನು ಕಂಡುಕೊಂಡ ಮತ್ತು ತನ್ನದೆಲ್ಲವನ್ನೂ ಮಾರಿಕೊಂಡು ಆ ಹೊಲವನ್ನು ಕೊಂಡುಕೊಂಡ ಆ ವ್ಯಕ್ತಿಯನ್ನು (ಮತ್ತಾಯ 13:44) ಆತನು ಪ್ರತಿನಿಧಿಸುವವನಾಗಿದ್ದಾನೆ. ಹೊಲ ಎಂಬದು ಲೋಕದ ಮನುಕುಲವನ್ನು ಮತ್ತು ಭೂಮಿಯನ್ನು ಪ್ರತಿಬಿಂಬಿಸುತ್ತದೆ (ಎಫೆಸ 1:14). ಮಾನವಕುಲದ ಈ ಪ್ರಪಂಚದಲ್ಲಿ ನಮ್ಮ ಕರ್ತನು ನಿಧಿಯೊಂದನ್ನು ಕಂಡುಕೊಂಡನು – ಪ್ರವಾದನೀಯವಾಗಿ ಆತನು ವಿಮೋಚನಾ ಕಾರ್ಯದ ಫಲವನ್ನೂ, ಅನೇಕರು ಭ್ರಷ್ಟತೆಯ ಬಂಧನದಿಂದ ಬಿಡುಗಡೆ ಹೊಂದಿ ದೇವರ ಮಕ್ಕಳ ಸಂಪೂರ್ಣ ಸ್ವಾತಂತ್ರ್ಯವನ್ನು (ಇಂದಿನ ಕಾಲದಲ್ಲಿ ಸಭೆ ಮತ್ತು ಮುಂದೆ ಬರಲಿರುವ ಪ್ರಪಂಚದ ಅರ್ಹರ ಸಮಾಜ) ಹೊಂದುಕೊಳ್ಳುವುದನ್ನೂ ಕಂಡುಕೊಂಡನು. ಈ ನಿಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ಆತನು ಹೊಲವನ್ನು ಕೊಂಡುಕೊಂಡನು. ಈಡುಬಲಿಯ ಫಲದ ಬಗ್ಗೆ, ಮಿಲಿಯಾಂತರ ಯುಗದ ಅಂತ್ಯದಲ್ಲಿ ಅಂತಿಮವಾಗಿ ಪೂರೈಸಲಿರುವ ವಿಮೋಚನಾ ಕಾರ್ಯದ ಬಗ್ಗೆ ಮಾತನಾಡುವುದಾದರೆ, ಪ್ರವಾದಿಯು ನಮ್ಮ ಕರ್ತನು ಹೇಳುವ ಬಗ್ಗೆ ಮಾತನಾಡುತ್ತಾನೆ – "ತನ್ನ ಆತ್ಮವು ಅನುಭವಿಸಿದ ಶ್ರಮೆಯ ಫಲವನ್ನು ಕಂಡು ತೃಪ್ತನಾಗುವನು; ಧರ್ಮಾತ್ಮನಾದ ನನ್ನ ಸೇವಕನು ತನ್ನ ಜ್ಞಾನದ ಮೂಲಕ ಬಹು ಜನರನ್ನು ಧರ್ಮಮಾರ್ಗಕ್ಕೆ ತರುವನು; ಅವರ ಅಪರಾಧಗಳನ್ನು ಹೊತ್ತುಕೊಂಡು ಹೋಗುವನು" (ಯೆಶಾಯ 53: 11). ನಮ್ಮ ಕರ್ತನು ಈ ಲೋಕವನ್ನು ಕೊಂಡುಕೊಳ್ಳಲು ತನ್ನ ಜೀವವನ್ನೂ, ತನ್ನಲ್ಲಿರುವುದೆಲ್ಲವನ್ನೂ ಸಮರ್ಪಿಸುವಲ್ಲಿ ಸಂಪೂರ್ಣವಾಗಿ ತೃಪ್ತನಾಗಿದ್ದನು.

## ಮಾನವನಿಗಾಗಿ ಸಮರ್ಪಿಸಲ್ಪಟ್ಟ ಆ ಈಡುಬಲಿ ಯಾವುದು?

## What Ransom was Paid for Man ?

ನಮ್ಮ ಕರ್ತನು ನಮಗೇನು ಮಾಡಿದ್ದಾನೆ? ಆತನ ನಮ್ಮ ಸಲುವಾಗಿ ಯಾವ ಬೆಲೆಯನ್ನು ತೆತ್ತಿದ್ದಾನೆ? ಆತನು ನಮಗಾಗಿ ಒಪ್ಪಿಸಿಕೊಟ್ಟದ್ದೇನು? ಅಥವಾ ತನ್ನ ಮರಣದಲ್ಲಿ ಅರ್ಪಿಸಿದ್ದಾದರೂ ಏನು? ಅದೊಂದು **ಅನುರೂಪವಾದ ಬೆಲೆ**ಯಾದ ನಿಮಿತ್ತ, "ಎಲ್ಲರಿಗಾಗಿ ಈಡುಬಲಿಯ ಬೆಲೆ"ಯಾದುದರಿಂದ ಮಾನವನ ದಂಡನೆಗೆ ಸೂಕ್ತವಾಗಿ ಅನುಗುಣವಾಗಿರತಕ್ಕದ್ದು. ನಮ್ಮ ಕರ್ತನು ನಿತ್ಯವಾದ ಯಾತನೆಗೆ ಹೋಗಲಿಲ್ಲ; ಆದುದರಿಂದ, ಮಹಾ ನಿರ್ಣಾಯಕನು ನಿತ್ಯಯಾತನೆಯನ್ನು ಪಾಪದ ಸಂಬಳವನ್ನಾಗಿ ವಿಧಿಸಿರುವುದಿಲ್ಲ ಎಂಬುದಕ್ಕೆ ಇದು ನಮಗೆ ನಿರ್ವಿವಾದವಾದ ಸಾಕ್ಷ್ಯವಾಗಿದೆ. ನಿತ್ಯ ಯಾತನೆ ಎಂಬುದನ್ನು ಮಹಾ ವಿರೋಧಿಯು ಮಾನವರ ಮೇಲೆ ಹೇರಿರುವ ಕೇವಲ ಒಂದು ಭ್ರಮೆಯಾಗಿದೆ. ಆದುದರಿಂದ ನಮ್ಮ ಕರ್ತನು ತನ್ನ ಮಾನವನ ಸ್ಥಾನದಲ್ಲಿ, ಸ್ಥಳದಲ್ಲಿ ಮಾನವನ ಬದಲಿಯಾಗಿ ಪಟ್ಟ ಶ್ರಮೆಯು ಇಲ್ಲವಾದಲ್ಲಿ ಮಾನವರು ಅನುಭವಿಸಬೇಕಾಗಿದ್ದ ಪೂರ್ಣಪ್ರಮಾಣದ ದಂಡನೆಯಾಗಿತ್ತು. ಆದುದರಿಂದ, ಸದಾ ಹೆದರಿಕೆಯನ್ನುಂಟುಮಾಡುವ, ಪೀಡಿಸುವ ಮತ್ತು ಉದ್ಧೇಶಿತವಾದ ನಿತ್ಯವಾದ ಯಾತನೆಯೆಂಬುದು ಇಲ್ಲ ಎಂಬುದಕ್ಕೆ ಇದು ಸಕಾರಾತ್ಮಕವಾದ ಸಾಕ್ಷ್ಯವಾಗಿದೆ. ದೇವರ ವಾಕ್ಯದ ಸಾಕ್ಷ್ಯವನ್ನು ತಿಳಿದವರು "ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು" ಎಂಬ ಅದರಲ್ಲಿನ ಹೇಳಿಕೆಯನ್ನು ಮಾನ್ಯಮಾಡುತ್ತಾರೆ. ಕ್ರಿಸ್ತನು ಸಹ ನೀತಿವಂತನಾಗಿದ್ದು ಅನೀತಿವಂತರಿಗೋಸ್ಕರ ಪ್ರಾಣಕೊಟ್ಟು

ನಮ್ಮನ್ನು ದೇವರ ಬಳಿಗೆ ಸೇರಿಸುವುದಕ್ಕಾಗಿ ಒಂದೇ ಸಾರಿ ಪಾಪನಿವಾರಣೆಗೋಸ್ಕರ ಬಾಧೆಪಟ್ಟು ಸತ್ತನು. ಆತನು ನಮ್ಮ (ಸಭೆಯ) ನಿವಾರಣೆ ಮಾಡುವ ಯಜ್ಞವಾಗಿದ್ದಾನೆ [hilasmos-satisfaction-propitiation*]. ನಮ್ಮ ಪಾಪಗಳು ಮಾತ್ರವಲ್ಲದೆ, ಸಮಸ್ತ ಲೋಕದ ಪಾಪಗಳನ್ನು ಸಹಾ ನಿವಾರಣೆ ಮಾಡುತ್ತಾನೆ; "ಕರ್ತನು ನಮ್ಮೆಲ್ಲರ ಅಪರಾಧಗಳನ್ನು ತನ್ನ ಮೇಲೆ ಹೊತ್ತುಕೊಂಡಿದ್ದಾನೆ,, ಅವನ ಬಾಸುಂಡೆಗಳಿಂದ (ನಮ್ಮ ಸಲುವಾಗಿ ಆತನು ಅನುಭವಿಸಿದ ಯಾತನೆಗಳಿಂದ – ಮರಣದ ಪರ್ಯಂತರವಾದ ಸ್ವಾರ್ಥತ್ಯಾಗದಿಂದ) ನಮಗೆ ಗುಣವಾಯಿತು" ಈ ವಿಷಯಗಳಲ್ಲಿ ದೇವರ ವಾಕ್ಯಗಳ ದೃಷ್ಟಿಕೋನದಲ್ಲಿ ಎಂಥಾಃ ಸಾಮರಸ್ಯ ಮತ್ತು ಏಕರೂಪತೆ ಕಂಡು ಬರುತ್ತದೆಯಲ್ಲವೆ!. ದೇವರ ವಾಕ್ಯಕ್ಕೆ ಅನುಸಾರವಾಗಿರದ ಸೈತಾನನ ಭ್ರಮೆಗಳು ಎಷ್ಟು ಸ್ಪಷ್ಟವಾಗಿ ಸಂಪೂರ್ಣವಾಗಿ ಅಸಂಬದ್ಧತೆಯುಳ್ಳವುಗಳಾಗಿವೆ. ಇವುಗಳನ್ನು ನಮಗೆ ಸಂಪ್ರದಾಯಬದ್ಧವಾಗಿ ಮತ್ತು ಜನಪ್ರಿಯವಾಗಿ ಕೊಡಲ್ಪಟ್ಟಿವೆ ! – 1 ಕೊರಿಂಥ 15:3, 1 ಪೇತ್ರ 3:18, 1 ಯೋಹಾನ 2:2 ಮತ್ತು ಯೆಶಾಯ 53: 5,6.

ಪಾಪವು ಕೊಡುವ ಸಂಬಳ ಮರಣ" (ರೋಮಾ. 6:23), "ಪಾಪ ಮಾಡುವ ಪ್ರಾಣಿಯೇ ಸಾಯುವನು" (ಯೆಹೆಜ್ಕೇಲ 18:4) ಎಂಬುದಾಗಿ ಪರಿಶುದ್ಧ ಗ್ರಂಥವು ಹೇಳುತ್ತದೆ. ಮತ್ತು ಈ ಸಂಬಳವು ಯಾವ ರೀತಿಯಲ್ಲಿ ನಮಗಾಗಿ ಸಂಪೂರ್ಣವಾಗಿ ಸಂದಾಯವಾಯಿತು ಎಂಬುದನ್ನು "ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು" "ನಮಗೆ ನೀತಿವಂತರೆಂಬ ನಿರ್ಣಯವು ಉಂಟಾಗುವ ನಿಮಿತ್ತ ಜೀವದಿಂದ ಎಬ್ಬಿಸಲ್ಪಟ್ಟನು" (1 ಕೊರಿಂಥ 15:3 ; ರೋಮಾ. 4:25) ಎಂಬ ಹೇಳಿಕೆಗಳಲ್ಲಿ ನಾವು ನೋಡುತ್ತೇವೆ. ಆತನ ಮರಣವು ಈಡುಬಲಿಯ ಬೆಲೆಯಾಗಿದೆ, ಆದರೆ ಆತನು ಈಡುಬಲಿಯ ಬೆಲೆಯನ್ನು ಒದಗಿಸಿಕೊಟ್ಟದ್ದು ನಮಗೆ ನೀತಿನಿರ್ಣಯವನ್ನುಂಟುಮಾಡುವುದಿಲ್ಲ. ಮೊದಲಿಗೆ ನಮ್ಮ ಕರ್ತನು ಈ ಈಡುಬಲಿಯ ಬೆಲೆಯನ್ನು ನಮ್ಮ ಪರವಾಗಿ ತನ್ನ ತಂದೆಗೆ ಅರ್ಪಿಸಬೇಕು. ಆತನು ಪರಲೋಕಕ್ಕೆ ಏರಿಹೋದಾಗ ಇದನ್ನು ಮಾಡಿದನು. ಅಲ್ಲಿ ಆತನು ನಮಗಾಗಿ ತಂದೆಯ ಸಮ್ಮುಖದಲ್ಲಿ ಕಾಣಿಸಿಕೊಂಡನು. ಆತನು ಅಲ್ಲಿಯೇ ತನ್ನ ಈಡುಬಲಿ ಸಮರ್ಪಣೆಯ ಅರ್ಹತೆಯನ್ನು ತನ್ನ ಸಭೆಗೆ ಹೊರಿಸಿದನು. ಇದರ ಫಲವಾಗಿ ನೀತಿನಿರ್ಣಯ ವುಂಟಾಯಿತು (1) ಈಡುಬಲಿಯಿಂದ (2) ಅದನ್ನು ನಂಬುವವರ ಮತ್ತು ಅದಕ್ಕೆ ವಿಧೇಯರಾಗುವರೆಲ್ಲರಿಗೆ ಅನ್ವಯಮಾಡುವಂತೆ. ಹೀಗೆ ನಮ್ಮ ಪ್ರೀತಿಯ ವಿಮೋಚಕನ ಪುನರುತ್ಥಾನ ಮತ್ತು ದಿವ್ಯಾರೋಹಣವು ಆತನ ಮರಣ–ಸಮರ್ಪಣೆ ಇವುಗಳು ದೊರಕುವಂತೆ ಅವಶ್ಯವಾದ ಜೋಡಿಯಾಗಿವೆ.

"ರಕ್ತಧಾರೆಯಿಲ್ಲದೆ ಪಾಪಪರಿಹಾರ ಉಂಟಾಗುವುದಿಲ್ಲ" (ಇಬ್ರಿಯ 9:22). ದೇವರು ಧರ್ಮಶಾಸ್ತ್ರ ನಿರ್ವಹಿಸಬೇಕಾದ ಸಮಯದಲ್ಲೆಲ್ಲಾ ಆತನ ವ್ಯವಸ್ಥೆಯ ಈ ಲಕ್ಷಣದ ಒತ್ತಾಸೆ ನೀಡುವಂತೆ ಹೋರಿ ಮತ್ತು ಆಡುಗಳ ರಕ್ತವನ್ನು ಮೊದಲಿಗೆ ವಿಧಿಸಿದನು; ಇವುಗಳು ಎಲ್ಲಾ ಕಾಲಗಳಲ್ಲಿಯೂ ಪಾಪವನ್ನು ದೂರಪಡಿಸುತ್ತದೆ ಎಂಬುದಕ್ಕಾಗಿ ಅಲ್ಲ, ಆದರೆ ಸೂಕ್ತಸಮಯದಲ್ಲಿ ಇವುಗಳನ್ನು ಇನ್ನೂ ಉತ್ತಮವಾದ ಬಲಿಯ ಉದಾಹರಣೆಗಳೆಂದು ಮಾನ್ಯ ಮಾಡುವಂತೆ ಮತ್ತು ಅದರ ಮೂಲಕ ಪಾಪವು ತೊಡೆದು ಹಾಕಲ್ಪಡುತ್ತದೆ ಮತ್ತು ಮರೆಮಾಡಲ್ಪಡುತ್ತದೆ ಎಂಬ ಕಾರಣಕ್ಕಾಗಿ. 'ರಕ್ತಧಾರೆ' ಎಂಬ ಹೇಳಿಕೆಯು ಸಾಧಾರಣ ಮರಣವನ್ನು, ಜೀವವು ಹರಿದು ಹೋಗುವುದನ್ನು ಸೂಚಿಸುತ್ತದೆಯಾದರೂ ಅದೊಂದು ಯಜ್ಞರೂಪವಾದ ಮರಣವಾಗಿದೆ ಮತ್ತು ಇದನ್ನು ಕೆಲವು ಸಮಯದಲ್ಲಿ ಸ್ವಾಭಾವಿಕ ಮರಣವೆಂದು ಕರೆಯುವುದಿಲ್ಲ. – ಕಠಿಣವಾಗಿ ಹೇಳಬೇಕಾದರೆ, ಯಾವುದೇ ಮರಣವೂ ಸ್ವಾಭಾವಿಕವಾದುದ್ದಲ್ಲ. ಪ್ರಕೃತಿಗೆ ಅನುಸಾರವಾಗಿ ಮಾನವನು ಜೀವಿಸಬೇಕಾಗಿದೆ; ಮರಣವು ಮಾನವನ ಅಸ್ಥಿತ್ವ ನಿಯಮದ ಉಲ್ಲಂಘನೆಯಾಗಿದೆ. ಇದು ಅಪರಾಧದ ಫಲವಾಗಿದ್ದು ಅದಕ್ಕೆ ಹೊಂದಿಕೊಂಡಿರುವ 'ಶಾಪವೂ', ದಂಡನೆಯೂ ಆಗಿದೆ.

ನ್ಯಾಯವನ್ನು ಕುರಿತಾಗಿ ಹೇಳುವುದಾದರೆ, ಯೆಹೂದ್ಯರು ನಮ್ಮ ಕರ್ತನನ್ನು ಬೇರೆ ಯಾವುದಾದರೂ ವಿಧದಲ್ಲಿ ಮರಣಕ್ಕೆ ಒಳಪಡಿಸಬಹುದಿತ್ತು ಮತ್ತು ನ್ಯಾಯದ ಅಗತ್ಯತೆಗಳು ಅಷ್ಟೇ ಸರಿಯಾಗಿ ಸಂದಾಯವಾಗುತ್ತಿತ್ತು. ಅಗತ್ಯವಾದ ಸಂಗತಿಯೆಂದರೆ ಅಪರಾಧಿ ಆತ್ಮದ ಬದಲಿಯಾಗಿ ಆತನ ನಿರ್ದೋಷ ಆತ್ಮದ (ಜೀವದ) ಒಪ್ಪಿಸಿಕೊಡುವಿಕೆ. ಇದರ ಅಸ್ಥಿತ್ವಕ್ಕೆ ಅಪರಾಧದ ನಿಮಿತ್ತ

---

* ಎರಡು ಗ್ರೀಕ್ ಪದಗಳನ್ನು propitiation ಎಂಬುದಾಗಿ ಭಾಷಾಂತರಿಸಲಾಗಿದೆ. ಪ್ರಸ್ತುತದಲ್ಲಿ hilasomos ಎಂಬುದನ್ನು propitiation ಎಂಬುದಾಗಿ ಸರಿಯಾದ ರೀತಿಯಲ್ಲಿ ತರ್ಜುಮೆಗೊಳಿಸಲಾಗಿದೆ ( 1 ಯೋಹಾನ 2:2, 4:10 ನೋಡಿರಿ). ಆದರೆ hilasterion ಎಂಬ ಮತ್ತೊಂದು ಗ್ರೀಕ್ ಪದವನ್ನು ಸಹಾ ತಪ್ಪಾಗಿ propitiation ಎಂದು ತಪ್ಪಾಗಿ ರೋಮಾ. 3:25ರಲ್ಲಿ ಅನುವಾದಿಸಲಾಗಿದೆ. ಇದು propitiatoryಯನ್ನು ಸೂಚಿಸುತ್ತದೆ. ಅಂದರೆ, ತೃಪ್ತಿಯ ಸ್ಥಳ ಅಥವಾ propitiation. "ಕೃಪಾಸ್ಥಾನ" ಅಥವಾ ಒಡಂಬಡಿಕೆಯ ಮಂಜೂಷವನ್ನು ಮರೆಮಾಡುವ ಸ್ಥಳವು ತೃಪ್ತಿಪಡಿಸುವ ಸ್ಥಳವಾಗಿತ್ತು. ಆದರೆ ಯಾಜಕರುಗಳು ಪ್ರಾಯಶ್ಚಿತ್ತ ಬಲಿಯ ರಕ್ತವನ್ನು hilasterion ಮೇಲೆ ಚಿಮುಕಿಸುವುದ ಮೂಲಕ hilasomos ನೆರವೇರಿಸಿದರು: ಅಂದರೆ ಆತನು ಜನರ ಪಾಪಗಳನ್ನು ಸಮಾಧಾನಗೊಳಿಸಿಕೊಂಡನು.

ಮುಟ್ಟುಗೋಲುಹಾಕಲ್ಪಟ್ಟಿದೆ. ಈಡುಬಲಿಯ ಲಕ್ಷಣಕ್ಕೆ ಸಂಬಂಧಿಸಿದಂತೆ ನಮ್ಮ ಕರ್ತನು ವ್ಯಕ್ತಿಗತವಾಗಿ ಗಾಯಗೊಳ್ಳುವ ಮತ್ತು ಆತನ ರಕ್ತವು ಅಕ್ಷರಶಃವಾಗಿ ಚೆಲ್ಲಿ ಅಥವಾ ಭೂಮಿಯ ಮೇಲೆ ಹರಿದುಹೋಗುವ ಅಗತ್ಯವಿದ್ದಿಲ್ಲ. ಪಾಪದ ಸಂಬಳ ಮರಣ ಮಾತ್ರ, ಅಸ್ಥಿತ್ವ ಇಲ್ಲದಿರುವಿಕೆ. ಅದು ನೆರವೇರಿದಾಗ ದಂಡನೆಯು ಸಂದಾಯವಾಯಿತು. ಶಿಲುಬೆಗೆ ಜಡಿಯುವುದು ಮತ್ತು ಪಕ್ಕೆಯನ್ನು ಇರಿಯುವುದು ಇವುಗಳು ಇತರ ಪರಿಶೀಲನೆಗಳಿಗೆ ಅವಶ್ಯಕ ಸಂಗತಿಗಳಾಗಿವೆ.

ಯಜ್ಞವೇದಿಯ ಬುಡದಲ್ಲಿ ಭೂಮಿಯ ಮೇಲೆ ಸುರಿಸಲ್ಪಟ್ಟ ರಕ್ತದಿಂದ ಮಾನವನು ಮಾತ್ರವೇ ಕೊಂಡುಕೊಳ್ಳಲ್ಪಡಲಿಲ್ಲ, ಭೂಮಿಯೂ ಸಹಾ ಇದರೊಂದಿಗೆ ಸೇರಿಸಲ್ಪಟ್ಟಿದೆ ಎಂಬುದನ್ನು ಪ್ರತಿನಿಧಿಸುತ್ತದೆ ಮತ್ತು ರಕ್ತವು ಇದರ ಮೇಲೆ ಚಿಮುಕಿಸಲ್ಪಟ್ಟಿದೆ. ಸಾರ್ವಜನಿಕವಾಗಿ ಶಿಲುಬೆಗೆ ಹಾಕುವುದರ ಅವಮಾನ ಮತ್ತು ಕಳಂಕವು ದುಷ್ಕರ್ಮಿಗಳಿಗಾಗಿ ಅಗತ್ಯವಾಗಿತ್ತು. ಯಾಕೆಂದರೆ, ನಮ್ಮ ಪರಲೋಕದ ತಂದೆಯು ನಮ್ಮ ಕರ್ತನ ವಿಧೇಯತ್ವದ ಪರೀಕ್ಷೆಯು ಉತ್ತುಂಗ ರೀತಿಯದ್ದಾಗಿರಬೇಕೆಂದು ನಿರ್ಧರಿಸಿದ್ದನು. ಆತನು ಮಾನವನಾಗಲು ಇಷ್ಟಪಡುತ್ತಾನೋ ಎಂಬುದನ್ನು ಮಾತ್ರವೇ ಆತನು ಪರೀಕ್ಷಿಸಿದ್ದಲ್ಲದೆ, ಅದರೊಂದಿಗೆ ಆತನು ಮಾನವನ ಈಡುಬಲಿಯ ಬೆಲೆಯಾಗಿ, ಆತನ ಬದಲಿಯಾಗಿ ಮರಣಹೊಂದಲು ಇಚ್ಛೆಪಡುತ್ತಾನೋ ಎಂಬುದನ್ನು ಸಹಾ ಪರೀಕ್ಷಿಸುತ್ತಾನೆ. ಮಾತ್ರವಲ್ಲದೆ, ಆತನು ಅವಮಾನದ ಅತಿರೇಕವನ್ನು ಸಹಾ ಸಹಿಸಿಕೊಳ್ಳಲು ಸಿದ್ಧನಾಗಿದ್ದಾನೋ ಮತ್ತು ಆ ರೀತಿಯಲ್ಲಿ ತನ್ನ ಅರ್ಹತೆಯನ್ನು ಅತ್ಯಂತ ಗರಿಷ್ಟವಾದ ಮಟ್ಟದಲ್ಲಿ ತನ್ನ ತಂದೆಯಿಂದ ಅತ್ಯಂತ ಉನ್ನತ ಸ್ಥಾನಕ್ಕೆ ಏರುವಂತೆ ಸಾಬೀತುಪಡಿಸುತ್ತಾನೋ ಎಂಬುದನ್ನು ಸಹಾ ತಂದೆಯು ಇಲ್ಲಿ ಪರೀಕ್ಷಿಸಿದನು.

ಇದರ ಬೆಳಕಿನಲ್ಲಿ ಅಪೋಸ್ತಲನು ಈ ಪ್ರಸ್ತಾಪವನ್ನು ಇಡುವವನಾಗಿದ್ದಾನೆ. ಆತನು ಯಾವ ರೀತಿಯಲ್ಲಿ ನಮ್ಮಗಳ ಸಲುವಾಗಿ ತನ್ನ ಪರಲೋಕದ ಮಹಿಮೆಯನ್ನು ಬಿಟ್ಟು ಮಾನವನಾದನು ಎಂಬುದನ್ನು – "ಆತನು ದೇವಸ್ವರೂಪನಾಗಿದ್ದರೂ, ದೇವರಿಗೆ ಸರಿಸಮಾನ ನಾಗಿರುವನೆಂಬ ಅಮೂಲ್ಯಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ತನ್ನನ್ನು ಬರಿದುಮಾಡಿಕೊಂಡು ದಾಸನರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು" (ಫಿಲಿಪ್ಪಿ 2:6–7) ಎಂಬ ಮಾತುಗಳೊಂದಿಗೆ "ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು. ಈ ಕಾರಣದಿಂದ ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಟವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ" (ಬಿರುದು, ಘನತೆ, ಗೌರವ) (ವಚನ 8,9). [ಈ ಮಾತುಗಳನ್ನು 1 ಕೊರಿಂಥ 15:27ರೊಂದಿಗೆ ಹೋಲಿಸಿರಿ].

'ನಂಬಿಕೆಯಿಂದಲೇ ನೀತಿ ನಿರ್ಣಯ' ಎಂಬುದಕ್ಕೆ ದೇವರ ವಾಕ್ಯದ ಪ್ರತಿಯೊಂದು ಉಲ್ಲೇಖವೂ – 'ನಾವು ಯೇಸುವಿನ ರಕ್ತದಿಂದ ನೀತಿನಿರ್ಣಯಹೊಂದಿದ್ದೇವೆ' ಮುಂತಾದವು ಹಿಂದಿನವುಗಳನ್ನು ಸಮರ್ಥಿಸುವ ಸಾಕ್ಷ್ಯಗಳಾಗಿವೆ – "ದೇವರು ಮನುಷ್ಯರ ಅಪರಾಧಗಳನ್ನು ಅವರ ಲೆಕ್ಕಕ್ಕೆ ಹಾಕದೆ ಲೋಕವನ್ನು ಕ್ರಿಸ್ತನಲ್ಲಿ ಸಮಾಧಾನಪಡಿಸಿಕೊಳ್ಳುತ್ತಿದ್ದಾನೆ" (2 ಕೊರಿಂಥ 5:19), ಅವರನ್ನು ತನಗೆ ಆರೋಪಿಸಿಕೊಳ್ಳುವಾಗ 'ಆತನು ನಮಗಾಗಿ ಸತ್ತು ಮತ್ತೆ ಜೀವಿತನಾಗಿ ಎದ್ದು ಬಂದನು' (2 ಥೆಸ. 4:14, 5:10 ಇವುಗಳನ್ನು ನೋಡಿರಿ). ವಿಮೋಚಕನು ಪಾಪಿಗಳ ಅಪರಾಧಗಳನ್ನು ತನ್ನ ಮೇಲೆ ಹೊತ್ತುಕೊಂಡನು. ನೀತಿವಂತಿಕೆಯನ್ನು ಬಯಸುವವ ರೆಲ್ಲರೂ ಆತನ ಸಮರ್ಪಣೆಯ ಅರ್ಹತೆಯ ಮೇರೆಗೆ ನೀತಿವಂತರೆಂದು ಅಂಗೀಕಾರ ಹೊಂದುವಂತೆ ಆತನು ನಮ್ಮ ಪಾಪಗಳ ನಿಮಿತ್ತ ಸಂಪೂರ್ಣವಾಗಿ ಅನುರೂಪವಾದ ಬೆಲೆಯನ್ನೇ ತೆತ್ತನು (ರೋಮಾ. 5:17–19 ನೋಡಿರಿ). ನಾವು ನೀತಿವಂತರಾಗುವ ಅಥವಾ ಸರಿಪಡಿಸಲ್ಪಡುವ ಅಗತ್ಯತೆ ಉಂಟೆಂಬ ಸತ್ಯವು ನಾವು ತಪ್ಪಿಹೋಗಿದ್ದೇವೆಂಬುದನ್ನು, ಅನೀತಿವಂತರಾಗಿದ್ದೆವು, ದೇವರ ದೃಷ್ಟಿಯಲ್ಲಿ ಅನ್ಯಾಯಗಾರರಾಗಿದ್ದೇವೆಂಬುದನ್ನು ಸಾಬೀತುಪಡಿಸುತ್ತದೆ. ಮಾನವರು ತಮ್ಮ ಪುಣ್ಯ ಕ್ರಿಯೆಗಳಿಂದ ತಮ್ಮನ್ನು ನೀತಿವಂತನೆಂದು ಸಮರ್ಥಿಸಿ ಕೊಳ್ಳಲು ಸಾಧ್ಯವಿಲ್ಲ ಎಂಬ ಸತ್ಯವು ಇಸ್ರಾಯೇಲ್ಯರಲ್ಲಿ ಅವರ ಧರ್ಮಶಾಸ್ತ್ರದಡಿಯಲ್ಲಿ ನಿರೂಪಿಸಲ್ಪಟ್ಟಿತು ಮತ್ತು ಈ ತಪ್ಪುಗಳು ಅಥವಾ ಪಾಪವು ಮಾನವರ ಸ್ವಭಾವದಲ್ಲಿಯೇ ಇದೆ ಎಂಬುದನ್ನು ಸಾಬೀತುಪಡಿಸಿತು; ಇವುಗಳಿಂದ ನಾವು ವಿಮೋಚಿಸಲ್ಪಡಬೇಕು ಮತ್ತು ನಿಷ್ಕಳಂಕನಾದ ವಿಮೋಚಕನ ಅರ್ಹತೆಯ ಮೇರೆಗೆ ನೀತಿವಂತರಾಗಿ ನಿರ್ಣಯ ಹೊಂದುವುದು ಅಗತ್ಯವಾಗಿದೆ ಎಂಬ ಅರ್ಥನೀಡುತ್ತದೆ.

ನೀತಿನಿರ್ಣಯ ಹೊಂದುವುದು ಎಂದರೆ ಸರಿಪಡಿಸುವುದನ್ನು ಸೂಚಿಸುತ್ತದೆ; ಆದರೆ ನಾವಿನ್ನೂ ಸರಿಪಡಿಸಲ್ಪಟ್ಟಿಲ್ಲ ಅಥವಾ ನಿಜವಾಗಿ ಪೂರ್ಣ ಸಮರ್ಪಕರಾಗಿಲ್ಲ. ಆದರೆ ನಾವು ಕ್ರಿಸ್ತನಲ್ಲಿ ನಂಬಿಕೆಯಿಡುವುದರ ಮೂಲಕ ಮತ್ತು ನಮಗಾಗಿ ಆತನು ಸಮರ್ಪಿಸಿದ ಯಜ್ಞವನ್ನು ನಾವು ಒಪ್ಪಿಕೊಂಡಿರುವ ಕಾರಣ

ನಮ್ಮನ್ನು ಕೇವಲ ಸರಿ ಅಥವಾ ಸಮರ್ಪಕರು ಎಂದು ಎಣಿಸಲಾಗಿದೆ. ಪರಿಶುದ್ಧ ಗ್ರಂಥದ ಎಲ್ಲಾ ಕಡೆಗಳಲ್ಲಿಯೂ ನಮ್ಮ ವಿಮೋಚಕನ ಈ ನೀತಿನಿರ್ಣಯದ ಶಕ್ತಿಯು ನಮ್ಮ ಪರವಾಗಿ ಆತನು ಮಾಡಿದ ಸಮರ್ಪಣೆಗೆ ಕಾರಣವೆನ್ನಲಾಗಿದೆ. ನಮ್ಮ ಸ್ವಂತ ಕ್ರಿಯೆಗಳು ನಮ್ಮನ್ನು ನೀತಿವಂತರನ್ನಾಗಿ ನಿರ್ಣಯಿಸಿರುವುದಿಲ್ಲ ಅಥವಾ ದೇವರ ಮುಂದೆ ನಮ್ಮನ್ನು ಅಂಗೀಕಾರಾರ್ಹರನ್ನಾಗಿ ಮಾಡಿರುವುದಿಲ್ಲ (ಗಲಾತ್ಯ 2:16 ಮತ್ತು ರೋಮಾ. 3:27,28 ನೋಡಿರಿ). ಧರ್ಮಶಾಸ್ತ್ರವು ಸಹಾ ತನ್ನ ಅಡಿಯಲ್ಲಿರುವವರನ್ನು ನೀತಿವಂತರು ಎಂದು ನಿರ್ಣಯಿಸಲಾರದು (ಗಲಾತ್ಯ 5:4, ರೋಮಾ. 3:20 ನೋಡಿರಿ). ಕ್ರಿಸ್ತನು ಪೂರೈಸಿದ ಕಾರ್ಯದಲ್ಲಿ ನಂಬಿಕೆಯಿಡುವುದು ಮಾತ್ರವೇ ನಮ್ಮನ್ನು ನೀತಿವಂತರೆಂದು ನಿರ್ಣಯಿಸುತ್ತದೆ (ಗಲಾತ್ಯ 2:17, 3:13,14; ರೋಮಾ. 4:24,25 ಇವುಗಳನ್ನು ನೋಡಿರಿ).

ಸತ್ಯವೇದದ ವಿವಿಧ ವಾಕ್ಯಗಳು ಹೆಚ್ಚು ಕಡಿಮೆ ನಾವುಗಳು ಪಾಪದಿಂದ ತೊಳೆಯಲ್ಪಟ್ಟ ಅಥವಾ ಶುದ್ಧೀಕರಿಸಲ್ಪಟ್ಟ ಬಗ್ಗೆ ಮಾತನಾಡುತ್ತವೆ. ಅಂಥಾಃ ವೇದ ಭಾಗಗಳೆಲ್ಲವೂ 'ಈಡುಬಲಿ' ಸಿದ್ಧಾಂತವನ್ನು ಸಮರ್ಥಿಸುತ್ತವೆ. ಯಾಕೆಂದರೆ, ಇದೇ ಸಂಬಂಧದಲ್ಲಿ ಅವುಗಳು 'ಶುದ್ಧೀಕರಿಸುವ ಶಕ್ತಿಯು ಯೇಸುವಿನ ರಕ್ತದಲ್ಲಿದೆ' – 'ನಮ್ಮ ಕರ್ತನ ಬಲಿದಾನದ ಅರ್ಹತೆ' ಎಂದು ನಿರ್ದಿಷ್ಟವಾಗಿ ಹೇಳುತ್ತವೆ – 1 ಯೊಹಾನ 1:7; ಪ್ರಕಟನೆ 1:5; 1 ಕೊರಿಂಥ 6:11; 2 ಪೇತ್ರ 2:22, ತೀತ 3:5; ಇಬ್ರಿಯ 9:14; 1 ಪೇತ್ರ 1:19.

ನೀತಿನಿರ್ಣಯವು ಸಂಕೇತಿಕವಾಗಿ ಪರಿಶುದ್ಧ ನಾರುಮಡಿಯ, ಶುದ್ಧವೂ, ಶ್ವೇತವರ್ಣದ್ದೂ ಆದ ನೈತಿಕತೆಯ ನಿಲುವಂಗಿಯಾಗಿ ಪ್ರತಿನಿಧಿಸಲ್ಪಟ್ಟಿದೆ. ನಮ್ಮ ಕರ್ತನು ತನ್ನ ಅಮೂಲ್ಯವಾದ ರಕ್ತದ ಮೂಲಕ ತನ್ನಲ್ಲಿ ನಂಬಿಕೆ ಇಡುವವರೆಲ್ಲರ ಅಪರಾಧಗಳನ್ನು ಇದರಿಂದ ಮುಚ್ಚಿಬಿಡುತ್ತಾನೆ. ನೀತಿವಂತಿಕೆಯ ಕಡೆಗೆ ನಮ್ಮ ಪಾಲಿನ ಎಲ್ಲಾ ಪ್ರಯತ್ನಗಳೂ ಕ್ರಿಸ್ತನ ಅರ್ಹತೆಯ ಹೊರತಾಗಿ ಸಾಂಕೇತಿಕವಾಗಿ ನಮ್ಮ ಸ್ವಂತ ನೈತಿಕತೆಯು 'ಹೊಲಸು ಬಟ್ಟೆ'ಯನ್ನು ಪ್ರತಿನಿಧಿಸುತ್ತದೆ. (ಯೆಶಾಯ 64:6 ನೋಡಿರಿ). ನಿಜ, ಕೆಲವೊಂದು ದೇವರ ವಾಕ್ಯಗಳು ದೇವರ ಆಜ್ಞೆಗಳಿಗೆ ವಿಧೇಯರಾಗುವ ಮೂಲಕ ನೀತಿವಂತಿಕೆ ಕಡೆಗಿನ ನಮ್ಮ ಪ್ರಯತ್ನವನ್ನು ಒಂದು ಶುದ್ಧಿ ಕಾರ್ಯವೆಂಬುದಾಗಿ ಸೂಚಿಸುತ್ತವೆ. ಇದು ನಮ್ಮ ಸಮಗ್ರ ಕ್ರೈಸ್ತ ಜೀವಿತದಲ್ಲಿ ಮುಂದುವರೆಯುತ್ತಾ ಇರುತ್ತದೆ. "ನಮ್ಮ ದೇಹವನ್ನು ಶುದ್ಧ ನೀರಿನಿಂದ ತೊಳಕೊಂಡಂತೆ" ಮತ್ತು "ಸಭೆಯನ್ನು ದೇವರ ವಾಕ್ಯವೆಂಬ ನೀರಿನಿಂದ ಶುದ್ಧೀಕರಿಸುವಂತೆ" ಎಂದು ಅಪೋಸ್ತಲನು ಹೇಳುವಂತೆ ಇವುಗಳು ನಮ್ಮ ಹೃದಯ ಶುದ್ಧೀಕರಣದ, ನಮ್ಮ ದೇಹದ ಕೊಳೆಯನ್ನು ತೆಗೆದು ಹಾಕುವುದರ ಉಚಿತವಾದ ಪ್ರಸ್ತುತಿಗಳು. ಈ ದೇವರ ವಾಕ್ಯಗಳು ದಿನನಿತ್ಯದ ಮತ್ತು ಜೀವನ ಕಾರ್ಯವನ್ನು ಸೂಚಿಸುತ್ತವೆ ಎಂದು ಬಹಳ ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಬಹುದು. ಆದರೆ ಆಲೋಚನೆಗಳ, ಮಾತುಗಳ ಮತ್ತು ಕ್ರಿಯೆಗಳ ಈ ಎಲ್ಲಾ ಶುದ್ಧೀಕರಣವೂ – ನಮ್ಮ ಈ ಮರ್ತ್ಯ ದೇಹವನ್ನು ಕ್ರಿಸ್ತನಲ್ಲಿ ದೇವರ ಚಿತ್ತದ ದೃಢೀಕರಣದ ಸಮೀಪಕ್ಕೆ ತರುವ ಈ ಎಲ್ಲಾ ಪ್ರಯತ್ನಗಳೂ ನಾವು ಕ್ರಿಸ್ತನನ್ನು ಈ ಹಿಂದೆ ಅಂಗೀಕರಿಸಿದ್ದರ ಮತ್ತು ಆತನ ರಕ್ತದ ಮೇಲೆ ನಂಬಿಕೆ ಇಡುವುದರಿಂದ ನಮಗೆ ದೊರೆಯುವ ನೀತಿನಿರ್ಣಯದ ಮೇಲೆ ಆತುಕೊಂಡಿದೆ. ದೇವರ ವಾಕ್ಯದ ಆಲೋಚನೆಯೇನೆಂದರೆ, ನಾವು ದೇವರಿಗೆ ನಮ್ಮನ್ನು ಪ್ರತಿಷ್ಠಿಸಿಕೊಂಡ ಸಮಯದಿಂದ ನಮ್ಮ ಎಲ್ಲಾ ಅಸಮರ್ಪಕತೆಗಳೂ ಯೆಹೋವನ ಕೃಪೆಯಿಂದುಂಟಾದ ಈಡುಬಲಿಯ ಅರ್ಹತೆಯ ಮೇರೆಗೆ ದೇವರ ದೃಷ್ಟಿಯಿಂದ ಮರೆಯಾಗುತ್ತವೆ ಮತ್ತು ನಂಬಿಕೆಯಿಂದ ಭದ್ರಪಡಿಸಲ್ಪಟ್ಟು ವಿನಿಯೋಗವಾಗುತ್ತದೆ. ಸರ್ವಸಂಪೂರ್ಣವಾದದ್ದು ಮಾತ್ರವೇ ದೇವರಿಂದ ಅಂಗೀಕರಿಸಲ್ಪಡುತ್ತದೆಯಾದ ಕಾರಣ ನಾವು ನಮ್ಮ ಪ್ರಯತ್ನ ಮತ್ತು ತೊಳಕೊಳ್ಳುವಿಕೆಯೊಂದಿಗೆ ಇನ್ನೂ ಸಹಾ ಅಸಮರ್ಪಕ ರಾಗಿದ್ದೇವೆ. ನಾವು ದೇವರಿಂದ ಅಂಗೀಕಾರಹೊಂದುವುದು ಕ್ರಿಸ್ತನ ನಿಲುವಂಗಿಯಿಂದ ಅವುಗಳು ಮರೆಮಾಡಲ್ಪಟ್ಟಾಗ ಮತ್ತು ಆತನ ಸರ್ವಸಂಪೂರ್ಣತೆಯು ನಮ್ಮ ಮೇಲೆ ಎಣಿಕೆ ಯಾದಾಗಲೇ, ಅನ್ವಯಿಸಲ್ಪಟ್ಟಾಗಲೇ ಅಥವಾ ಹೊರಿಸಲ್ಪಟ್ಟಾಗಲೇ ಎಂಬುದು ವಿಶದವಾಗಿದೆ. ಹೀಗಾಗಿ ನಾವು 'ಆತನ ಕೃಪೆಯಿಂದ ಕ್ರಿಸ್ತನ ಮೂಲಕ ಅಂಗೀಕರಿಸಲ್ಪಡಬೇಕು' (ಎಫೆಸ 1:6 ನೋಡಿರಿ). ನಂತರದಲ್ಲಿ ನಿತ್ಯವೂ ನೀತಿಗಾಗಿ ನಮ್ಮ ಭಕ್ತಿಯನ್ನು ತೋರ್ಪಡಿಸುತ್ತಾ ಹಾಗು ಪರಿಶುದ್ಧತೆ ಪಡೆಯಲು ನಮ್ಮ ಪ್ರಯತ್ನದಲ್ಲಿ ನಮ್ಮ ಆಕಾಂಕ್ಷೆಯನ್ನು ಕರ್ತನಿಗೆ ತೋರಬೇಕು.

ನಮ್ಮ ವೇದಗ್ರಂಥಗಳು ಬಾರಿ ಬಾರಿಯಾಗಿ ನಮ್ಮ ಕರ್ತನು ನಮ್ಮ ಪರವಾದ ಪಾಪ ಪ್ರಾಯಶ್ಚಿತ್ತ ಯಜ್ಞವಾಗಿದ್ದಾನೆ – "ಲೋಕದ ಪಾಪವನ್ನು ನಿವಾರಣೆಗಾಗಿ ಹೊತ್ತುಕೊಂಡು ಹೋಗುವ ದೇವರ ಕುರಿಮರಿ" (ಯೋಹಾನ 1:29 ನೋಡಿರಿ) ಎಂದು ಸೂಚಿಸುತ್ತವೆ. ಧರ್ಮ ಶಾಸ್ತ್ರದಲ್ಲಿನ ಎಲ್ಲಾ ಬಲಿಗಳೂ, ಯೆಹೂದಿ ಬಲಿಪೀಠದ ಮೇಲೆ ಚೆಲ್ಲಲ್ಪಟ್ಟ ಎಲ್ಲಾ ರಕ್ತವೂ ನಮ್ಮ ಪರವಾಗಿ ಕೊಯ್ಯಲ್ಪಟ್ಟ ಈ ಮಹಾ ಬಲಿಯನ್ನು ಸೂಚಿಸುತ್ತವೆ. ಅಪೋಸ್ತಲನು ನಮಗೆ ಭರವಸೆ ನೀಡುವಂತೆ ಹೋತ ಮತ್ತು ಕುರಿಗಳ ರಕ್ತವು ನಮ್ಮ

ಪಾಪಗಳನ್ನು ಎಂದೂ ನಿವಾರಣೆಮಾಡುವುದಿಲ್ಲ – ಕೇವಲ ಪ್ರತಿಸಾಂಕೇತಿಕವಾದ ಯಜ್ಞದ 'ಅಮೂಲ್ಯವಾದ ರಕ್ತ'ವು ಮಾತ್ರವೇ ಇದನ್ನು ಮಾಡಬಲ್ಲದು. (ನೂತನ ಒಡಂಬಡಿಕೆಯಲ್ಲಿರುವ ಪಾಪ ನಿವಾರಣಾರ್ಥವಾದ ಬಲಿಯ ಪ್ರಸ್ತಾಪದ ಬಗ್ಗೆ ಇಬ್ರಿಯ 9:12, 10:10, ಎಫೆಸ. 5:2, 1 ಕೊರಿಂಥ 5:7; 1 ಪೇತ್ರ 2:22–24; 2 ಕೊರಿಂಥ 5:21) – Diaglott.

ಈ ಯಜ್ಞವು ನಮಗಾಗಿ ಅದೆ, ಸಭೆ ಮತ್ತು ಎಲ್ಲಾ ಮಾನವ ಜಾತಿಯವರಿಗಾಗಿ ಅದೆ. ಅದರಂತೆ ದೇವರವಾಕ್ಯಗಳಲ್ಲಿ "ಆತನು ದೇವರ ಕೃಪೆಯಿಂದ ಪ್ರತಿಯೊಬ್ಬ ಮನುಷ್ಯನಿಗೋಸ್ಕರ ಮರಣವನ್ನು ಅನುಭವಿಸ ಬೇಕಾಗಿತ್ತು" ಎಂಬುದಾಗಿ ಸ್ಪಷ್ಟವಾಗಿ ತಿಳಿಸಲ್ಪಟ್ಟಿದೆ. ಕ್ರಿಸ್ತನು ನೀತಿವಂತನಾಗಿದ್ದು ಅನೀತಿವಂತರಿಗೋಸ್ಕರ ಪ್ರಾಣ ಕೊಟ್ಟು ನಮ್ಮನ್ನು ದೇವರ ಬಳಿ ಸೇರಿಸಲು – ನಮಗಾಗಿ ಮತ್ತು ಎಲ್ಲಾ ಮಾನವ ಜಾತಿಯವರಿಗಾಗಿ ಪರಲೋಕದ ತಂದೆಯೊಂದಿಗೆ ಸಾಮರಸ್ಯ ಅಥವಾ ಪುನಃಸಂಧಾನದ ಮಾರ್ಗಕ್ಕೆ ಹಿಂತಿರುಗಿ ಬರುವಂತೆ ಈ ರೀತಿಯಲ್ಲಿ ನಮಗಾಗಿ ಆತನು ಪರೋಕ್ಷವಾಗಿ ನಿತ್ಯಜೀವದ ಮಾರ್ಗವನ್ನು ತೆರೆಯುವುದಕ್ಕಾಗಿ, ಆತನ ನಿಜವಾದ ಮಕ್ಕಳಿಗಾಗಿ ತಂದೆಯ ಕೃಪೆ ಅಥವಾ ಆಶೀರ್ವಾದ ಅಥವಾ ಬಹುಮಾನವನ್ನು ನೀಡುವ ಸಲುವಾಗಿ ಆತನು ಮಾರ್ಗವೊಂದನ್ನು ತೆರೆಯುವಮಾಡಿದ್ದಾನೆ. (ಈ ಸಂಗತಿಗಳಿಗಾಗಿ: 1 ಥೆಸ. 5:10; ರೋಮಾ 5:8, 1 ಕೊರಿಂಥ 15:3, 2 ಕೊರಿಂಥ 5:14,15; ಯೋಹಾನ 10:15: 11:50–52 ಮತ್ತು 1 ಪೇತ್ರ 2:24; 3:18 ಇವುಗಳನ್ನು ನೋಡಿರಿ.)

ಮನುಷ್ಯನಾಗಿದ್ದ ಕ್ರಿಸ್ತನ ಮರಣ, ಆತನ ಪವಿತ್ರ ರಕ್ತ ಇವುಗಳು ನಮ್ಮನ್ನು ಪಾಪದಿಂದ, ಮರಣದಿಂದ ಬಿಡುಗಡೆಗೊಳಿಸಿವೆ ಎಂದು ಅನೇಕ ವೇದವಚನಗಳಲ್ಲಿ ನಿಸ್ಸಂದಿಗ್ಧವಾಗಿ ಸ್ಥಾಪಿಸಲ್ಪಟ್ಟಿವೆ. ಇದನ್ನು ದೇವರ ವಾಕ್ಯದ ಸ್ಪೂರ್ತಿಯಲ್ಲಿ ಅಲ್ಲಗಳೆಯುವ ಮೂಲಕ ಅಥವಾ ದೇವರ ವಾಕ್ಯದೊಂದಿಗೆ ಹೋರಾಡುವುದರ ಮೂಲಕ ಅಥವಾ ದೇವರ ವಾಕ್ಯವನ್ನು ಕಪಟವಾದ ರೀತಿಯಲ್ಲಿ ಪ್ರತಿಪಾದಿಸುವ ಮೂಲಕ ಮಾತ್ರವೇ ತ್ಯಜಿಸಿ ಬಿಡಬಹುದಾಗಿದೆ. (1 ಪೇತ್ರ 1:2; ಅ.ಕೃ. 4:12; 20:28; ಪ್ರಕಟನೆ 5:9; 1:5, ರೋಮಾ. 5:9; ಮತ್ತು ಇಬ್ರಿಯ 13:12 ಇವುಗಳನ್ನು ನೋಡಿರಿ).

## "ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು? ಯಾರಿಂದ ಕೊಂಡುಕೊಳ್ಳಲ್ಪಟ್ಟಿದ್ದೀರಿ? ಯಾವ ಉದ್ದೇಶಕ್ಕಾಗಿ ಕೊಂಡುಕೊಳ್ಳಲ್ಪಟ್ಟಿರಿ?"

## ``Ye are Bought with a Price" By whom ? Why ? or For What Purpose ?

**"ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು, ಮನುಷ್ಯರಿಗೆ ದಾಸರಾಗಬೇಡಿರಿ"** – 1 ಕೊರಿಂಥ 7:23.

**"ನೀನು ಯಜ್ಞಾರ್ಪಿತನಾಗಿ . . . ಮನುಷ್ಯರನ್ನು ದೇವರಿಗಾಗಿ ಕೊಂಡುಕೊಂಡಿ"** – ಪ್ರಕಟನೆ 5:9.

**"ನಿಮ್ಮಲ್ಲಿಯೂ ಸುಳ್ಳು ಬೋಧಕರು ಇರುವರು. ಅವರು . . . ತಮ್ಮನ್ನು ಕೊಂಡುಕೊಂಡ ಒಡೆಯನನ್ನು ಕೂಡಾ ತಾವು ಅರಿಯವೆಂದು ಹೇಳುವರು"** – 2 ಪೇತ್ರ 2:1.

ಮನುಷ್ಯರನ್ನು 'ಕೊಂಡುಕೊಳ್ಳಲಾಗಿದೆ' ಎಂಬ ಬಗ್ಗೆ ಸತ್ಯವೇದದಲ್ಲಿ ಸಾಕ್ಷ್ಯಗಳು ಬಹಳಷ್ಟು ಸ್ಪಷ್ಟವಾಗಿವೆ; ನಾವೀಗಾಗಲೇ ತೋರಿಸಿದಂತೆ, ಅವರು ಭಾಷಾಂತರಿಸಿದ ಗ್ರೀಕ್ ಪದವು agorazo. ಇದು ಸಾರ್ವಜನಿಕವಾದ ಖರೀದಿಯನ್ನು ಸೂಚಿಸುತ್ತದೆ. ಆಗ ಸ್ವಾಭಾವಿಕವಾಗಿ ಉದ್ಭವಿಸುವ ಪ್ರಶ್ನೆಗಳೆಂದರೆ: (1) ಮಾನವರನ್ನು ಕೊಂಡುಕೊಂಡವರು ಯಾರು? (2) ಯಾರಿಂದ ಮನುಷ್ಯನು ಕೊಂಡುಕೊಳ್ಳಲ್ಪಟ್ಟನು? (3) ಯಾತಕ್ಕಾಗಿ ಮನುಷ್ಯನು ಕೊಂಡುಕೊಳ್ಳಲ್ಪಟ್ಟನು? ನಾವು ಅದೇ ಕ್ರಮದಲ್ಲಿ ಈ ಪ್ರಶ್ನೆಗಳನ್ನು ಪರಿಗಣಿಸುತ್ತೇವೆ.

**(1) ಮಾನವರನ್ನು ಕೊಂಡುಕೊಂಡವರು ಯಾರು?:** ಸತ್ಯವೇದವು ಈಗಾಗಲೇ ಸ್ಪಷ್ಟವಾಗಿ ಮತ್ತು ಸಂಶಯವಿಲ್ಲದೆ ಮಾನವಜಾತಿಯು ಕೊಂಡುಕೊಳ್ಳಲ್ಪಟ್ಟಿದೆ ಎಂದು ಹೇಳಿದೆಯಲ್ಲದೆ ನಮ್ಮ ಕರ್ತನಾದ ಯೇಸುವೇ ಇದನ್ನು ಕೊಂಡುಕೊಂಡಾತನು ಎಂದು ಸಹಾ ಹೇಳಿಯದೆ. ಇದಕ್ಕೂ ಹೆಚ್ಚಾಗಿ, ಈ ಮೇಲಿನ ಮತ್ತಿತರ ದೇವರ ವಾಕ್ಯದ ಮಾತುಗಳು ಕೊಂಡುಕೊಳ್ಳುವ ಕ್ರಯವು ಕ್ರಿಸ್ತನ ಅಮೂಲ್ಯವಾದ ರಕ್ತವಾಗಿದೆ – ಆತನ ಸ್ವಂತ ಜೀವದ ಬಲಿಯಾಗಿದೆ. ಮನುಷ್ಯನಾಗಿದ್ದ ಯೇಸುವಿನ ಮರಣವಾಗಿದೆ ಮತ್ತು ಆತನು ಎಲ್ಲರಿಗಾಗಿ, ನಮಗಾಗಿ, ತನ್ನನ್ನೇ ಈಡುಬಲಿ (anti-lutron-a corrsesponding price)ಯಾಗಿ ಅರ್ಪಿಸಿದ್ದಾನೆ ಎಂಬ ನಿರ್ಧಿಷ್ಟವಾದ ಭರವಸೆಯನ್ನು ನೀಡುವವುಗಳಾಗಿವೆ. ಈಗಾಗಲೇ ನಿರ್ವಿವಾದವಾಗಿ ಸಾಬೀತುಗೊಂಡಿರುವ ಈ ಪ್ರಶ್ನೆಯನ್ನು ಪರಿಗಣಿಸುವಾಗ ನಾವು ಎರಡನೆಯದಕ್ಕೆ ಹೋಗೋಣ.

**(2) "ಯಾರಿಂದ ಮನುಷ್ಯನು ಕೊಂಡು ಕೊಳ್ಳಲ್ಪಟ್ಟನು?":** ಸತ್ಯದ ವಿರೋಧಿಗಳು ಪರಿಹಾಸ್ಯವಾಗಿ

ದೇವರು ನಮ್ಮನ್ನು ಪಿಶಾಚನಿಂದ ಕೊಂಡು ಕೊಂಡನಲ್ಲವೇ? ಎಂದು ವಿಚಾರಿಸುತ್ತಾರೆ. ಕ್ರಯವನ್ನು ಸಂಧಾಯಪಡೆಯಲು ಬೇರೆ ಯಾರೂ ಇಲ್ಲ ಎಂಬುದಾಗಿಯೂ ಖಚಿತಪಡಿಸುತ್ತಾರೆ. ಈಡುಬಲಿಯನ್ನು ಅಲ್ಲಗಳೆಯುವವರ ತಪ್ಪು ವಿಚಾರಗಳಿಗೆ ಅನುಸಾರವಾಗಿ, ದೇವರು ಅಂಥಾಃ ವ್ಯವಹಾರದಲ್ಲಿ ಪಾಲುದಾರನಲ್ಲ. ಅವರ ಹಕ್ಕಿನ ಹೇಳಿಕೆ ಏನೆಂದರೆ, ದೇವರು ಸದಾ ಮಾನವರ ಸಾಂಗತ್ಯಕ್ಕಾಗಿ ಕಾತುರನಾಗಿದ್ದಾನೆ, ಇದುವರೆಗೆ ತನ್ನ ಶಕ್ತಿಯನ್ನು ಮಾನವರ ಪುನಃಸಂಧಾನಕ್ಕಾಗಿಯೂ ಮತ್ತು ಅವರನ್ನು ಪಾಪ ಮತ್ತು ಮರಣದಿಂದ ಮರಳಿ ಪಡೆಯಲು ವಿನಿಯೋಗಿಸಿದ್ದಾನೆ ಎಂಬುದಾಗಿದೆ. ಆದುದರಿಂದ ದೇವರು ಮಾನವರ ಬಿಡುಗಡೆಯನ್ನು ಅನುಮತಿಸುವುದರ ಮೊದಲು ಯಾವುದೇ ಈಡುಬಲಿಯ ಬೆಲೆಯನ್ನು ಕೇಳುವುದಿಲ್ಲ ಎಂದು ಅವರು ಆಲೋಚಿಸುತ್ತಾರೆ. ಅಂಥಾಃ ಆಲೋಚನೆಗಳು ಸತ್ಯವೇದದ ಬೋಧನೆಗಳಿಗೆ ವ್ಯತಿರಿಕ್ತವಾಗಿವೆ ಎಂದು ನಾವು ಉತ್ತರಿಸುತ್ತೇವೆ. ದೇವರು ಪ್ರೀತಿಸ್ವರೂಪಿಯಾಗಿದ್ದಾನೆ ಎಂದು ದೇವರ ವಾಕ್ಯಗಳು ಪ್ರತಿನಿಧಿಸುವಾಗ, ಆತನು ಪಾಪಿಗಳ ಬಗ್ಗೆ ಅನುಕಂಪವುಳ್ಳವನಾಗಿದ್ದಾನೆ ಎಂದೂ ಅದೇ ಸಮಯದಲ್ಲಿ ಆತನು ನ್ಯಾಯವಂತನೂ ಆಗಿದ್ದು ಮಾನವನನ್ನು ನ್ಯಾಯಯುತವಾಗಿ ದಂಡನೆಗೊಳಪಡಿಸಿರುವಾಗ ಆತನನ್ನು ಆ ದಂಡನೆಯಿಂದ ನ್ಯಾಯವಾದ ಈಡುಬಲಿಯ ಬೆಲೆಯನ್ನು ತಾನು ಪಡೆದುಕೊಳ್ಳದೆ ಬೇರೆ ಯಾವುದೇ ರೀತಿಯಲ್ಲಿ ಬಿಡುಗಡೆಗೊಳಿಸಲಾರನು.

ಸೈತಾನನು ಮರಣದ ದಂಡವನ್ನು ಬಲವಂತವಾಗಿ ವಸೂಲಿ ಮಾಡುವುದರಲ್ಲಿ ದೋಷದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾನೆ ಎಂಬುದಾಗಿ ವೇದ ವಚನಗಳು ಘೋಷಿಸುವಾಗ "ಮಕ್ಕಳು ರಕ್ತಮಾಂಸಧಾರಿಗಳಾಗಿರುವುದರಿಂದ ಆತನೂ (ಕ್ರಿಸ್ತನು) ಅವರಂತೆಯೇ ಆದನು. ತನ್ನ ಮರಣದಿಂದಲೇ ಮರಣಾಧಿಕಾರಿಯಾದ ಸೈತಾನನ್ನು ಅಡಗಿಸಿಬಿಡುವುದಕ್ಕೂ, ಮರಣ ಭಯದ ದೆಸೆಯಿಂದ ತಮ್ಮ ಜೀವಮಾನದಲ್ಲೆಲ್ಲಾ ದಾಸತ್ವದೊಳಗಿದ್ದವರನ್ನು ಬಿಡಿಸುವುದಕ್ಕೂ ಅವರಂತೆ ರಕ್ತಮಾಂಸಧಾರಿಯಾದನು" (ಇಬ್ರಿಯ 2:14) ಎಂದಿದೆ. ಮತ್ತೊಂದೆಡೆ ಸೈತಾನನನ್ನು 'ಇಹಲೋಕಾಧಿಪತಿ' (ಯೋಹಾನ 14:30) ಎಂದು ಕರೆಯಲ್ಪಟ್ಟಿದೆಯೇ ಹೊರತು ಎಲ್ಲೂ ಆತನು ಈ ಲೋಕವನ್ನು ಅಧಿಕಾರಯುಕ್ತನಾಗಿ ಆಡಳಿತ ನಡೆಸುತ್ತಾನೆಂದು ಹೇಳಿರುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ವೇದವಚನಗಳು ಸೈತಾನನ್ನು 'ಅಪಹರಿಸುವವನು', ಮಾನವನ ಪತನಹೊಂದಿದ ಅವಸ್ಥೆಯನ್ನು ದುರುಪಯೋಗ ಪಡಿಸಿಕೊಳ್ಳುವವನು ಎಂದು ಹೇಳುತ್ತವೆ. ಆತನು ಮಾನವರ ಕಣ್ಣುಗಳನ್ನು ದೇವರ ಕಡೆಗೆ ಕುರುಡಾಗಿ ಮಾಡಿದ್ದಾನೆ ಮತ್ತು ಆತನು ಮನುಷ್ಯನನ್ನು ಮೋಸಗೊಳಿಸಿ ಆತನನ್ನು ಅಜ್ಞಾನದ ಮೂಲಕ, ಅಂಧವಿಶ್ವಾಸದ ಮೂಲಕ ಮತ್ತು ಮಾನವನ ಸ್ವಂತ ಬಲಹೀನತೆಗಳ ಮೂಲಕ ತನ್ನ ಅಡಿಯಾಳನ್ನಾಗಿ ಮಾಡಿಕೊಂಡಿದ್ದಾನೆ. ಸೈತಾನನು ತನ್ನನ್ನು ಪಾಪದೊಂದಿಗೆ ಗುರುತಿಸಿಕೊಂಡಿರುವುದು ಆತನ ಮರಣದ ಶಕ್ತಿಯನ್ನು ನಿಯೋಜಿಸುತ್ತದೆ. ಪಾಪವಲ್ಲದಿದ್ದರೆ, ಸೈತಾನನಿಗೆ ಮಾನವನ ಮೇಲೆ ಯಾವ ಪ್ರಭುತ್ವವೂ ಇದ್ದಿಲ್ಲ. ಮಾನವನು ಇಚ್ಛಾಪೂರ್ವಕವಾಗಿ ಪಾಪ ಮಾಡಿದ್ದರಿಂದ ದೇವರ ಕೃಪೆಯಿಂದ ತಳ್ಳಲ್ಪಟ್ಟನು. ಆದರೆ, ಅನಂತರದಲ್ಲಿ 'ಮನುಷ್ಯನಿಗೆ ದೇವರ ಜ್ಞಾನವು ಇಷ್ಟವಿಲ್ಲದ್ದರಿಂದ, ದೇವರು ಅವರನ್ನು ಅನಿಷ್ಟಭಾವಕ್ಕೆ ಒಪ್ಪಿಸಿದನು' (ರೋಮಾ. 1:28). ಜನಾಂಗದ ಸಂಬಂಧದಲ್ಲಿ ಸೈತಾನನು ಕೇಳಿಕೊಳ್ಳಬಹುದಾದ ಅತ್ಯಂತ ದೊಡ್ಡ ಅಧಿಕಾರವೆಂದರೆ ಅಪಹರಿಸುವ ಶಕ್ತಿ ಮತ್ತು ಆತನ ದಾಸರ ಬಲಹೀನತೆ ಇವುಗಳೇ.

ಇದಕ್ಕೂ ಹೆಚ್ಚಾಗಿ, ದೇವರ ದಂಡನೆಯಾದ 'ನೀನು ಸತ್ತೇ ಹೋಗುವಿ' ಎಂಬುದನ್ನು ಮುಂದೆ ಇಟ್ಟಾಗ ಸೈತಾನನಾಗಲೀ, ಕೆಡುಕಿನ ಬೇರೆ ಯಾವುದೇ ಪಾರುಪತ್ಯದಾರಿಕೆಯಾಗಲೀ ದೇವರ ಈ ನಿರ್ಣಯವನ್ನು ಕಾರ್ಯಗತಗೊಳಿಸುವ ಅನುಮತಿಹೊಂದಿದೆ. ಈ ರೀತಿಯಲ್ಲಿ ದೇವರು ಕೆಲವೊಮ್ಮೆ ಮನುಷ್ಯರ ಕ್ರೋಧ, ಕೆಲವೊಮ್ಮೆ ದುರಾತ್ಮಗಳ ಕ್ರೋಧ ಇವುಗಳು ತನ್ನ ಅದ್ಭುತವಾದ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ಮತ್ತು ಉದ್ದೇಶರಹಿತವಾಗಿ ಆತನಿಗೆ ಸ್ತೋತ್ರ ಸಲ್ಲಿಸುವಂತೆ ಮಾಡುತ್ತಾನೆ – "ಮನುಷ್ಯನ ಕೋಪವೂ ನಿನ್ನ ಘನಕ್ಕೇ ಸಾಧಕವಾಗುವುದು" (ಕೀರ್ತನೆ 76:10). ಆದರೆ, ದೇವರು ಸೈತಾನನನ್ನು ಜನಾಂಗದ ಯಜಮಾನ ಎಂಬುದಾಗಿ ಎಂದೂ ಮಾನ್ಯಮಾಡಿಲ್ಲ. ಜನಾಂಗವು ದೇವರ ಸೃಷ್ಟಿಯಾಗಿದೆ ಮತ್ತು ಅವುಗಳೆಲ್ಲವೂ ಆತನಿಗೆ ಬದ್ಧವಾಗಿವೆ. ಆದರೆ ಆತನನ್ನು ಕಂಡುಕೊಳ್ಳಲು ಮತ್ತು ಆತನಿಗೆ ವಿಧೇಯನಾಗಲು ವಿಫಲವಾದ ಕಾರಣ ಅದು ದೇವರ ನಿಯಮದ ದಂಡನೆಗೆ, ಶಾಪಕ್ಕೆ ತುತ್ತಾಯಿತು, ಜೀವಿಸಲು ಅನರ್ಹವಾಯಿತು ಮತ್ತು ಅಲ್ಲಿಯೇ ಅದು ಇರಬೇಕಾಯಿತು.

ನಮ್ಮ ಆದಿ ತಂದೆತಾಯಿಗಳನ್ನು ಮರಣದ ಶಾಪಕ್ಕೆ ತುತ್ತಾಗಿಸಿದ್ದು ದೇವರ ನ್ಯಾಯವೇ ಮತ್ತು ಈ ದೈವಿಕ ನ್ಯಾಯದಂಡನೆಯ ಅಡಿಯಲ್ಲಿ ಜನಾಂಗವು ಇನ್ನೂ ಸತ್ತಿದೆ. ಯೇಸು ಕ್ರಿಸ್ತನ ವಿಮೋಚನೆಯ ಹೊರತಾಗಿ ಬೇರೆ ಯಾವ ನಿರೀಕ್ಷೆಯೂ ಇರುವುದಿಲ್ಲ. ದೇವರ ನ್ಯಾಯವು ತೀರ್ಪುಗಾರನಾಗಿ ಅದರ ತೀರ್ಪು ಮಾನವನ ಜೀವವನ್ನೇ ಮುಟ್ಟುಗೋಲು ಹಾಕಿಕೊಂಡಿರುವುದರಿಂದ ತಪ್ಪಿತಸ್ಥನಾದ ಆದಾಮನನ್ನು ಆತನಲ್ಲಿ ಆತನ ಜನಾಂಗವನ್ನು ಈ

ದಂಡನೆಯಿಂದ ಬಿಡುಗಡೆಗೊಳಿಸುವುದಕ್ಕಾಗಿ ದೇವರ ನ್ಯಾಯಕ್ಕೆ ಬಿಡುಗಡೆಯ ಬೆಲೆಯನ್ನು ಅಂದರೆ ಈಡುಬಲಿಯ ಬೆಲೆಯನ್ನು ತೆರಲೇ ಬೇಕಾಗುತ್ತದೆ.

ಸೈತಾನನ ಶಕ್ತಿಯು ಆತನಿಂದ ಇಚ್ಛಾಪೂರ್ವಕವಾಗಿ ವಿನಿಯೋಗಗೊಳಿಸಲಾದಾಗ್ಯೂ, ಅದಕ್ಕೆ ಮಹಾ ನಿರ್ಣಾಯಕನಾದ ಯೆಹೋವನ ಅನುಮತಿ ಇಲ್ಲದೇ ವಿನಿಯೋಗಿಸಲು ಸಾಧ್ಯವಿರಲಿಲ್ಲ, ಯೆಹೋವನು ಮರಣವೆಂಬ ದೊಡ್ಡ ವಿಪತ್ತನ್ನು ಮಾನವ ಜಾತಿಯ ಮೇಲೆ ಪಾಪಕ್ಕೆ ನ್ಯಾಯಯುತವಾದ ಶಿಕ್ಷೆಯ ಅಥವಾ ಯೆಹೋವನ ನ್ಯಾಯವಿಧಿಯನ್ನು ಉಲ್ಲಂಘಿಸಿದ್ದಕ್ಕಾಗಿ ಕೇವಲ ದಂಡನೆಯ ಹೊರತಾಗಿ ಸೈತಾನನ ಪಾರುಪತ್ಯದಲ್ಲಿ ಅಥವಾ ಬೇರೆ ರೀತಿಯಲ್ಲಿ ವಿಧಿಸುವಂತೆ ಅನುಮತಿ ಕೊಡುತ್ತಿದ್ದಿಲ್ಲ. ಸೈತಾನನ ಅಧಿಕಾರವು ಗಲ್ಲಿಗೇರಿಸುವವ ನಿಗಿರುವಂತೆ ನೀಡಲ್ಪಟ್ಟ ಅಧಿಕಾರವಾಗಿದೆ. ಗಲ್ಲಿಗೇರಿಸುವ ವ್ಯಕ್ತಿಯು ಕೇವಲ ಕಾನೂನಿನ ಸೇವಕನಾಗಿದ್ದು ಅದರ ದಂಡನೆಯನ್ನು ಪಾಲಿಸುವುದು ಮಾತ್ರವೇ ಆತನ ಕೆಲಸ. ಅದರಂತೆ ಸೈತಾನನು ಸಹಾ ಎಲ್ಲಾ ಜೀವಸೃಷ್ಟಿಗಳ ಮಹಾ ನ್ಯಾಯಾಧಿಪತಿಯು "ಪಾಪದ ಸಂಬಳ ಮರಣ"; "ನೀನು ಸತ್ತೇ ಸಾಯುವಿ" ಎಂದು ವಿಧಿಸುವ ಶಿಕ್ಷೆಯನ್ನು ನೆರವೇರಿಸುವವನು ಮಾತ್ರವೇ ಆಗಿದ್ದಾನೆ.

ಒಬ್ಬ ಕೈದಿಯು ತನಗೆ ವಿಧಿಸಿದ ಜುಲ್ಮಾನೆ ಅಥವಾ ಈಡನ್ನು ನೀಡಬೇಕಾದರೆ, ಅದನ್ನು ಸೆರೆಮನೆಯ ಅಧಿಕಾರಿಗೆ ಅಥವಾ ಶಿಕ್ಷೆಯನ್ನು ನೀಡುವಾತನಿಗೆ ಕೊಡುವುದಿಲ್ಲ, ಆದರೆ ನ್ಯಾಯ ತೀರ್ಪನ್ನು ವಿಧಿಸಿರುವ ನ್ಯಾಯಾಲಯಕ್ಕೆ ಅದನ್ನು ಸಲ್ಲಿಸಬೇಕಾಗುತ್ತದೆ. ಅದರಂತೆ ಪಾಪದ ಬಿಡುಗಡೆಯ ಬೆಲೆಯನ್ನು ಸೈತಾನನಿಗೆ ಕೊಡಬೇಕಾಗಿಲ್ಲ (ಆತನು ಸ್ವಲ್ಪಮಟ್ಟಿಗೆ ಈ ದಂಡನೆಯನ್ನು ನೆರವೇರಿಸುವವನಾಗಿದ್ದರೂ) ಆದರೆ ಪಾಪವನ್ನು ಖಂಡಿಸಿದ ಅಧಿಕಾರಕ್ಕೆ, ದಂಡನೆಯನ್ನು ವಿಧಿಸಿದಾತನಿಗೆ, ಅದನ್ನು ಕಾರ್ಯಗತಗೊಳಿಸಲು ಅಪ್ಪಣೆ ನೀಡಿದಾತನಿಗೆ ಕೊಡಬೇಕಾಗುತ್ತದೆ.

ಈ ರೀತಿಯಲ್ಲಿ ಮಾನವನ ಪಾಪಕ್ಕಾಗಿ ಈಡುಬಲಿಯ ಬೆಲೆಯನ್ನು ಎಲ್ಲರ ನ್ಯಾಯಾಧಿಪತಿಯಾದ ದೇವರಿಗೆ ಸಲ್ಲಿಸಬೇಕೆಂದು ವಿವೇಚನೆಯು ನಮಗೆ ಉತ್ತರ ನೀಡುತ್ತದೆ. ಕ್ರಿಸ್ತನ ಸಮರ್ಪಣೆಯ ಬಗ್ಗೆ, ಆತನು ಸಲ್ಲಿಸಿದ ಯಜ್ಞದ ಬಗ್ಗೆ ವೇದವಾಕ್ಯಗಳು ಏನು ಹೇಳುತ್ತವೆಂಬುದನ್ನು ನಾವೀಗ ವಿಚಾರಿಸೋಣ. ಅದು ಸೈತಾನನಿಗೆ ಸಲ್ಲಿಸಿದ್ದೋ? ದೇವರಿಗೆ ಸಲ್ಲಿಸಿದ್ದೋ? ನಾವು ಉತ್ತರಿಸುವುದೇನೆಂದರೆ, ಈ ಉತ್ತಮವಾದ ಯಜ್ಞದ ಪೂರ್ವಛಾಯೆ ನೀಡಿದ ಯೆಹೂದ್ಯರ ಎಲ್ಲಾ ವಿಧವಾದ ದೈವಿಕ ನಿರ್ವಹಣೆಯಲ್ಲಿ ಇದು ಲೋಕದ ಪಾಪವನ್ನು ನಿವಾರಣೆಮಾಡುವುದಾಗಿದ್ದು, ಈ ಸಮರ್ಪಣೆಯನ್ನು ಯಾಜಕನ ಕೈಗೆ ಒಪ್ಪಿಸಲಾಗುತ್ತದೆ. ಆತನು ಕರ್ತನಾದ ಯೇಸುವಿನ ಛಾಯಾರೂಪನಾಗಿದ್ದಾನೆ – ಯಾಜಕ. 4:3, 4:24,27,31,34,35; 5:11, 12; 9:2, 6,7; ವಿಮೋ. 30:10; 2 ಪೂರ್ವ. 29:7–11, 20–24.

ಇದು ನಿಶ್ಚಯಪೂರ್ವಕವಾಗಿ ನಮ್ಮ ಪ್ರಶ್ನೆಗೆ ಉತ್ತರ ನೀಡುವುದಾಗಿದೆ ಮತ್ತು ಈ ಪ್ರಸ್ತಾಪದ ಬಗ್ಗೆ ನಮಗೆ ಬೇರೆ ಯಾವ ಸಾಕ್ಷ್ಯವೂ ಬೇಕಾಗುವುದಿಲ್ಲ. ಆದರೆ ಇನ್ನೂ ಹೆಚ್ಚಿನ ಮತ್ತು ನೇರವಾದ ಸಾಕ್ಷ್ಯಗಳು ಬೇಕಾದ್ದಲ್ಲಿ ಅವು ಅಪೋಸ್ತಲನ ಈ ಮಾತುಗಳಲ್ಲಿ ಕಂಡುಬರುತ್ತವೆ – "ಹೋತ ಹೋರಿಗಳ ರಕ್ತವು ಹೊಲೆಯಾದವರ ಮೇಲೆ ಚೆಲ್ಲುವ ಕಡಸಿನ ಬೂದಿಯೂ ಶರೀರದ ಹೊಲೆಯನ್ನು ಹೋಗಲಾಡಿಸಿ ಪವಿತ್ರ ಮಾಡುವುದಾದರೆ . . . . ನಿತ್ಯಾತ್ಮನಿಂದ ತನ್ನನ್ನು ತಾನೇ ನಿರ್ದೋಷಿಯನ್ನಾಗಿ ದೇವರಿಗೆ ಸಮರ್ಪಿಸಿಕೊಂಡ ಕ್ರಿಸ್ತನ ರಕ್ತವು ಎಷ್ಟೋ ಹೆಚ್ಚಾಗಿ ನಮ್ಮನ್ನು ನಿರ್ಜೀವಕರ್ಮಗಳಿಂದ ಬಿಡಿಸಿ ನಾವು ಜೀವವುಳ್ಳ ದೇವರನ್ನು ಆರಾಧಿಸುವವರಾಗುವಂತೆ ನಮ್ಮ ಮನಸ್ಸನ್ನು ಶುದ್ಧೀಕರಿಸುವುದಲ್ಲವೇ?. ಮತ್ತು ಆ ಕಾರಣದಿಂದ ಆತನು ಒಂದು ಹೊಸ ಒಡಂಬಡಿಕೆಗೆ ಮಧ್ಯಸ್ಥನಾಗಿದ್ದಾನೆ" – ಇಬ್ರಿಯ 9:13–15; 26; 7:27; 10:4–10; 12, 20; ಎಫೆಸ. 5:2; ತೀತ 2:14; ಗಲಾತ್ಯ 1:4; 2;20; 1 ಯೋಹಾನ 3:16; ಯೋಹಾನ 1:29, 1 ಪೇತ್ರ 1:19; 1 ಕೊರಿಂಥ 10:20; ರೋಮಾ. 12:1.

ಈ ರೀತಿಯಲ್ಲಿ ದೇವರು ಕ್ರಿಸ್ತನ ಮರಣದ ಈಡುಬಲಿಯನ್ನು ಬಯಸಿದನು ಮತ್ತು ಅದನ್ನು ಸೂಕ್ತ ಈಡುಬಲಿಯನ್ನಾಗಿ ಅಂಗೀಕರಿಸಿದನು ಎಂಬ ಈ ಪ್ರಸ್ತಾಪದ ವೇದೋಕ್ತಿತನವನ್ನು ನಾವು ಮನಸ್ಸುಗಳ ಮುಂದೆ ಸ್ಥಾಪಿಸಿಕೊಳ್ಳುತ್ತೇವೆ.

### (3) ಮಾನವನನ್ನು ಯಾತಕ್ಕಾಗಿ ಕೊಂಡುಕೊಳ್ಳಲಾಯಿತು? :

ನಾವು ಪತನಗೊಂಡ, ಅಸಮರ್ಪಕ ವ್ಯಕ್ತಿಗಳಾಗಿರುವುದರಿಂದ ನಮ್ಮಲ್ಲಿ ದೈವಿಕ ಗುಣಗಳಾದ ನ್ಯಾಯ, ಜ್ಞಾನ, ಪ್ರೀತಿ ಮತ್ತು ಶಕ್ತಿಯು ಅಷ್ಟೊಂದು ಸಮರ್ಪಕವಾಗಿರುವುದಿಲ್ಲ; ಕೆಲವರು ಈಡುಬಲಿಯ ಅಗತ್ಯತೆಯನ್ನೂ ಅದನ್ನು ಸ್ವೀಕರಿಸುವ ದೈವಿಕ ಪದ್ಧತಿಯನ್ನು ಗ್ರಹಿಸಿಕೊಳ್ಳಲು ಬೇರೆಯವರಿಗಿಂತ ಹೆಚ್ಚು ಕಷ್ಟಪಡುತ್ತಾರೆ. ಈ ವಿಷಯವನ್ನು ತೃಪ್ತಿಕರವಾಗಿ ಆಲೋಚಿಸಲಾಗದವರು ಬಹಳ ಯುಕ್ತವಾಗಿ, ದೇವರ ವಾಕ್ಯದ ಸಾಕ್ಷ್ಯವನ್ನು ಅಂಗೀಕರಿಸಬೇಕು. ಯಾಕೆ ಮತ್ತು ಹೇಗೆ ಎಂದು ಸರಿಯಾದ ರೀತಿಯಲ್ಲಿ ಅದರ ಅರ್ಥವನ್ನು ಗ್ರಹಿಸಲು ಸಾಮರ್ಥ್ಯ ಇದ್ದರೂ ಇಲ್ಲದಿದ್ದರೂ ಅದನ್ನು ಗಣನೆಗೆ ತೆಗೆದುಕೊಳ್ಳಬಾರದು. ಇದುವೇ ಸುರಕ್ಷಿತವಾದ ಮತ್ತು ಸರಿಯಾದ ಕ್ರಮ. ಪರಂತು ಈ ಪ್ರಸ್ತಾಪವನ್ನು ಗ್ರಹಿಸಿಕೊಳ್ಳಲು ಸಹಾಯವಾಗುವಂತೆ ನಾವು ಕೆಲವೊಂದು

ಸಲಹೆಗಳನ್ನು ನೀಡುತ್ತೇವೆ. ಅಸಮರ್ಪಕರೂ, ಪತನಗೊಂಡವರೂ ಆಗಿರುವ ನಮ್ಮಲ್ಲಿ ಈ ವಿವಿಧ ಗುಣಗಳಾದ ಜ್ಞಾನ, ಪ್ರೀತಿ, ನ್ಯಾಯ ಮತ್ತು ಶಕ್ತಿಯು ನಿರಂತರವಾಗಿ ಹೆಚ್ಚು ಕಡಿಮೆ ಒಂದಕ್ಕೊಂದು ವ್ಯತಿರಿಕ್ತವಾಗಿರುತ್ತವೆ; ಆದರೆ ನಮ್ಮ ಪರಲೋಕದ ತಂದೆಯ ಬಗ್ಗೆ ಹಾಗಲ್ಲ; ಆತನಲ್ಲಿ ಈ ಪ್ರತಿಯೊಂದು ಗುಣವೂ ಸಮರ್ಪಕವಾಗಿರುತ್ತದೆ ಮತ್ತು ಇತರರ ವಿಷಯದಲ್ಲಿಯೂ ಇದು ಒಪ್ಪುವಂತಾದ್ದಾಗಿರುತ್ತದೆ. ಯಾವುದೇ ಘರ್ಷಣೆ ಇರುವುದಿಲ್ಲ. ಜ್ಞಾನವು ಮೊದಲಿಗೆ ಕ್ಷೇತ್ರದ ಸರ್ವೇಕ್ಷಣೆ ನಡೆಸುತ್ತದೆ ಮತ್ತು ಮಾನವರ ರಕ್ಷಣೆಗೆ ದೈವಿಕ ನ್ಯಾಯದ, ಪ್ರೀತಿ ಮತ್ತು ಶಕ್ತಿಯ ಪೂರ್ಣವಾದ ಒಪ್ಪಿಗೆಯ ಮೇರೆಗೆ ಉತ್ತಮವಾದ ಯೋಜನೆ ಹಾಕುತ್ತದೆ. ಜ್ಞಾನದ ನಿರ್ದೇಶನದಲ್ಲಿ ಮಾನವನು ಒಮ್ಮೆಗೆ ಧರ್ಮಶಾಸ್ತ್ರಕ್ಕೆ ಒಳಗಾದನು, ಇದರ ದಂಡನೆಯ ಫಲವಾಗಿ ತನ್ನ ಅಸ್ತಿತ್ವವನ್ನೇ ಮುಟ್ಟುಗೋಲಿಗೆ ಒಳಪಡಿಸಬೇಕಾಯಿತು ಮತ್ತು ವಿಪ್ಪತ್ತುಗಳ ಸರಮಾಲೆಯು ಮರಣದ ಜೊತೆಗೂಡಿತು. ಅನನುಭವದ ಕಾರಣ ಮಾನವನು ಪತನ ಹೊಂದುವನೆಂದು ವಿವೇಕಕ್ಕೆ ಮುಂಚೆಯೇ ತಿಳಿದಿತ್ತು. ಆದರೆ ಲಾಭಕರ ಪಾಠಗಳು ಮುಂತಾದವುಗಳನ್ನು ಕಲಿಸುವುದರ ಮೂಲಕ, ದೈವಿಕ ಒದಗಿಸುವಿಕೆಯನ್ನೂ ಮತ್ತು ವೇದವಚನಗಳಲ್ಲಿ ಪ್ರಕಟಗೊಂಡ ಷರತ್ತುಗಳನ್ನು ಮುಂದಿಡುವಲ್ಲಿ ಇದು ನ್ಯಾಯಸಮ್ಮತವಾಗಿದೆ ಎಂದು ಭಾವಿಸಿತು.

ಮಾನವನು ದೇವರ ನಿಯಮವನ್ನು ಮೀರಿದ ಕೂಡಲೇ, ನ್ಯಾಯವು ಮುಂದಿನ ಹೆಜ್ಜೆಯಿಟ್ಟಿತು, ಆತನನ್ನು 'rebel' (ದೇವರಿಗೆ ವಿರೋಧವಾಗಿ ತಿರುಗಿಬಿದ್ದಾತನು') ಎಂದು ಸಾರಿತು ಮತ್ತು ಆತನು ಮರಣ ದಂಡನೆಗೆ ಒಳಗಾದನು, ಆತನ ಜೀವನಾಧಾರವಾಗಿ ಈ ಹಿಂದೆ ವ್ಯವಸ್ಥೆಗೊಳಿಸಿದ್ದ ಏದೇನ್ ತೋಟದಿಂದ ಆತನನ್ನು ಉಚ್ಚಾಟಿಸಲಾಯಿತು, ಮತ್ತು ನಿಯಮ ಉಲ್ಲಂಘಿಸಿದಕ್ಕಾಗಿ ಕೇಡಿನ ಸಂಧರ್ಭಗಳಿಗೆ ಸಿಲುಕಿ ಒದ್ದಾಡುವಂತೆ ಮತ್ತು 'ನೀನು ಸತ್ತೇ ಹೋಗುವಿ' ಎಂಬ ಪೂರ್ಣಪ್ರಮಾಣದ ದಂಡನೆಯನ್ನು ವಿಧಿಸುವ ಉದ್ದೇಶದಿಂದ ಆತನನ್ನು ಸೈತಾನನ ವಶಕ್ಕೆ ಒಪ್ಪಿಸಿಕೊಡಲಾಯಿತು. ದೈವಿಕ ಗುಣ ಲಕ್ಷಣ ಅಂದರೆ ನ್ಯಾಯವು ಮಾನವನೊಡನೆ ವ್ಯವಹರಿಸುತ್ತಿರುವಾಗ, ಪ್ರೀತಿಯು ಅಂಶವು ಉದಾಸೀನತೆಯಿಂದಿರಲಿಲ್ಲ, ಆದರೆ ಅದು ಎರಡು ಕಾರಣಗಳಿಂದ ಅಧಿಕಾರರಹಿತವಾಗಿತ್ತು; ಮೊದಲನೆಯದಾಗಿ, ಅದಕ್ಕೆ ನ್ಯಾಯವನ್ನು ವಿರೋಧಿಸಲಾಗುತ್ತಿರಲಿಲ್ಲ, ಹಾಗೂ ಅದಕ್ಕೆ ನ್ಯಾಯದಂಡನೆಯ ಕಾರ್ಯಾಚರಣೆಗೆ ಅಡ್ಡಿಪಡಿಸಲು ಮತ್ತು ಮಾನವನನ್ನು ನ್ಯಾಯದ ಶಕ್ತಿಯಿಂದ ಬಿಡಿಸಲು ಸಾಧ್ಯವಿದ್ದಿಲ್ಲ. ಯಾಕೆಂದರೆ, ಇದು ದೈವಿಕ ಆಳ್ವಿಕೆಯ ಬಲವಾದ ತಳಹದಿಗಳಾಗಿವೆ. ಎರಡನೆಯದಾಗಿ, ಪ್ರೀತಿಗೆ ಆ ಸಮಯದಲ್ಲಿ ಈಡುಬಲಿಯ ಬೆಲೆತೆತ್ತು ಮಾನವನನ್ನು ಬಿಡಿಸುವಂತೆ ಮಧ್ಯೆ ಪ್ರವೇಶಿಸಲು ಸಾಧ್ಯವಿದ್ದಿಲ್ಲ. ಆದರೆ, ಈಗಾಗಲೇ ದೇವರ ಅಪರಿಮಿತವಾದ ಜ್ಞಾನವು ಮಾಡಿಕೊಂಡಿರುವ ಯೋಜನೆಗೆ ಅದು ವಿರೋಧವಾಗುತ್ತಿತ್ತು. ಈ ಕಾರಣದಿಂದ ದೈವಿಕ ಪ್ರೀತಿ ಮತ್ತು ದೈವಿಕ ಶಕ್ತಿಗಳು ಆ ಸಮಯಕ್ಕೆ ಸ್ಥಗಿತಗೊಂಡಿದ್ದವು, ಅವುಗಳಿಂದ ಮಾನವನನ್ನು ಬಿಡಿಸಲು ಸಾಧ್ಯವಿದ್ದಿಲ್ಲ. ಅವುಗಳು ಆತನ ನ್ಯಾಯ ಕಾರ್ಯಾಚರಣೆಗೆ ಮತ್ತು ಆರು ಸಹಸ್ರ ವರ್ಷಗಳ ಕಾಲದ ನರಳುವಿಕೆ, ಸಂಕಟ ಮತ್ತು ಮರಣವು ಮುಂದುವರಿಸಲು ಅನುಮತಿ ನೀಡಿದ ಆತನ ವಿವೇಕಕ್ಕೆ ಒಪ್ಪಿಗೆ ಸೂಚಿಸುವುದು ಅನಿವಾರ್ಯವಾಗಿತ್ತು. ಇದಕ್ಕೆ ಸಾಮರಸ್ಯವಾಗಿ, ಪ್ರೀತಿಯು ವಾಗ್ದಾನಗಳ ಮೂಲಕ ಮತ್ತು ಸಾಂಕೇತಿಕ ಬಲಿದಾನಗಳ ಮೂಲಕ ಮಾನವನನ್ನು ಪ್ರೋತ್ಸಾಹಿಸುವುದರ ಹೊರತಾಗಿ ಆತನ ಬಿಡುಗಡೆಗಾಗಿ ಮುಂದುವರೆಯಲಿಲ್ಲ. ಇದು ಪ್ರೀತಿಯು ಅಂತಿಮವಾಗಿ ವಿವೇಕದ ಸೂಕ್ತ ಸಮಯದಲ್ಲಿ ಮಾನವನ ಬಿಡುಗಡೆಯನ್ನುಂಟುಮಾಡುವುದರ ಘಟನೆಯ ಪೂರ್ವಛಾಯೆ ಅಥವಾ ಮುನ್ಸೂಚನೆಯಾಗಿತ್ತು. ಈ ರೀತಿಯಲ್ಲಿ ಪ್ರೀತಿಯು, ಒಂದು ಸುಮುಹೂರ್ತದಲ್ಲಿ ವಿವೇಕದ ನಿರ್ದೇಶನದಲ್ಲಿ ಕಾರ್ಯಾಚರಣೆ ಮಾಡುವುದಕ್ಕಾಗಿ ಮತ್ತು ನಂತರದಲ್ಲಿ ದೇವರ ಶಕ್ತಿಯನ್ನು ತನ್ನ ಸಹಾಯಕ್ಕಾಗಿ ಕರೆಯುವುದಕ್ಕಾಗಿ ಕಾದುಕೊಂಡಿತ್ತು.

ಪ್ರೀತಿಯು ತನ್ನ ಕಾರ್ಯಾಚರಣೆಯನ್ನು ಆರಂಭಿಸುವ ಕಾಲವು ಅಂತಿಮವಾಗಿ ಕೂಡಿಬಂತು. ವೇದವಚನಗಳು ಈ ಕಾಲವನ್ನು "ಪರಿಪೂರ್ಣವಾದ ಕಾಲ" (ಗಲಾತ್ಯ 4:4) ಅಥವಾ "ನೇಮಿತ ಕಾಲ" (ರೋಮಾ. 5:6) ಎಂದು ಕರೆಯುತ್ತದೆ. ಆಗ ದೇವರು ತನ್ನ ಮಗನಾದ ಯೇಸುಕ್ರಿಸ್ತನನ್ನು ಮಾನವ ರೂಪದಲ್ಲಿ ಕಳುಹಿಸಿಕೊಟ್ಟನು. "ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಕೊಟ್ಟನು" (1 ತಿಮೋ. 2:6). ಯಾಕೆಂದರೆ "ಆತನು ದೇವರ ಕೃಪೆಯಿಂದ (ಅನುಗ್ರಹ, ಕೊಡುಗೆ, ಕರುಣೆ) ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲೇ ಬೇಕಾಗಿತ್ತು" (ಇಬ್ರಿಯ 2:9). ಅದುವರೆಗೆ, ದೇವರ ಪ್ರೀತಿಯು ಇದ್ದುದಾದರೂ ಅದು ಮಾನವ ಜಾತಿಯವರಿಗೆ ಪ್ರಕಟವಾಗಿರಲಿಲ್ಲ. "ದೇವರು ತನ್ನ ಒಬ್ಬನೇ ಮಗನನ್ನು ನಾವು ಆತನ ಮೂಲಕ ಜೀವಿಸುವುದಕ್ಕಾಗಿ ಲೋಕಕ್ಕೆ ಕಳುಹಿಸಿಕೊಟ್ಟದ್ದರಲ್ಲಿಯೇ ದೇವರ ಪ್ರೀತಿಯು ನಮ್ಮಲ್ಲಿ ಪ್ರತ್ಯಕ್ಷ್ಯವಾಗಿದೆ" (1 ಯೋಹಾನ 4:9). "ನಾವು ಪಾಪಿಗಳಾಗಿದ್ದಾಗ್ಯೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟಿದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ" – ರೋಮಾ. 5:8.

ದೈವಿಕ ಪ್ರೀತಿಯು ತನ್ನಷ್ಟಕ್ಕೇ ದೇವರ ನಿಯಮಗಳೊಂದಿಗೆ ಸಾಮರಸ್ಯವಾಗಿದ್ದು ಆ ನಿಯಮಗಳ ಅಗತ್ಯತೆಯನ್ನು ನೆರವೇರಿಸುವಲ್ಲಿ ದೈವಿಕ ನ್ಯಾಯದೊಂದಿಗೆ ಯಾವ ಘರ್ಷಣೆಯನ್ನೂ ಹೊಂದಿಲ್ಲವಾಗಿದೆ. ಪ್ರೀತಿಯ ಪದ್ಧತಿಯು ದೇವರ ದಂಡನೆಯನ್ನು ತಳ್ಳಿಹಾಕುವ ಅಥವಾ ವಿರೋಧಿಸುವ ಪ್ರಯತ್ನವಾಗಿರುವುದಿಲ್ಲ ಅಥವಾ ಅದರ ಪೂರ್ಣ ಕಾರ್ಯಾಚರಣೆಯಲ್ಲಿ ಮಧ್ಯೆಪ್ರವೇಶಿಸುವುದಿಲ್ಲ. ಆದರೆ ಇದಕ್ಕೆ ಬದಲಿಯನ್ನು, ಮಾನವನಿಗಾಗಿ ಈಡುಬಲಿಯನ್ನು ಒದಗಿಸುವುದು. ನ್ಯಾಯವು ವಿಧಿಸಿರುವ ಮರಣದಂಡನೆಯನ್ನು ತಾನು ಸಲ್ಲಿಸುವುದರ ಮೂಲಕವಾಗಿ ಪ್ರೀತಿಯು ಮಾನವ ಜಾತಿಯನ್ನು ಆದಾಮನ ಶಾಪದಿಂದ (ಮರಣದಿಂದ) ಬಿಡುಗಡೆ ಗೊಳಿಸಿತು. ಇದು ದೇವರ ಪ್ರೀತಿಯ ವಿಜಯವಾಗಿದೆ. ಈ ವಿಜಯವು ನ್ಯಾಯದ ವಿಜಯಕ್ಕೆ ಯಾವ ರೀತಿಯಿಂದಲೂ ಕಡಿಮೆಯಾದುದ್ದಲ್ಲ. ಯೇಸುವನ್ನೇ ಈಡುಬಲಿಯನ್ನಾಗಿ ಸಮರ್ಪಿಸುವಾಗ ಪ್ರೀತಿಯು ವಿಜಯೋತ್ಸವ ವನ್ನಾಚರಿಸಿತು. ಇದು ದೇವರ ಗುಣಲಕ್ಷಣದ ಅಂಶವಾಗಿದ್ದು ಅದರ ನೈತಿಕತೆಯನ್ನೂ, ನಿರ್ಣಯ ಗಳನ್ನೂ ಮತ್ತು ದಂಡನೆಗಳನ್ನೂ ಜಾರಿಗೊಳಿಸುತ್ತದೆ.

ಪ್ರೀತಿಯ ಈ ವಿಜಯೋತ್ಸವವು ಇನ್ನೂ ಮುಗಿದಿಲ್ಲ. ಇದು ಈಡುಬಲಿಯನ್ನು ನೆರವೇರಿಸಿದೆ. ಆದರೆ ಇದರ ಉದ್ದೇಶವು ಇನ್ನೂ ಹೆಚ್ಚಾದುದ್ದನ್ನು ನೆರವೇರಿಸುವುದಾಗಿದೆ. ಅವುಗಳೆಂದರೆ, ಎಲ್ಲಾ ಮಾನವ ಜಾತಿಯವರಿಗೂ, ಇಚ್ಛೆಯುಳ್ಳವರಿಗೂ ದೇವರ ನಿಷ್ಠೆ ಮತ್ತು ಆತನ ನೀತಿಯುಳ್ಳ ನಿಯಮಗಳಿಗೆ ಹಿಂತಿರುಗುವ ಅನುಭವಗಳನ್ನು ಹೊಂದಿಕೊಂಡ ಮೇಲೆ ಪುನಃವಶವನ್ನು ಒದಗಿಸಿಕೊಡುವುದು. ಆದರೆ ಪ್ರೀತಿಯು ದೇವರ ವಿವೇಕದ ನಿರ್ದೇಶನದಲ್ಲಿ ಈಡುಬಲಿಯನ್ನು ತರುವುದಕ್ಕೆ ಮೊದಲು ನಾಲ್ಕು ಸಹಸ್ರ ವರ್ಷದವರೆಗೂ ಕಾದಿರುವುದರಿಂದ, ಈ ಈಡುಬಲಿಯ ಬೆಲೆಯು ತೆತ್ತ ನಂತರ ಪುನಃವಶದ ಕಾರ್ಯವು ಇನ್ನೂ ಆರಂಭವಾಗುವುದಕ್ಕೆ ಮತ್ತೆ ಎರಡು ಸಹಸ್ರವರ್ಷಗಳ ಕಾಲ ಕಾಯಬೇಕಾಗುತ್ತದೆ (ಅ.ಕೃ. 3:19–21). ಈ ಸಮಯದಲ್ಲಿ ವಿವೇಕವು ಪ್ರೀತಿಗೆ ಒಂದು ವಿಶೇಷವರ್ಗದವರ ಮೇಲೆ ಅಂದರೆ 'ಚಿಕ್ಕ ಹಿಂಡಿನ ಮೇಲೆ' ಕಾರ್ಯಾಚರಣೆ ಮಾಡಲು ಅನುಮತಿಸುತ್ತದೆ. ಅವರು ಈ ಸುವಾರ್ತಾಯುಗದಲ್ಲಿ ಆಯ್ಕೆಗೊಂಡವರು. ವಿಮೋಚನೆಗೊಂಡವರಲ್ಲಿ ಆತನ ನಾಮದ ಮಹಿಮೆಗಾಗಿ ಅವರನ್ನು ಆರಿಸಿಕೊಂಡಿದ್ದಾನೆ. ಅವರು ಕ್ರಿಸ್ತನ ಮದಲಗಿತ್ತಿ ಮತ್ತು ಜೊತೆವಾರಸುದಾರರಾದ ಸಭೆಯಾಗಿದ್ದಾರೆ.

ಕ್ರಿಸ್ತನು ಜನಾಂಗವನ್ನು ಕೊಂಡುಕೊಳ್ಳುವ ಅಗತ್ಯತೆ ಉಂಟಾಗಲು ಕಾರಣವೆಂದರೆ, ತಂದೆಯಾದ ಆದಾಮನು ಪಾಪದ (ಮತ್ತು ಅದರ ಸಂಬಳ ಅಥವಾ ದಂಡನೆಯಾದ ಮರಣದ) ದೆಸೆಯಿಂದ ತನ್ನನ್ನೂ ತನ್ನ ಜನಾಂಗದವರನ್ನೂ ಅವಿಧೇಯತೆಯೆಂಬ ಕ್ರಯಕ್ಕೆ ಮಾರಿಕೊಂಡಿರುತ್ತಾನೆ. (ರೋಮಾ. 7:14, 5:12) ಆತನನ್ನು ಪಾಪದ ದಾಸತ್ವದಿಂದ ಮರಳಿ ಪಡೆಯಬೇಕಾಗಿದೆ. ಆದುದರಿಂದ ಈ ದಂಡನೆಯಿಂದ ಯಾರನ್ನಾದರೂ ಬಿಡಿಸಲು ಮತ್ತು ಅವರು ನಿತ್ಯಜೀವಕ್ಕೆ ಅರ್ಹರಾಗುವಂತೆ ನೂತನ ಜೀವಿತವನ್ನು ಜೀವಿಸಲು ಸಾಧ್ಯಮಾಡಲು ಈಡುಬಲಿಯ ಬೆಲೆಯು ಅಗತ್ಯವಾಯಿತು.

ನಾವೀಗ ಈ ಕೊಂಡುಕೊಳ್ಳುವಿಕೆಯ ಇನ್ನೂ ವಿಶಾಲವಾದ ದೃಷ್ಟಿಕೋನವನ್ನು ತೆಗೆದುಕೊಳ್ಳೋಣ ಮತ್ತು ನಮ್ಮ ಕರ್ತನಾದ ಯೇಸುವು ಈಡುಬಲಿಯ ಬೆಲೆಯನ್ನು ಸಂದಾಯಮಾಡಿರುವ ಕಾರಣ ಕೇವಲ ತಾತ್ವಿಕವಾಗಿಯಲ್ಲ, ವಾಸ್ತವಿಕವಾಗಿಯೂ ಜನಾಂಗದ ಮಾಲಿಕನೂ, ನಿಯಂತ್ರಿಕನೂ ಮತ್ತು ತಂದೆಯೂ ಆಗಿದ್ದಾನೆ ಎಂಬುದನ್ನು ಗಮನಿಸೋಣ. ಈ ಕೊಂಡು ಕೊಳ್ಳುವಿಕೆಯಲ್ಲಿ ಆತನು ಜನಾಂಗವನ್ನು ಮಾರಿದ್ದ ತಂದೆಯಾದ ಆದಾಮನ ಸ್ಥಾನವನ್ನು ತೆಗೆದುಕೊಂಡಿದ್ದಾನೆ. ಪಾಪದ ದೆಸೆಯಿಂದ, ಸ್ವಯಂತೃಪ್ತಿಗಾಗಿ, ದೇವರ ಚಿತ್ತಕ್ಕೆ ಅವಿಧೇಯನಾಗಿ ಆದಾಮನು ಜನಾಂಗವನ್ನು ಮಾರಿರುವ ಕಾರಣ, ಈ ಜನಾಂಗವನ್ನು ಮನುಷ್ಯರೂಪದ ಕ್ರಿಸ್ತನು ತನ್ನ ಸ್ವಯಂ ಸಮರ್ಪಣೆಯಿಂದ, ದೇವರ ಚಿತ್ತಕ್ಕೆ ವಿಧೇಯನಾಗಿ ಕೊಂಡುಕೊಂಡಿದ್ದಾನೆ. ಆದಾಮನಿಗಾಗಿ ಸಮಂಜಸವಾದ ಬೆಲೆಯನ್ನು ತೆತ್ತಿದ್ದಾನೆ. ಈ ಆಲೋಚನೆಯನ್ನು ಪ್ರಸ್ತುತಿಪಡಿಸುವಂತೆ ದೇವರ ವಾಕ್ಯವು "ಸತ್ತವರಿಗೂ ಜೀವಿಸುವವರಿಗೂ ಒಡೆಯನಾಗಿರಬೇಕೆಂತಲೇ ಕ್ರಿಸ್ತನು ಸತ್ತು ಜೀವಿತನಾದನು" (ರೋಮಾ. 14:9) ಎಂದು ತಿಳಿಸುತ್ತದೆ. ನಮ್ಮ ಕರ್ತನ ಮರಣದ ಸದ್ಗುಣದ ಕಾರಣ ಆತನು ಜನಾಂಗದ ಒಡೆಯ, ಅರಸ, ತಂದೆಯಾದನು ಮತ್ತು ತನ್ನ ಸ್ವಅರ್ಪಣೆಯ ಮೂಲಕ ದೇವರ ದಂಡನೆಯಿಂದ ಮುಕ್ತಗೊಂಡ ಜನಾಂಗದೊಂದಿಗೆ ತನ್ನ ಸ್ವಂತ ಮಕ್ಕಳೊಂದಿಗೆ ವ್ಯವಹರಿಸುವಂತೆ ವ್ಯವಹರಿಸುವ ಅಧಿಕಾರವನ್ನು ಪಡಕೊಂಡಿದ್ದಾನೆ.

ಈ ಮಾತಿನ ಈ ಅರ್ಥದಲ್ಲಿ ನಮ್ಮ ಕರ್ತನು ಎರಡನೆಯ ಆದಾಮನಾಗಿದ್ದಾನೆ – ಯಾಕೆಂದರೆ ಆತನು ಜನಾಂಗವನ್ನು ತನ್ನ ಸ್ವಂತ ಪ್ರಾಣವನ್ನರ್ಪಿಸಿ ಕೊಂಡುಕೊಳ್ಳುವುದರ ಮೂಲಕ, ಅದನ್ನು ವಿಮೋಚಿಸುವುದರ ಮೂಲಕ, ಅದರ ಮುಖ್ಯಸ್ಥನಾಗಿ ಆದಾಮನ ಸ್ಥಾನವನ್ನು ತೆಗೆದುಕೊಂಡನು. ಆದರೆ ಮಾನವನಾದ ಕ್ರಿಸ್ತನು ತನ್ನನ್ನೇ ಈಡುಬಲಿಯ ಬೆಲೆಯಾಗಿ ಅರ್ಪಿಸಿದ ಕಾರಣ, ಮಾನವನಾದ ಯೇಸು ಜನಾಂಗದ ತಂದೆಯಾಗಲು ಸಾಧ್ಯವಿಲ್ಲ. ಮಾನವನಾದ ಕ್ರಿಸ್ತನು ಆದಾಮನನ್ನೂ ಆತನ ಜನಾಂಗವನ್ನೂ

ವಿಮೋಚಿಸುವುದಕ್ಕಾಗಿ ತನ್ನದೆಲ್ಲವನ್ನೂ ಸಮರ್ಪಿಸಿದನು. ಇದು 'ಮಾನವನಿಗಾಗಿ ಮಾನವನು' ಎಂಬ ಬಲು ಅನುರೂಪವಾದ ಕ್ರಯವಾಗಿತ್ತು. ಆದಾಮನ ಸಂತತಿಯವರು ಆತನ ಅಪರಾಧದ ಸಮಯದಲ್ಲಿ ಇನ್ನೂ ಹುಟ್ಟಿರದ ಕಾರಣ, ಪ್ರತ್ಯಕ್ಷವಾಗಿ ಅಲ್ಲ, ಪರೋಕ್ಷವಾಗಿ ಅವರುಗಳು ಸಹಾ ಕೊಂಡುಕೊಳ್ಳಲ್ಪಟ್ಟರು. ಮಾನವನಾದ ಯೇಸುಕ್ರಿಸ್ತನ ನಡುಕಟ್ಟಿನಲ್ಲಿ ಇನ್ನೂ ಹುಟ್ಟದ ಬೀಜವು ಚಿಗುರಿ ಆದಾಮನ ಅಪರಾಧದ ಕಾಲದಲ್ಲಿ ಇನ್ನೂ ಹುಟ್ಟದ ಆತನ ಸಂತತಿಯವರಿಗೆ ಅನುರೂಪವಾದ ಕ್ರಯವಾಯಿತು.

## ಹಿಂದೆಗೆಯದ ಕ್ರಯವು
## The Price not taken back

ನಾವೀಗಾಗಲೇ ಕಂಡುಕೊಂಡಿರುವಂತೆ, ನಮ್ಮ ಕರ್ತನನ್ನು ಶರೀಧಾರಿಯಾಗಿ ಮರಣಕ್ಕೆ ಒಪ್ಪಿಸಿದರು, ಆದರೆ ಆತನು ಆತ್ಮ ಸ್ವರೂಪದಲ್ಲಿ ಜೀವಿಸುವವನಾದನು ಎಂದು ಹೇಳುತ್ತದೆ; ಮಾನವನನ್ನಾಗಿ ಆತನನ್ನು ಮರಣಕ್ಕೆ ಒಪ್ಪಿಸಿದರು ಎಂದು ಸತ್ಯವೇದದಲ್ಲಿ ಸ್ಪಷ್ಟವಾಗಿ ಬೋಧಿಸುತ್ತದೆ. ಆದರೆ ಸತ್ತವರೊಳಗಿಂದ ದೈವಿಕ ಕ್ರಮದ ಉನ್ನತಮಟ್ಟದ ಆತ್ಮೀಯ ಜೀವಿಯಾಗಿ ಆತನು ಎಬ್ಬಿಸಲ್ಪಟ್ಟನು. ಆತನು ಮನುಷ್ಯನಾಗಿ ಬಂದ ಕಾರ್ಯವನ್ನು ಪೂರೈಸಿದ್ದಾನೆ ಮತ್ತು ಈ ಸೇವೆಯನ್ನು ತಂದೆಯು ಒಪ್ಪುವ ರೀತಿಯಲ್ಲಿ ನಿರ್ವಹಿಸಿದ್ದಾನೆ. ಆತನು ಸತ್ತವರೊಳಗಿಂದ ಅತ್ಯಂತ ಗೌರವಯುತವಾಗಿ, ಘನತೆಯಿಂದ, ದೇವದೂತರುಗಳಿಗಿಂತ, ರಾಜತ್ವಗಳಿಗಿಂತ, ಶಕ್ತಿಗಳಿಗಿಂತ ಮತ್ತು ಹೆಸರಿಸಿದ ಎಲ್ಲಾ ಹೆಸರುಗಳಿಗಿಂತ ಎಷ್ಟೋ ಉನ್ನತವಾಗಿ ಎಬ್ಬಿಸಲ್ಪಟ್ಟಿದ್ದಾನೆ.

ನಮ್ಮ ಕರ್ತನು ಸತ್ತವರೊಳಗಿಂದ ಮನುಷ್ಯನಾಗಿ ಎದ್ದು ಬಾರದೆ ನಮ್ಮ ಈಡುಬಲಿಯ ಬೆಲೆಯನ್ನು ನ್ಯಾಯಕ್ಕೆ ಬಿಟ್ಟುಬಿಡಬಹುದಿತ್ತು ಆದಾಮನನ್ನು (ಮತ್ತು ನಿಷೇಧಿಸಲ್ಪಟ್ಟ ಆತನ ಜನಾಂಗವನ್ನು) ನ್ಯಾಯದಂಡನೆ ಮತ್ತು ಮರಣವೆಂಬ ಸೆರೆವಾಸದಿಂದ ಬಿಡುಗಡೆಗೊಳಿಸುವ ಸಲುವಾಗಿ ಮಾನವನಾದ ಯೇಸುಕ್ರಿಸ್ತನು ಮರಣಹೊಂದುವುದರ ಅಗತ್ಯಮಾತ್ರವಾಗಿರಲಿಲ್ಲ. ಆದರೆ ಯೇಸು ಮಾನವನಾಗಿ ಮತ್ತೆ ಜೀವಿಸುವ ಅಗತ್ಯವಿಲ್ಲದೆ ಆತನು ಸತ್ತವನಾಗಿಯೇ ಇರುತ್ತಿದ್ದರೂ ಎಲ್ಲಾ ನಿತ್ಯತೆಯ ಈಡುಬಲಿಯ ಬೆಲೆಯಾಗಿಯೇ ಇರುತ್ತಿದ್ದನು.

ನಮ್ಮ ಕರ್ತನಾದ ಯೇಸುವು ಮಾನವನಾಗಿಯೇ ಎದ್ದುಬರುತ್ತಿದ್ದರೆ ಎರಡು ಕೇಡುಗಳು ಸೂಚಿತ ವಾಗುತ್ತಿದ್ದವು. (1) ನಮ್ಮ ಈಡುಬೆಲೆಯನ್ನು ವಾಪಸ್ಸು ಪಡೆಯುವ ಅರ್ಥವುಂಟಾಗುತ್ತಿತ್ತು ಮತ್ತು ಇದು ಮೊದಲಿನಂತೆಯೇ ನಮ್ಮನ್ನು ಮರಣದ ಶಿಕ್ಷೆಯಲ್ಲಿಯೇ ಬಿಡುವುದಾಗುತ್ತಿತ್ತು. (2) ಇದು ಆತನು ಮಾನವನಾಗುವ ಮತ್ತು ನಮ್ಮ ವಿಮೋಚಕನಾಗುವ ಸಲುವಾಗಿ ಬಿಟ್ಟುಬಂದ ಆತನ ಉನ್ನತ ಸ್ವಭಾವವು ಶಾಶ್ವತವಾಗಿ ನಷ್ಟವಾಗುತ್ತಿತ್ತು; ಈ ರೀತಿಯಲ್ಲಿ ದೇವರಿಗೆ ಆತನು ತೋರಿಸಿದ ವಿಧೇಯತೆಯ ಫಲವು ಆತನನ್ನು ಶಾಶ್ವತವಾಗಿ ಕೆಳಮಟ್ಟಕ್ಕೆ ತರುವುದಾಯಿತು ಎಂಬ ಅಭಿಪ್ರಾಯ ಮೂಡಿಸುತ್ತಿತ್ತು. ಆದರೆ ದೇವರ ವ್ಯವಸ್ಥೆಯಲ್ಲಿ ಇಂಥಾಃ ಯಾವುದೇ ಅಸಂಬದ್ಧತೆಗಳಾಗಲೀ, ಅಸಂಗತತೆಗಳಾಗಲೀ ಕಂಡುಬರುವುದಿಲ್ಲ. ನಮ್ಮ ಕರ್ತನು ತನ್ನನ್ನು ದೀನನಾಗಿಸಿಕೊಂಡನು, ಮನುಷ್ಯನಾದನು, ಮತ್ತು ಮನುಷ್ಯನಾಗಿಯೇ ಆತನು ತನ್ನ ಪ್ರಾಣವನ್ನು ಪತನಗೊಂಡ ಮಾನವನ ಈಡು ಬೆಲೆಯಾಗಿ ಒಪ್ಪಿಸಿಕೊಟ್ಟನು; ಈ ನಿಷ್ಠೆಯ ಬಹುಮಾನವಾಗಿ ಆತನನ್ನು ಪ್ರಜ್ಞೆಯುಳ್ಳ ಜೀವಿಯಾಗಿ ಪುನರ್‌ವಶಪಡಿಸಿದ್ದಲ್ಲದೆ, ಆತನಿಗೆ ಮಾನವರಿಗಿಂತ ಹೆಚ್ಚಾದ ಮಾತ್ರವಲ್ಲ, ಆತನ ಹಿಂದಿನ ಸ್ವಭಾವಕ್ಕೂ ಹೆಚ್ಚಾದ ಸ್ವಭಾವವನ್ನು ದಯಪಾಲಿಸಿದನು ಮತ್ತು ದೈವ ಸ್ವಭಾವದ ಅತ್ಯಂತ ಶ್ರೇಷ್ಠ ಗುಣ ಮತ್ತು ಗೌರವಗಳೊಂದಿಗೆ ಅದರ ಪಾಲುದಾರನನ್ನಾಗಿ ಮಾಡಿಕೊಂಡನು. ಪ್ರಸ್ತುತದಲ್ಲಿನ ಆತನ ಈ ಉನ್ನತ ಸ್ಥಿತಿಯಲ್ಲಿ ಆತನಿಗೆ ಮರಣವೆಂಬುದು ಸಾಧ್ಯವೇ ಇಲ್ಲ – ಆತನು ಈಗ ಅಮರತ್ವವುಳ್ಳವನು.

ಕರ್ತನಾದ ಯೇಸುವು ಆದಾಮ ಮತ್ತು ಆತನ ಜನಾಂಗವನ್ನು ಕೊಂಡುಕೊಳ್ಳುವುದಕ್ಕಾಗಿ ನೀಡಲ್ಪಟ್ಟ ಈಡು ಬೆಲೆಯಾಗಿರುವುದರಿಂದ, ಮಾನವನಾದ ಯೇಸುವು ಎರಡನೆಯ ಆದಾಮನಾಗುವುದಿಲ್ಲ, ಆದಾಮನ ಬದಲಾಗಿ ಜನಾಂಗದ ನೂತನ ತಂದೆ ಆಗುವುದಿಲ್ಲ; ಯಾಕೆಂದರೆ ಮಾನವನಾಗಿದ್ದ ಯೇಸು ಸತ್ತಿದ್ದಾನೆ, ಸದಾಕಾಲಕ್ಕೂ ಮರಣಹೊಂದಿದ್ದಾನೆ. ಆದಕಾರಣ ಆತನು ಈ ಲೋಕದ ತಂದೆ ಅಥವಾ ಜೀವದಾಯಕನಾಗಲಾರನು.

ಈಗ ಕೊಂಡುಕೊಂಡ ಕಾರಣ, ಮಾನವ ಕುಟುಂಬಕ್ಕೆ ತಂದೆಯೆಂಬ ಬಿರುದನ್ನು ಹೊಂದಿರುವುದರಿಂದ ಸತ್ತು ಎದ್ದುಬಂದ ಮತ್ತು ಮಹಿಮೆಯುಳ್ಳ ಯೇಸುವು ದೇವಸ್ವಭಾವದಲ್ಲಿ ಪಾಲುದಾರನಾಗಿದ್ದಾನೆ – ಈತನೇ ಎರಡನೆಯ ಆದಾಮನು. ನಾವೀಗಾಗಲೇ ಆರನೆಯ ಅಧ್ಯಾಯದಲ್ಲಿ ಕಂಡುಕೊಂಡಿರುವಂತೆ, ಮಾನವ ಶರೀರಧಾರಿಯಾದ ಯೇಸುವು ಎರಡನೆಯ ಆದಾಮನಲ್ಲ; ಆತನು ಒಂದು ಜನಾಂಗದ ತಂದೆಯಲ್ಲ. ಆದರೆ ಆತನು ಕೇವಲ ಆದಾಮ ಮತ್ತು ಆತನ ಜನಾಂಗವನ್ನು ಕೊಂಡುಕೊಳ್ಳಲಿಕ್ಕಾಗಿ, ಆ ಮೂಲಕ ತಂದೆಯಾಗು ವುದಕ್ಕಾಗಿ ಬಂದವನು. ಈ ಕೊಂಡುಕೊಳ್ಳುವಿಕೆಯಲ್ಲಿ ಆತನದೆಲ್ಲವನ್ನೂ ತೆಗೆದುಕೊಳ್ಳಲಾಯಿತು. ಯಾವುದೂ ಉಳಿದುಕೊಳ್ಳಲಿಲ್ಲ. ಅಪೋಸ್ತಲನು ಹೇಳುವಂತೆ ಇದು ದೇವರ ವಾಕ್ಯದ ಆಲೋಚನೆಯಾಗಿದೆ – ಮೊದಲನೆಯ

ಮಾನವನು ಈ ಲೋಕದವನಾಗಿದ್ದು ಭೂಮಿಗೆ ಸಂಬಂಧಪಟ್ಟವನಾಗಿದ್ದನು. ಎರಡನೆಯ ಮನುಷ್ಯನು (ಎರಡನೆಯ ಆದಾಮನು) ಪರಲೋಕದ ಕರ್ತನು (ಮಿಲಿಯಾಂತರ ಯುಗದ ಆತನ ಎರಡನೆಯ ಪ್ರತ್ಯಕ್ಷತೆಯಲ್ಲಿ) . . . ನಾವು ಈ ಲೋಕದ (ಆದಾಮನ) ರೂಪವನ್ನು ಹೊಂದಿರುವುದರಿಂದ, ನಾವು [ಕ್ರಿಸ್ತನೊಂದಿಗೆ ಸಹ ಬಾಧ್ಯಸ್ತವಾಗಿರುವ ಸಭೆಯು, ಮತ್ತು ದೇವ ಸ್ವಭಾವದ ಅತ್ಯಂತ ಶ್ರೇಷ್ಟ ಮಹಾ ಅಮೂಲ್ಯ ವಾಗ್ದಾನಗಳಲ್ಲಿ ಪಾಲುದಾರರು] (ರೋಮಾ. 8:17; 2 ಪೇತ್ರ 1:4) ಸಹಾ ಪರಲೋಕದ ರೂಪವನ್ನು ಹೊಂದಿಕೊಳ್ಳುತ್ತೇವೆ (ಎರಡನೆಯ ಆದಾಮನ). ಆದುದರಿಂದ "ಮೊದಲನೆಯ ಮನುಷ್ಯನಾದ ಆದಾಮನು ಬದುಕುವ ಪ್ರಾಣಿಯಾದನು, ಕಡೆಯ ಆದಾಮನಾದರೋ ಬದುಕಿಸುವ ಆತ್ಮನು. ಆದಾಗ್ಯೂ ಆತ್ಮೀಕವಾದದ್ದು ಮೊದಲನೆಯದಲ್ಲ, ಪ್ರಾಕೃತವಾದದ್ದು ಮೊದಲನೆಯದು" (1 ಕೊರಿಂಥ 15:45–48) ಎಂದು ಬರೆದದೆ.

"ಜನಾಂಗವನ್ನು ಯಾತಕ್ಕಾಗಿ ಕೊಂಡುಕೊಳ್ಳಲಾಯಿತು?" ಎಂಬ ಪ್ರಶ್ನೆಯನ್ನು ಮುಂದುವರಿಸುತ್ತಾ ನಮಗೆ "ಅದನ್ನು ಕೊಂಡುಕೊಳ್ಳುವುದರ ಮೂಲಕ ನಮ್ಮ ಕರ್ತನು ನೂತನ ಒಡಂಬಡಿಕೆಯ ಮಧ್ಯಸ್ಥಗಾರನಾಗಿದ್ದಾನೆ (ಹಾಗಾಗುವ ಅಧಿಕಾರವನ್ನು ಪಡಕೊಂಡಿದ್ದಾನೆ)" ಎಂಬ ಅಪೋಸ್ತಲನ ಸಾಕ್ಷ್ಯವೊಂದಿದೆ. (ಇಬ್ರಿಯ 8:6, 9:14–16 ನೋಡಿರಿ). ನೂತನ ಒಡಂಬಡಿಕೆಯು ದೇವರು ಮಾಡಿದ ಒಂದು ವ್ಯವಸ್ಥೆಯಾಗಿದ್ದು ಮತ್ತು ಇದರಿಂದ ಮತ್ತು ಇದರ ಮೂಲಕವಾಗಿ ಆತನು ಪತನಗೊಂಡ ಜನಾಂಗದವರಿಗೆ ಕರುಣೆತೋರಿಸಬಹುದಾಗಿದೆ. ಈ ನೂತನ ಒಡಂಬಡಿಕೆಯು ಒಬ್ಬ ಮಧ್ಯಸ್ಥಗಾರನಿಲ್ಲದೆ ಜಾರಿಯಾಗುವುದಿಲ್ಲ. ಈ ಮಧ್ಯಸ್ಥಗಾರನು ಮಾನವ ಜಾತಿಯ ಪರವಾಗಿ ಕೆಲವೊಂದು ಸಂಗತಿಗಳನ್ನು ದೇವರಿಗೆ ಖಾತರಿಪಡಿಸಬೇಕಾಗುತ್ತದೆ. ಮೊಟ್ಟಮೊದಲನೆಯದಾಗಿ ಆತನು ಮಾನವನನ್ನು ಸಂಪೂರ್ಣವಾದ ಈಡುಬಲಿಯ ಬೆಲೆತೆತ್ತು ವಿಮೋಚಿಸಬೇಕು. ನಮ್ಮ ಕರ್ತನಾದ ಯೇಸು ಮಾಡಿದ ಈ ಯಜ್ಞವನ್ನು ಆ ಕಾರಣದಿಂದ 'ಹೊಸಒಡಂಬಡಿಕೆಯ ರಕ್ತ' ಎಂದು ಹೆಸರಿಸಲಾಯಿತು. ಇದರಿಂದ ಈ ಯಜ್ಞವು ಸಫಲವಾಗಿ ಪರಿಣಾಮಕಾರಿ ಯಾಯಿತು. ಪಾಪದ ಕಾರಣ ಶಿಕ್ಷೆಹೊತ್ತು ದಂಡನೆಗೆ ಒಳಗಾಗಿದ್ದ ಮಾನವ ಜಾತಿಯನ್ನು ಕೊಂಡುಕೊಂಡ ಆತನು ನೂತನ ಒಡಂಬಡಿಕೆಯನ್ನು ಮುದ್ರೆಹಾಕಿ ಕಾರ್ಯಗತಗೊಳ್ಳುವಂತೆ ಮಾಡಬಹುದು. ಮಧ್ಯಸ್ಥಗಾರನು ತಾನು ಕೊಂಡುಕೊಂಡ ಜನಾಂಗಕ್ಕೆ ಇದನ್ನು ಮಾಡಲು ಪೂರ್ಣ ಸಿದ್ಧನಾಗಿದ್ದಾನೆ ಮತ್ತು ಪೂರ್ಣ ಅಧಿಕಾರಹೊಂದಿದ್ದಾನೆ. ಆತನು ಮಾಡಬಹುದಾದುದೆಂದರೆ, ಅವರನ್ನು ಸಂಪೂರ್ಣವಾದ ಮಾನವ ಸಮರ್ಪಕತೆಗೆ ಮತ್ತು ಪರಿಪೂರ್ಣವಾಗಿ ದೇವರ ಸಾಮರಸ್ಯಕ್ಕೆ ಹಿಂತಿರುಗಿಸುವುದು – ನಂತರದಲ್ಲಿ ಆತನು ಅವರನ್ನು ತನ್ನ ತಂದೆಯ ಸಮ್ಮುಖದಲ್ಲಿ ನಿಷ್ಕಳಂಕರೆಂದೂ, ನಿರ್ದೋಷಿಗಳೆಂದೂ ಪ್ರಸ್ತುತಿಪಡಿಸಬಹುದು, ಪ್ರೀತಿಯಲ್ಲಿ, ಯಾವುದೇ ವಿಶೇಷವಾದ ಒಡಂಬಡಿಕೆಯು, ಪುನಃಸಂಧಾನದ ಅವಶ್ಯಕತೆ ಅವರಿಗೆ ಇರುವುದಿಲ್ಲ ಅಥವಾ ಮಧ್ಯಸ್ಥಗಾರನು ಬೇಕಾಗುವುದಿಲ್ಲ. ಆದರೆ ಆ ಕಾರ್ಯವನ್ನು ಇದುವರೆಗೆ ಇನ್ನೂ ಪೂರೈಸ ಬೇಕಾಗಿದ್ದು ಇದು ಕೇವಲ ಪ್ರಾರಂಭವಾಗಿದೆ. ಆದುದರಿಂದ ಈ ಲೋಕವು ಇನ್ನೂ ತಂದೆಯಿಂದ ಅಂಗೀಕಾರ ಹೊಂದಿರುವುದಿಲ್ಲ, ಇಚ್ಛೆಯುಳ್ಳವರನ್ನು ಮತ್ತು ವಿಧೇಯರಾದವರನ್ನು ತಂದೆಯೊಡನೆ ಪೂರ್ಣವಾದ ಸಾಮರಸ್ಯ ಮತ್ತು ಪುನಃಸಂಧಾನಕ್ಕೆ ತರುವಂತೆ ಮಿಲಿಯಾಂತರಯುಗದ ಎಲ್ಲಾ ಪುನಃಸಂಧಾನ ಕಾರ್ಯಗಳನ್ನೂ ಇದು ಒಳಗೊಂಡಿದೆ.

ಇದೇ ಸಮಯದಲ್ಲಿ, ಈ ಸುವಾರ್ತಾ ಯುಗದಲ್ಲಿ, ಒಂದು ಚಿಕ್ಕ ವಿಮೋಚಿತ ಗುಂಪನ್ನು ಕರೆಯಲಾಗಿದೆ ಮತ್ತು ಈ ದೈವಿಕ ಕರೆಗೆ ಓಗೊಟ್ಟು ಮಧ್ಯಸ್ಥಗಾರನ ಮತ್ತು ಆತನ ಕಾರ್ಯದ ಮೇಲೆ ನಂಬಿಕೆಯಿಟ್ಟು ತಂದೆಯನ್ನು ಸಮೀಪಿಸುವವರು ತಮ್ಮನ್ನು ವಿಮೋಚಕನೊಂದಿಗೆ ದೇವರ ಸೇವೆಯಲ್ಲಿ ಮತ್ತು ಆತನ ಯೋಜನೆಯಲ್ಲಿ ಜೀವಂತ ಬಲಿಗಳಾಗಿ ದೇವರ ಪ್ರೀತಿಯ ಮಗನ ರೀತಿಯಲ್ಲಿರುವಂತೆ ಸರ್ವಸಂಪೂರ್ಣರು, ಸಮರ್ಪಕರು ಎಂದು ಎಣಿಸಲ್ಪಡುವರು. ಅವರು ಇಚ್ಛಾಪೂರ್ವಕವಾಗಿ ಮತ್ತು ಸಂತೋಷದಿಂದ ಆತನೊಂದಿಗೆ ಶ್ರಮೆ ತಾಳುವವರಾದರೆ ಅವರು ಸಹಾ ಆತನೊಂದಿಗೆ ನಿಕಟವಾಗಿ ಮಹಿಮೆಹೊಂದುಕೊಳ್ಳುವಂತೆ, ನೂತನ ಒಡಂಬಡಿಕೆಯ ಷರತ್ತಿನ ಮೇರೆಗೆ, ಮಿಲಿಯಾಂತರ ಯುಗದ ಆಶೀರ್ವಾದದಾಯಕವಾದ ಕಾರ್ಯದಲ್ಲಿ ಅವರನ್ನು ಆತನೊಂದಿಗೆ ಸಹಭಾಗಿಗಳೂ, ಸಹಬಾಧ್ಯಸ್ಥರೂ ಆಗಿ ಮಾಡುವ ಉದ್ದೇಶವಿದೆ. ಇವರುಗಳು ಮಾನವಜಾತಿಯ ಶೇಷಜನರಿಗೆ ಹೊರತಾದವರು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ. ಸುವಾರ್ತಾ ಯುಗದಲ್ಲಿ ಈ 'ಆಯ್ಕೆಗೊಂಡವರನ್ನು' 'ಕ್ರಿಸ್ತನ ಸಹೋದರರು' 'ಕ್ರಿಸ್ತನ ಮದಲಗಿತ್ತಿ', 'ಆತನ ಸಭೆ ಎಂಬ ದೇಹ' ಎಂದು ಎಣಿಸಲಾಗುವುದೇ ಹೊರತು ಅವರನ್ನು ಎಂದೂ 'ಕ್ರಿಸ್ತನ ಮಕ್ಕಳು' ಎಂದು ಕರೆಯಲಾಗುವುದಿಲ್ಲ. ಇವರುಗಳು ಪರಲೋಕದ ತಂದೆಯ ಮಕ್ಕಳಾಗಿ, ಸತ್ಯ ವಾಕ್ಯದ ಮೂಲಕ ಆ ವಾಕ್ಯದಲ್ಲಿನ ಚೇತನದ ಮೂಲಕ ಪರಲೋಕದ ಸ್ವಭಾವದಲ್ಲಿ ಜನಿಸಿದವರೆಂದು ಅಂಗೀಕರಿಸಲ್ಪಡುತ್ತಾರೆ. ನಾವು ಕಂಡುಕೊಂಡಂತೆ ಇವರುಗಳು ಯಥಾರ್ಥವಾಗಿ ಯೆಹೋವನನ್ನು ತಮ್ಮ ತಂದೆಯೆಂದು ಒಪ್ಪಿಕೊಳ್ಳಬಹುದು. ಯಾಕೆಂದರೆ ಇವರುಗಳು ಆತನಿಂದ

ನೇರವಾಗಿ ಪಡಕೊಂಡವರು ಆದುದರಿಂದ ಇವರುಗಳು ಕ್ರಿಸ್ತನ ಸಹೋದರರುಗಳಾಗಿದ್ದಾರೆ – 1 ಪೇತ್ರ 1:3.

ಸಾಮಾನ್ಯವಾಗಿ ದೇವರ ಯೋಜನೆಯು ಭೂಲೋಕಕ್ಕೆ ಹೇಗೂ ಸ್ವಲ್ಪ ವಿಭಿನ್ನವಾಗಿದೆ; ಅವರನ್ನು ನಂಬಿಕೆಯ ಮೂಲಕ ಸಮರ್ಥಿಸಿ ನಂತರ ಅವರನ್ನು ದೇವರ ಸ್ವಭಾವ ಮುಂತಾದವುಗಳಿಗೆ ಪಡಕೊಳ್ಳುವುದರ ಬದಲಾಗಿ ಅವರು ಮಿಲಿಯಾಂತರ ಯುಗದವರೆಗೆ ಕಾಯುತ್ತಾರೆ. ನಂತರ ಅವರು ಯೆಹೋವನಿಂದ ನೂತನ ಸ್ವಭಾವಕ್ಕೆ ಪಡಕೊಳ್ಳದೆ ಅವರು ತಮ್ಮ ಹಳೆಯ ಸ್ವಭಾವವನ್ನು ಅಂದರೆ ಕಳಂಕಗಳಿಂದಲೂ, ಪಾಪದ ಭ್ರಷ್ಟತೆಯಿಂದಲೂ ಮುಕ್ತವಾದ ಮಾನವ ಸ್ವಭಾವವನ್ನು ಮತ್ತೆ ಪಡಕೊಳ್ಳುವರು. ಲೋಕದ ನಿರೀಕ್ಷೆಯೆಂದರೆ ಏದೇನಿನಲ್ಲಿ ಕಳಕೊಂಡದ್ದನ್ನು ಪುನಃವಶಪಡಿಸಿ ಕೊಳ್ಳುವುದು (ಮತ್ತಾಯ 18:11; ಅ.ಕೃ. 3:19–21 ಇವುಗಳನ್ನು ನೋಡಿರಿ). ಈಡುಬಲಿಯಲ್ಲಿ ದೇವರು ಲೋಕಕ್ಕಾಗಿ ಕೊಟ್ಟಿರುವ ಅನುಗ್ರಹವನ್ನು ಕಾಣುತ್ತೇವೆ; ಮನುಷ್ಯನಾಗಿದ್ದ ಯೇಸುಕ್ರಿಸ್ತನು ತನ್ನ ಮಾನವ ಸರ್ವಸಂಪೂರ್ಣತೆಯನ್ನು ಮತ್ತು ಅದು ಗ್ರಹಿಸುವ ಎಲ್ಲಾ ಅಧಿಕಾರ ಮತ್ತು ಸವಲತ್ತುಗಳನ್ನು ಮಾನವ ಜಾತಿಯನ್ನು ವಿಮೋಚಿಸುವ ಸಲುವಾಗಿ ತ್ಯಾಗಮಾಡಿದನು. ಮಾನವ ಜಾತಿಯು ತನ್ನ ಮಾನವ ಪರಿಪೂರ್ಣತೆಯನ್ನು, ಮಾನವ ಪ್ರಭುತ್ವ ಮತ್ತು ಮಾನವನ ಎಲ್ಲಾ ಅಧಿಕಾರ ಮತ್ತು ಸವಲತ್ತುಗಳನ್ನೂ, ದೇವರ ಸಾಂಗತ್ಯ ಮತ್ತು ನಿತ್ಯಜೀವವನ್ನೊಳಗೊಂಡಂತೆ ಎಲ್ಲವನ್ನೂ ಏದೇನ್ ತೋಟದಲ್ಲಿ ಕಳಕೊಂಡಿತ್ತು. ಮಾನವ ಜಾತಿಗಾಗಿ ಕೊಂಡುಕೊಂಡ ಈ ಸಂಗತಿಗಳನ್ನು ನೂತನ ಒಡಂಬಡಿಕೆಯ ಅಡಿಯಲ್ಲಿ ಸೂಕ್ತಸಮಯದಲ್ಲಿ ಮನುಕುಲಕ್ಕೆ ನೀಡಲಾಗುವುದು.

ಈ ಸುವಾರ್ತಾಯುಗವನ್ನು 'ಕ್ರಿಸ್ತನ ದೇಹವನ್ನು' ಅಯ್ಕೆಮಾಡುವುದಕ್ಕಾಗಿ ದೇವರು ಉಪಯೋಗಿಸಿ ಕೊಂಡಿದ್ದಾನೆ ಎಂದು ಲೋಕವು ಅರಿತುಕೊಳ್ಳುವ ಸತ್ಯವು, ಸಭೆಯ ಮಹಾ ಶಿರಸ್ಸಾಗಿರುವ ನಮ್ಮ ಕರ್ತನಾದ ಯೇಸುವು ತನ್ನನ್ನು ಮಾತ್ರವೇ ಲೋಕದ ಜೀವಧಾಯಕನಾದ ದೇವರ ಅಧಿಕಾರ ಸ್ಥಾನದಲ್ಲಿ ಇರಿಸಿಕೊಳ್ಳುವ ಬದಲಾಗಿ, ಆತನು ತನ್ನೊಂದಿಗೆ ಒಂದು 'ಚಿಕ್ಕ ಹಿಂಡನ್ನು' ಸೇರಿಸಿಕೊಂಡಿದ್ದಾನೆ. ಅವರುಗಳೂ ಆತನಂತೆಯೇ ಇದ್ದಾರೆ ಮತ್ತು ಪ್ರಸ್ತುತ ಸಮಯದ ಶ್ರಮೆಯಲ್ಲಿ ಭಾಗಿಗಳಾಗಿದ್ದಾರೆ ಮತ್ತು ಬರಲಿರುವ ಮಹಿಮೆಯಲ್ಲಿಯೂ ಪಾಲುದಾರರಾಗಲಿದ್ದಾರೆ ಮತ್ತು ಮಹಾ ಪ್ರವಾದಿಯಾಗಿ, ಮಹಾ ಯಾಜಕನಾಗಿ, ಮಹಾ ಅರಸನಾಗಿ, ಮಹಾ ಜೀವದಾಯಕನಾಗಿ ಅಥವಾ ಮಾನವ ಕುಲದ ತಂದೆಯಾಗಿ ಆತನ ಅಂಶವಾಗಿದ್ದಾರೆ. ನೂತನ ಒಡಂಬಡಿಕೆಯ ಷರತ್ತುಗಳಿಗನುಸಾರವಾಗಿ ಅದನ್ನು ಅಂಗೀಕರಿಸುವವರಿಗೆ ಜೀವವನ್ನು ಕೊಡುವವರಾಗಿದ್ದಾರೆ. ಈ ಆಲೋಚನೆಯೊಂದಿಗೆ ಸಾಮರಸ್ಯವಾಗಿ ವೇದವಚನಗಳು ನಮ್ಮ ಕರ್ತನ ಒಂದು ಬಿರುದನ್ನು 'ನಿತ್ಯನಾದ ತಂದೆ' ಎಂಬುದಾಗಿ ಹೇಳುತ್ತದೆ. ಆತನು ಯಾವುದೇ ಅರ್ಥದಲ್ಲಿ ಅಥವಾ ಮಟ್ಟದಲ್ಲಿ ಈ ಅಧಿಕಾರ ಸ್ಥಾನವನ್ನು ಇನ್ನೂ ತುಂಬಿಲ್ಲ. ಆದರೆ ತನ್ನ ಜೀವದ ಬೆಲೆತೆತ್ತು ಈ ಲೋಕವನ್ನು ಕೊಂಡುಕೊಂಡಾತನಿಗೆ ತನ್ನಲ್ಲಿಯೆ ಸ್ವಂತ ಶಕ್ತಿಯುಂಟು. ಇದು ದೈವಿಕ ವ್ಯವಸ್ಥೆಯ ಪ್ರಕಾರವಾಗಿ ಪೂರ್ತಿ ಹಕ್ಕಿನಿಂದ, ಬಿರುದು ಮತ್ತು ಅಧಿಕಾರದಿಂದ ಯಾರ್ಯಾರು ಇದನ್ನು ಸ್ವೀಕರಿಸುವರೋ ಅವರಿಗೆ ಸಂಪರ್ಕಿಸುವನು. ಇದು ಆತನ ಷರತ್ತಿನ ಪ್ರಕಾರವಾಗಿಯೇ ಇರಬೇಕು ಹಾಗೂ ಏನೆಲ್ಲಾ ಕಳೆದುಹೋಗಿತ್ತೋ ಅವೆಲ್ಲವನ್ನೂ ಪುನಃ ಜೀವಕ್ಕೆ, ಮಾನವ ಹಕ್ಕುಗಳಿಗೆ ಮತ್ತು ಪರಿಪೂರ್ಣತೆಗೆ ಹೆಚ್ಚಿನ ಜ್ಞಾನವನ್ನು ಕೊಟ್ಟು ಕೊಂಡುಕೊಂಡನು.

ಇದಕ್ಕೂ ಹೆಚ್ಚಾಗಿ, ಈ ಜನಾಂಗದ ನ್ಯಾಯಯುತ ವಾದ ತಂದೆಯಾಗಿ ತನ್ನ ಜೀವದ ಬೆಲೆತೆತ್ತು ಕೊಂಡುಕೊಂಡ ಜೀವವನ್ನು ಅವರಿಗೆ ನೀಡುವವನಾಗಿದ್ದು ಮಾನವ ಜನಾಂಗವು ಸಂಪೂರ್ಣವಾಗಿ ಕರ್ತನಾದ ಯೇಸುವಿನ ಕೈಯಲ್ಲಿದೆ ಎಂಬ ಅರ್ಥವನ್ನು ವೇದವಚನಗಳು ನೀಡುತ್ತವೆ. ಆತನು ಅವರೊಂದಿಗೆ ನಿರಪೇಕ್ಷವಾಗಿ ವ್ಯವಹರಿಸುತ್ತಾನೆ ಮತ್ತು ನಿತ್ಯಜೀವಕ್ಕೆ ಅವರ ಅರ್ಹತೆ ಇರುವದನ್ನು ಅಥವಾ ಇಲ್ಲದಿರುವದನ್ನು ನಿರ್ಣಯಿಸುತ್ತಾನೆ. ಇದನ್ನು ಆತನು ಈ ಲೋಕದ ತಂದೆಯಾಗಿ ಮುಂದಿನ ಯುಗದಲ್ಲಿ ಮಾಡುವವ ನಾಗಿದ್ದಾನೆ. ನಮ್ಮ ಕರ್ತನಾದ ಯೇಸುವು ತನ್ನ ಸಭೆಯಾದ, ತನ್ನ ಮದಲಗಿತ್ತಿಯಾದ ಸಭೆಗೆ ಇದನ್ನು ಇಂದಿನ ಯುಗದಲ್ಲೇ ಮಾಡುವವನಾಗಿದ್ದಾನೆ. ಈ ಬಗ್ಗೆ ಅಪೋಸ್ತಲನ ಸೂಚನೆಯೆಂದರೆ, ಪರಲೋಕದ ತಂದೆಯು ಕ್ರಿಸ್ತನ ಶಿರಸ್ಸಾಗಿದ್ದಾನೆ. ಅಂತೆಯೇ ಕ್ರಿಸ್ತನು ಸಭೆಯ ಶಿರಸ್ಸಾಗಿದ್ದಾನೆ; ಒಬ್ಬ ಪತಿಯಾಗಿ ಆತನು ಪತ್ನಿಯ ಮತ್ತು ಕುಟುಂಬದ ಶಿರಸ್ಸಾಗಿದ್ದಾನೆ. ಅದೇ ಪ್ರಕಾರವಾಗಿ ನಾವು "ಇದಲ್ಲದೆ ತಂದೆಯು ಯಾರಿಗೂ ತೀರ್ಪುಮಾಡುವುದೂ ಇಲ್ಲ; ತೀರ್ಪುಮಾಡುವ ಅಧಿಕಾರವನ್ನೆಲ್ಲಾ ಮಗನಿಗೆ ಕೊಟ್ಟಿದ್ದಾನೆ" (ಯೋಹಾನ 5:22) ಎಂದು ನೋಡುತ್ತೇವೆ. ಕ್ರಿಸ್ತನ ನಿಶ್ಚಿತಾರ್ಥವಾದ ವಧುವಿಗೆ ತನ್ನ ಪ್ರೀತಿಯ ವರನ ಮೂಲಕದ ಹೊರತಾಗಿ ತಂದೆಯ ಬಳಿ ಯಾವುದೇ ನೆಲೆಯಿಲ್ಲ. ಆಕೆಯ ಕೋರಿಕೆಗಳೆಲ್ಲವೂ ಆತನ ಹೆಸರಿನಲ್ಲಿ, ಆತನ ಅರ್ಹತೆಯ ಮೂಲಕ ಮಾಡಲ್ಪಡುತ್ತವೆ. ಮತ್ತು ಹೀಗೆ ಮಾಡುವುದನ್ನು ಸಮರ್ಪಕವಾದದ್ದು ಬರುವವರೆಗೂ ಮುಂದುವರಿಸ ಬೇಕಾಗುತ್ತದೆ. – ಆಗ ಆಕೆಯು ದೇವರ ಮಕ್ಕಳ

ಪೂರ್ಣವಾದ ಸ್ವಾತಂತ್ರ್ಯವೆಂಬ ಮಹಿಮೆಗೆ ಮೊದಲನೆಯ ಪುನರುತ್ಥಾನದಲ್ಲಿ ಸ್ವೀಕರಿಸಲ್ಪಡುತ್ತಾಳೆ.

ಅದೇ ರೀತಿಯಲ್ಲಿ, ಮಾನವ ಜಾತಿಯ ಈ ಲೋಕವು, ಕ್ರಿಸ್ತನ ಮಕ್ಕಳು ಎಲ್ಲರೂ ಅವರ ಶಿರಸ್ಸೂ, ತಂದೆಯೂ ಆಗಿರುವ ಆತನಿಗೆ ವರದಿ ಮಾಡಿಕೊಳ್ಳಬೇಕು. ಇಲ್ಲವಾದಲ್ಲಿ ಅವರಿಗೆ ಪರಲೋಕದ ತಂದೆಯೊಡನೆ ಯಾವುದೇ ಹೊಕ್ಕುಬಳಕೆ ಇರುವುದಿಲ್ಲ, ಅಥವಾ ಅವನಿಂದ ಮಿಲಿಯಾಂತರ ಯುಗದವರೆಗೆ, ಈ ಸವಲತ್ತುಗಳನ್ನು ಪಡಕೊಳ್ಳುವವರನ್ನು ಪುನಃವಶಪಡಿಸಿಕೊಂಡು ಸಂಪೂರ್ಣತೆಗೆ ಹಿಂದಿರುಗಿಸುವ ತನಕ ಅವರುಗಳು ಗುರುತಿಸಲ್ಪಡುವುದೇ ಇಲ್ಲ. ಆದರೆ, ಮಿಲಿಯಾಂತರ ಯುಗದ ಅಂತ್ಯದಲ್ಲಿ, ನಮ್ಮ ಕರ್ತನಾದ ಯೇಸುವು ತನ್ನ ರಾಜ್ಯವನ್ನು ಪರಲೋಕದ ತಂದೆಗೆ ಒಪ್ಪಿಸಿಕೊಡುವಾಗ, ಅವರನ್ನು ಎಲ್ಲರ ಮಹಾ ಭವ್ಯನಾದ ತಂದೆಯ, ಸರ್ವಶಕ್ತನಾದ ಯೆಹೋವನ ನೇರವಾದ ನಿಯಂತ್ರಣಕ್ಕೆ ಪರಿಚಯಿಸಲಾಗುವುದು – 1 ಕೊರಿಂಥ 15:24.

ಈ ದೃಷ್ಟಿಕೋನದಿಂದ, ನಮ್ಮ ಕರ್ತನಾದ ಯೇಸುವನ್ನು ವಿಮೋಚಿಸಲ್ಪಟ್ಟವರ, ಪುನಃವಶಗೊಂಡ ಜನಾಂಗದವರ ತಂದೆಯೆಂದು ಏಕೆ ಕರೆಯುತ್ತಾರೆ ಆದರೆ ಆತನು ಆದಾಮನ ನೇರವಾದ ಸೃಷ್ಟಿಕರ್ತನಾಗಿದ್ದರೂ ಆತನನ್ನು ಈ ಮೊದಲು ಆದಾಮನ ಅಥವಾ ಆತನ ಮಕ್ಕಳ ತಂದೆಯೆಂದು ಯಾಕೆ ಕರೆಯಲಿಲ್ಲ ಎಂಬುದನ್ನು ನಾವು ಕಂಡುಕೊಳ್ಳಬಹುದು. “ಆತನಿಲ್ಲದೆ ಯಾವುದನ್ನೂ ಉಂಟುಮಾಡಲಿಲ್ಲ” ಎಂದು ಬರೆದಿದೆಯಲ್ಲಾ. ಮೂಲ ಸೃಷ್ಟಿಯಲ್ಲಿ ವಾಕ್ಯವೆಂಬಾತನು ದೇವರ ನಿಯೋಗಿಯಾಗಿದ್ದನು ಮತ್ತು ತನಗೊಪ್ಪಿಸಿದ ಕಾರ್ಯವನ್ನು ತನ್ನನ್ನು ವ್ಯಯಿಸಿಕೊಳ್ಳದೆ ನೆರವೇರಿಸಿದನು. ಆದರೆ ಎರಡನೆಯ ಆದಾಮನಾಗಿ ಆತನು ಜನರಿಗೆ ತನ್ನ ಸ್ವಂತ ಬೆಲೆತೆತ್ತು ಜೀವದ ಹಕ್ಕುಗಳನ್ನು ನೀಡುವವನಾಗಿದ್ದಾನೆ ಮತ್ತು ಅದನ್ನು ತನ್ನ ಅಮೂಲ್ಯವಾದ ರಕ್ತ ಸುರಿಸಿ ಕೊಂಡುಕೊಂಡಿದ್ದಾನೆ.

## ಈಡುಬಲಿಯು ಕ್ಷಮಾದಾನವಲ್ಲ
## Ransom not "Pardon"

‘ಈಡು’ ಮತ್ತು ‘ಕ್ಷಮೆ’ ಇವುಗಳ ನಡುವೆ ಇರುವ ವ್ಯತ್ಯಾಸವನ್ನು ಗ್ರಹಿಸುವುದರಲ್ಲಿನ ಈ ವಿಫಲತೆಯು ಈ ಪ್ರಸ್ತಾಪದ ಬಗ್ಗೆ ಗಣನೀಯ ಗೊಂದಲವನ್ನುಂಟುಮಾಡಿದೆ. ಸಾಮಾನ್ಯವಾದ ಬುದ್ಧಿವಂತಿಕೆಯುಳ್ಳ ಕ್ರೈಸ್ತರು ನಮ್ಮನ್ನು ಸಮಾಧಿಯಿಂದ ಬೆಲೆತೆತ್ತು ಬಂಧಮುಕ್ತರನ್ನಾಗಿ ಮಾಡಿದ, ಮರಣದಿಂದ ಬಿಡುಗಡೆ ಮಾಡಿದ, ಕ್ರಿಸ್ತನ ಅಮೂಲ್ಯವಾದ ರಕ್ತದ ಕ್ರಯಕೊಟ್ಟು ಕೊಂಡುಕೊಂಡ ಮುಂತಾದವುಗಳ ಬಗೆಗಿನ ದೇವರ ವಾಕ್ಯಗಳನ್ನು ಉಲ್ಲೇಖಿಸುತ್ತಾರೆ. ಮತ್ತು ಅದೇ ಉಸುರಿನಲ್ಲಿ ಅವರು ಎಲ್ಲಾ ಅಪರಾಧಗಳ ಬಗ್ಗೆ ದೇವರ ಕೃಪೆಯುಳ್ಳ ಕ್ಷಮಾಪಣೆಯ ಬಗ್ಗೆಯೂ ಮಾತನಾಡುತ್ತಾರೆ. ಹೆಚ್ಚಾದವರಿಗೆ ಈಡು ಮತ್ತು ಕ್ಷಮಾದಾನ ಇವುಗಳಲ್ಲಿ ವಿರೋಧವಾದ ಭಾವನೆಗಳೆಂದು ತಿಳಿದಿರುವುದಿಲ್ಲ.

ಸ್ಟಾಂಡರ್ಡ್ ಡಿಕ್ಷ್ನರಿ (ನಿರ್ಧಿಷ್ಟ ಮಾನದ ನಿಘಂಟು)ಯಲ್ಲಿರುವ ಕೆಲವೊಂದು ಮೂಲ ಅರ್ಥವಿವರಣೆಗಳು ಇಂತಿವೆ :–

**ರಿಡೀಮ್** = ಕ್ರಯಕೊಟ್ಟು ವಶಪಡಿಸಿಕೊಳ್ಳುವುದು.

**ರಾನ್ಸಮ್** = ಬಂಧಿಸಲ್ಪಟ್ಟ ವ್ಯಕ್ತಿಯ, ಸೆರೆವಾಸಿ ಅಥವಾ ಗುಲಾಮನ ಬಿಡುಗಡೆಗಾಗಿ ನೀಡಬೇಕಾಗಿರುವ ಬಿಡುಗಡೆಯ ಮೊತ್ತ.

ಇದಕ್ಕೆ ವಿಭಿನ್ನವಾಗಿ ಈ ಕೆಳಗಿನವು ಸೂಚಿಸುವುದೇನೆಂದರೆ :

**ಕ್ಷಮೆ (ಪಾರ್ಡನ್) :** ದಂಡನೆಯ ಪಾವತಿಯನ್ನು ಮಾಫುಮಾಡುವುದು; ಬಿಟ್ಟುಬಿಡುವುದು.

ವೆಬ್ಸ್ಟರ್ – “ದಂಡ ನೀಡದಂತೆ ಮಾಡುವುದು ನ್ಯಾಯ ಸಂಬಂಧವಾಗಿ – ದಂಡನೆಯ ನಿಮಿತ್ತ ನೀಡಿದ ಶಿಕ್ಷೆಯಿಂದ ಬಿಡುಗಡೆಗೊಳಿಸುವುದು.

ಇಲ್ಲಿ ಮತ್ತೊಂದು ಪದದ ಅರ್ಥವಿವರಣೆಯನ್ನು ಸಹಾ ಗಮನಿಸಿರಿ. ಇದು ಕ್ಷಮೆಗೆ ನಿಕಟವಾಗಿದೆ ಎಂದೆನಿಸಿದರೂ ಇದು ಸಂಪೂರ್ಣವಾಗಿ ಅದೇ ಆಗಿರುವುದಿಲ್ಲ. ಅದೇನೆಂದರೆ –

**ಕ್ಷಮಿಸು (ಫರ್‌ಗೀವ್) :** ಶಿಕ್ಷೆಯಿಂದ ಬಿಡುಗಡೆಗೊಳಿಸುವುದು – ಅಸಮಾಧಾನಕ್ಕೆ ಅಂಟಿಕೊಂಡಿರುವುದನ್ನು ಮುಕ್ತಾಯಗೊಳಿಸುವುದು.

“ನ್ಯಾಯಕ್ಕೆ ಕ್ಷಮಾಪಣೆಯು ತಿಳಿಯದು”

‘ರಿಡೀಮ್’ ಮತ್ತು ‘ರಾನ್ಸಮ್’ ಎಂಬ ಪದಗಳಲ್ಲಿ ಅಡಗಿರುವ ಭಾವನೆಗಳು ‘ಪಾರ್ಡನ್’ ಎಂಬ ಪದವು ವ್ಯಕ್ತಪಡಿಸುವ ಭಾವನೆಗಳಿಗೆ ವಿರೋಧವಾಗಿದೆ ಮತ್ತು ಅದಕ್ಕೆ ಹೊಂದಿಕೊಳ್ಳುವುದಿಲ್ಲ ಎಂಬುದನ್ನು ಬಹಳಷ್ಟು ಸಾಧಾರಣ ಮನಸ್ಸು ಗ್ರಹಿಸಿಕೊಳ್ಳಬೇಕು. ಈ ಎಲ್ಲಾ ಪದಗಳನ್ನೂ ಪತನಗೊಂಡ ಮಾನವನೊಂದಿಗಿನ ದೇವರ ವ್ಯವಹಾರದ ಬಗ್ಗೆ ಸತ್ಯವೇದದಲ್ಲಿ ಉಪಯೋಗಿಸುತ್ತಿರುವುದರಿಂದ ಅನೇಕ ಸತ್ಯವೇದ ವಿದ್ಯಾರ್ಥಿಗಳು ಇವುಗಳು ಪರಿಶುದ್ಧ ಬರಹಗಳಲ್ಲಿ ಅಜಾಗರೂಕತೆ ಮತ್ತು ಪರ್ಯಾಯ ಪದಗಳಾಗಿ ಉಪಯೋಗಿಸಲ್ಪಟ್ಟಿವೆ ಎಂದು ಆಲೋಚಿಸುತ್ತಾರೆ. ನಂತರದಲ್ಲಿ ಅವರು ತಮ್ಮ ಆಯ್ಕೆಯನ್ನು ತೆಗೆದುಕೊಳ್ಳಬಹುದು ಮತ್ತು ‘ಪಾರ್ಡನ್’

ಎಂಬ ಪದದ ಅರ್ಥವಿವರಣೆಯನ್ನು 'ರಾನ್ಸಮ್' ಮತ್ತು 'ರಿಡೀಮ್' ಅಥವಾ ಅದರ ಅದಲುಬದಲಾಗಿಯೂ ಅಥವಾ ಅವುಗಳನ್ನು 'ಪಾರ್ಡನ್' ಮತ್ತು 'ಫರ್ಗೀವ್' ಪದಗಳ ಅರ್ಥವಿವರಣೆಯೊಂದಿಗೆ ಜೋಡಿಸಿಕೊಳ್ಳಬಹುದು. ಈ ಪ್ರಕ್ರಿಯೆಯು ಸತ್ಯದ ವಾಕ್ಯವನ್ನು ಸರಿಯಾಗಿ ಉಪದೇಶಿಸುವುದಕ್ಕೆ ಬಲು ದೂರವಾಗಿದೆ. ಇದು ಎರಡು ಭಿನ್ನವಾದ ಮತ್ತು ಬೇರೆಯಾದ ಪದಗಳನ್ನು ಗೊಂದಲಕ್ಕೀಡುಮಾಡುವುದಾಗಿದೆ ಮತ್ತು ಗಲಿಬಿಲಿಗೆ ಎಡೆಮಾಡಿಕೊಡುತ್ತದೆ. ಅನೇಕರಿಗೆ ಈ ಪ್ರಸ್ತಾಪದ ಬಗ್ಗೆ ಸತ್ಯ ಬೇಕಿಲ್ಲ ಮತ್ತು ಅವರು ಅದನ್ನು ಬಯಸುವುದಿಲ್ಲ. ಯಾಕೆಂದರೆ, ಅವರ 'ನೋ–ರಾನ್ಸಮ್' ವಿಚಾರ ಸರಣಿಯು ಇದರಿಂದ ದೋಷವುಳ್ಳದ್ದಾಗುತ್ತದೆ ಎಂದು ಅವರು ಆಲೋಚಿಸುತ್ತಾರೆ.

ದೇವರು ಆದಾಮನ ಅಪರಾಧವನ್ನು ಕ್ಷಮಿಸಲಿಲ್ಲ ಮತ್ತು ಅದರ ದಂಡನೆಯನ್ನು ಮನ್ನಿಸಲಿಲ್ಲ ಎಂಬುದಕ್ಕಿಂತ ಹೆಚ್ಚಿನ ಸ್ಪಷ್ಟನೆ ಇರದು; ನರಳಾಡುವ ಮತ್ತು ನಶಿಸುವ ಸೃಷ್ಟಿಗಳಾದ ನಮ್ಮಲ್ಲಿನ ಸತ್ಯಸಂಗತಿಯೆಂದರೆ, "ದೇವರ ಕೋಪವು ಪ್ರಕಟವಾಯಿತು" ಮತ್ತು "ಮೂಲ ಪಾಪದ ಸಂಬಳ ಮರಣ" ಎಂಬ "ಶಾಪವು" ಇವೆಲ್ಲವೂ ದೊಡ್ಡ ಧ್ವನಿಯಿಂದ ದೇವರು ಈ ಲೋಕವನ್ನು ಕ್ಷಮಿಸಲಿಲ್ಲ – ಅದರ ಪಾಪದ ದಂಡನೆಯನ್ನು ಮನ್ನಿಸಲಿಲ್ಲ ಎಂದು ದೇವರ ವಾಕ್ಯದ ಸಾಕ್ಷ್ಯವು ಸಾರಿ ತಿಳಿಸುತ್ತವೆ. ಅದರ ಕೈಯಲ್ಲಿ ಅದು ಆರು ಸಹಸ್ರ ವರ್ಷಗಳಿಗೂ ಹೆಚ್ಚುಕಾಲ ಶ್ರಮೆಪಡುವಂತಾಯಿತು. ಪಾಪಿಗಳ ಬದಲಿ ಅಥವಾ ಈಡುಬಲಿಯಾದ ಕ್ರಿಸ್ತನ ಪಾಪ ಪ್ರಾಯಶ್ಚಿತ್ತ ಯಜ್ಞದ ಅರ್ಹತೆಯ ಮೂಲಕ ಪಾಪಿಗಳ ನೀತಿನಿರ್ಣಯವನ್ನು ಯಾವುದೇ ಬೆಲೆತೆರದ ಕ್ಷಮಾಪಣೆ ಎಂದು ಗೊಂದಲಕ್ಕೀಡಾಗುತ್ತಾರೋ ಅವರು ತಮ್ಮ ಬುದ್ದಿಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿರುವುದಿಲ್ಲ. ದೇವರು ಆದಾಮನನ್ನು ಕ್ಷಮಿಸುತ್ತಿದ್ದರೆ ಆತನಿಗೆ ಏದೇನ್ ತೋಟವನ್ನು ಪುನಃವಶಪಡಿಸಬಹುದಿತ್ತು ಮತ್ತು ಅದರ ಎಲ್ಲಾ ಸವಲತ್ತುಗಳನ್ನೂ, ಜೀವ ಸಂರಕ್ಷಣೆ ಮಾಡುವ ಉದ್ಯಾನವನವನ್ನು ಮರಳಿ ಕೊಡಬಹುದಿತ್ತು. ಹೀಗಾಗಿ ಆತನು ಇನ್ನೂ ಜೀವಿಸುತ್ತಿದ್ದನು ಮತ್ತು ಆತನ ಕುಟುಂಬವು 'ಒಬ್ಬನ ಪಾಪದ ದೆಸೆಯಿಂದ ಸಾಯುತ್ತಿರಲಿಲ್ಲ'.

ದೇವರು ಯಾವುದೇ ಸಮಯದಲ್ಲಿ ಮಾನವನ ನೆರವಿಗೆ ಬಂದು ಆತನನ್ನು ಕ್ಷಮಿಸುತ್ತಿದ್ದರೆ, ಅದರ ಅರ್ಥ ಎಲ್ಲಾ ಕೇಡುಗಳಿಂದ, ರೋಗಗಳಿಂದ, ನೋವು ಮತ್ತು ಮರಣದಿಂದ ಆತನ ಬಿಡುಗಡೆಯಾಗಿರುತ್ತಿತ್ತು; ಅಂದರೆ ಆತನು ಕಳಕೊಂಡ ಎಲ್ಲವುಗಳನ್ನು ಪುನಃವಶಪಡಕೊಳ್ಳುವುದಾಗುತ್ತಿತ್ತು. ಸುವ್ಯಕ್ತವಾಗಿ ದೇವರು ಮಾನವನ ಮೂಲಾಪರಾಧವನ್ನು ಇನ್ನೂ ಕ್ಷಮಿಸಿಲ್ಲ, ಇನ್ನೂ ಸಹಾ ಆತನ ಪವಿತ್ರ ನಿಯಮದ ಉಲ್ಲಂಘನೆಯ ಸಿಟ್ಟನ್ನು, ಮತ್ತು ಪಾಪಿಯ ವಿರುದ್ಧವಾದ ತನ್ನ ದಂಡನೆಯನ್ನು ಇಟ್ಟುಕೊಂಡಿದ್ದಾನೆ. ಅವುಗಳಿಂದ ಲೋಕಕ್ಕೆ ವಿಮೋಚನೆ ಅಥವಾ ಬಿಡುಗಡೆ ದೊರೆತಿದೆ ಎಂಬುದಕ್ಕೆ ಯಾವುದೇ ಬಾಹ್ಯವಾದ ಸಾಕ್ಷಿಯೂ ಇಲ್ಲ. ನಂಬಿಗಸ್ತರು ಮಾತ್ರವೇ ಇದನ್ನು ಕಂಡುಕೊಳ್ಳಬೇಕು ಮತ್ತು ಅದನ್ನು ಅವರು ಪಡಕೊಳ್ಳಬೇಕು. ಕೇವಲ ಕಣ್ಣಿಂದ ನೋಡುವುದರಿಂದ ಅಲ್ಲ. ಆದರೆ ದೇವರ ಮೇಲಣ ನಂಬಿಕೆಯಿಂದ; ಈ ಬಗ್ಗೆ ಅದರ ಅನೇಕ ಪ್ರಕಟನೆಗಳನ್ನು ನಾವೀಗಾಗಲೇ ಉಲ್ಲೇಖಿಸಿದ್ದೇವೆ. ಮಿಲಿಯಾಂತರ ಯುಗದಲ್ಲಿ ಈಡುಬಲಿಯಲ್ಲಿ ಸಾಬೀತುಪಡಿಸುವ ದೃಷ್ಟಿ–ಸಾಕ್ಷ್ಯಗಳು ಪುನಃಸಂಧಾನದ ಕಾರ್ಯಗಳು ಜರಗುತ್ತಿರುವಾಗ – ವಿಮೋಚಕನು ತಾನು ಕೊಂಡುಕೊಂಡ ಹಕ್ಕನ್ನು ಪುನರ್‌ವಶ ಕಾರ್ಯದಲ್ಲಿ ತೊಡಗಿಸುವಾಗ ನಮಗೆ ಇವುಗಳು ಅರ್ಥವಾಗಲಿವೆ.

'ಫರ್ಗೀವ್' (ಮನ್ನಿಸು), 'ಪಾರ್ಡನ್' (ಕ್ಷಮಿಸು) ಈ ಪದಗಳು ಈ ಲೋಕ ಮತ್ತು ಅದರ ಮೂಲ ಪಾಪದ ಬಗ್ಗೆ ಉಪಯೋಗಿಸಿದವುಗಳಲ್ಲ, ಆದರೆ ವಿಮೋಚಕನ ಮತ್ತು ಆತನ ಕಾರ್ಯಗಳ ಮೇಲಿನ ನಂಬಿಕೆಯ ಮೇರೆಗೆ ಮರಣದಿಂದ ಜೀವಕ್ಕೆ, ದಂಡನೆಯಿಂದ ಸಮರ್ಥನೆಗೆ ದಾಟಿ ಬಂದವರು ಎಂದು ಎಣಿಸಲ್ಪಟ್ಟವರಿಗಾಗಿ ಉಪಯೋಗಿಸಲ್ಪಟ್ಟಿವೆ. ಅವರನ್ನು ಕೊಂಡುಕೊಂಡ ಮಹಾ ಮಧ್ಯಸ್ಥಗಾರನು, ಅವರ ಮೇಲಿದ್ದ ಆಪಾದನೆಗಳನ್ನೆಲ್ಲಾ ಕೊಂಡುಕೊಂಡವನು ಅವರನ್ನು ಮುಕ್ತವಾಗಿ ಮನ್ನಿಸುತ್ತಾನೆ ಮತ್ತು ಅವರು ಜೀವನದ ಪರೀಕ್ಷೆಯನ್ನು ಅದರ ಅಕ್ಷರಾರ್ಥವಾಗಿ ಅಲ್ಲ, ದೈವಿಕ ನಿಯಮದ ಸ್ಪೂರ್ತಿಯಲ್ಲಿ ನೂತನವಾಗಿ ಪ್ರಾರಂಭಿಸುವಂತೆ ಮಾಡುತ್ತಾನೆ. "ದೇವರಿಂದ ಹುಟ್ಟಿದವನು ಪಾಪಮಾಡನು; ದೇವರ ಜೀವವು ಅವನಲ್ಲಿ ನೆಲೆಗೊಂಡದೆ" (1 ಯೋಹಾನ 3:9). "ದೇವರಿಂದ ಹುಟ್ಟಿರುವವನು ಪಾಪಮಾಡುವವ ನಲ್ಲನೆಂಬುದು ನಮಗೆ ಗೊತ್ತದೆ" (1 ಯೋಹಾನ 5:18). ಮೂಲ ಪಾಪದ ಮತ್ತು ಅದರ ನೀತಿಭ್ರಷ್ಟತೆಯ ಭಾಗವಾಗಿ ಅಂಥಾಃ ಇಚ್ಚಾಪೂರ್ವಕವಲ್ಲದ ಅಲೋಚನೆಗಳ, ಮಾತುಗಳ, ಕಾರ್ಯಗಳ ಕುಂದುಕೊರತೆಗಳು ಇನ್ನೂ ಅವರ ದೇಹದಲ್ಲಿ ವಂಶಪಾರಂಪರ್ಯವಾಗಿ ಕೆಲಸ ಮಾಡುತ್ತಿರುವುದನ್ನು ಲೆಕ್ಕಕ್ಕೆ ತೆಗೆದುಕೊಂಡು ಹಿಂದಿನ ಈ ಕ್ಷಮಾಪಣೆಗೂ ಹೆಚ್ಚಾಗಿ ಆತನು ಅವರನ್ನು ಮನ್ನಿಸುವುದನ್ನೂ ಮತ್ತು ಅವರ ತಪ್ಪುಗಳನ್ನು (ನೂತನ ಆತ್ಮ ಅಥವಾ ಮನಸ್ಸು ಇರುವವರೆಗೆ ಇವುಗಳು ಇಚ್ಚಾಪೂರ್ವಕವಾದವುಗಳಾಗುವುದಿಲ್ಲ) ಕ್ಷಮಿಸುವುದನ್ನೂ ಮುಂದುವರಿಸುತ್ತಾನೆ. ಅದೇ ರೀತಿಯಲ್ಲಿ ಪರಲೋಕದ ತಂದೆಯು ನಮ್ಮ ತಪ್ಪುಗಳನ್ನು ಕ್ಷಮಿಸುವಂತೆ ಮತ್ತು ಆತನ ಕೃಪೆಯನ್ನು ನಮ್ಮಲ್ಲಿ ಮುಂದುವರೆಸುವಂತೆ ನಮ್ಮ ಮೇಲೆ

ಕರುಣೆಯುಳ್ಳವನಾಗಿದ್ದಾನೆ ಎಂದು ಹೇಳಲಾಗಿದೆ; ಆದರೆ ವಿವರಣೆ ಏನೆಂದರೆ, ಈ ಎಲ್ಲಾ ಕೃಪೆಗಳೂ ಕರ್ತನಾದ ಯೇಸುವಿನ ಸಮರ್ಪಣೆಯ ಮೂಲಕ ನಮ್ಮ ಕಡೆಗೆ ವಿಸ್ತರಿಸಲ್ಪಟ್ಟಿವೆ. "ನಾವು ನೀತಿವಂತರೆಂದು ನಿರ್ಣಯಹೊಂದುವುದು ದೇವರ ಉಚಿತಾರ್ಥವಾದ ಕೃಪೆಯಿಂದಲೇ, ಕ್ರಿಸ್ತಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವುದು. ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರ ವಾಗಬೇಕೆಂದು ದೇವರು ಈತನನ್ನು ಮುಂದಿಟ್ಟನು" (ರೋಮಾ. 3:24,25). ಪುನಃ "ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ" (ಎಫೆಸ 1:7) "ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು" (ಕೊಲೊಸ್ಸೆ 1:14) ಎಂದು ಸಹಾ ಹೇಳಲಾಗಿದೆ.

"ನಾವು ಆತನ ಮಗನ ಮರಣದ ನಿಮಿತ್ತ ದೇವರೊಂದಿಗೆ ಪುನಃಸಂಧಾನ ಪಡಕೊಂಡಿದ್ದೇವೆ" ಅಂದರೆ, ದೇವರು ನಮ್ಮ ಪಾಪಗಳ ಬಗ್ಗೆ ಅಸಮಾಧಾನಗೊಳ್ಳುವುದನ್ನು ನಿಲ್ಲಿಸಿದ್ದಾನೆ, ಯಾಕೆಂದರೆ ನಮ್ಮ ಈಡುಬೆಲೆಯು ಸಂದಾಯವಾಗಿದೆ. ನಮ್ಮನ್ನು ಬಹಳವಾಗಿ ಪ್ರೀತಿಸಿ ಆತನು ತನ್ನ ಮಗನನ್ನು ನಮ್ಮ ವಿಮೋಚನೆಗಾಗಿ ಆತನೇ ಒದಗಿಸಿದ್ದಾನೆ. ಈ ರೀತಿಯಲ್ಲಿ, ದೇವರು ಕ್ರಿಸ್ತನಲ್ಲಿ ಈ ಲೋಕವನ್ನು ತನಗೆ ಸಂಧಾನಪಡಿಸಿಕೊಂಡಿದ್ದಾನೆ. ಮನುಷ್ಯರ ತಪ್ಪು ಅಪರಾಧಗಳನ್ನು ಅವರ ಮೇಲೆ ಆರೋಪಿಸುತ್ತಿಲ್ಲ. (ಆದರೆ ನಮ್ಮ ಬದಲಿಯಾಗಿ ತನ್ನನ್ನೇ ಮುಕ್ತವಾಗಿ ಸಮರ್ಪಿಸಿದ ತನ್ನ ಪ್ರೀತಿಯ ಮಗನ ಮೇಲೆ ಅವುಗಳನ್ನು ಆರೋಪಿಸಿದ್ದಾನೆ). ಯೇಸುಕ್ರಿಸ್ತನು ಮರಣದವರೆಗೆ ಪಾಪವನ್ನು ಮಾನವ ಜಾತಿಯ ಮೇಲೆ ಆರೋಪಿಸಲಾಗುತ್ತಿತ್ತು; ನಂತರದಲ್ಲಿ ದೇವರು **'ಕ್ಷಮಿಸಿದನು',** ಅಂದರೆ ನಮ್ಮ ವಿಮೋಚಕನು ಅಥವಾ ಬದಲಿಯವನು ನಮ್ಮ ಸಲುವಾಗಿ ಸಂದಾಯಮಾಡಿದ್ದನ್ನು ನಮಗೆ ಆರೋಪಿಸುವುದನ್ನು ನಿಲ್ಲಿಸಿದನು. ದೇವರು **'ಮನ್ನಿಸಲಿಲ್ಲ'** ಅಂದರೆ 'ದಂಡನೆಯನ್ನು ಜಡಿದು ವಸೂಲಿ ಮಾಡುವುದನ್ನು ಬಿಡಲಿಲ್ಲ'. ಆದರೆ ಆ ನಮ್ಮ ವಿಮೋಚಕನ ಮೇಲೆ ನಮ್ಮೆಲ್ಲಾ ಅಪರಾಧಗಳನ್ನು ಹೊರಿಸಿದನು (ಯೆಶಾಯ 53:6 ನೋಡಿರಿ). "ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು" (1 ಪೇತ್ರ 2:24). ಈ ರೀತಿಯಾಗಿ ದೇವರು ನಮ್ಮನ್ನು ಹೇಗೆ ಮುಕ್ತವಾಗಿ **'ಕ್ರಿಸ್ತನ ಸಲುವಾಗಿ'** ಮನ್ನಿಸಿದನು ಎಂಬುದನ್ನು ನಾವು ನೋಡುತ್ತೇವೆ. ಯಾಕೆಂದರೆ ನ್ಯಾಯಕ್ಕೆ ಪೂರ್ಣ ತೃಪಿಯಾಗುವಂತೆ ದಂಡನೆಯನ್ನು ಆತನು ನಮಗಾಗಿ ತೆತ್ತಿದ್ದಾನೆ – 1 ಯೋಹಾನ 1:7; 2:12; ಎಫೆಸ 4:32, ಅ.ಕೃ. 4:12; 10;43; 13:38; ಲೂಕ 24:47.

ದೇವರು ನ್ಯಾಯವಂತನನ್ನು ಅನ್ಯಾಯವಂತರಿಗಾಗಿ ಸಾಯುವಂತೆ ಒತ್ತಾಯಿಸಿದನು ಎಂಬುದಾಗಿ ಯಾರೂ ತಪ್ಪಾಗಿ ಅರ್ಥಮಾಡಿಕೊಳ್ಳಕೂಡದು. ನಿರಪರಾಧಿಯು ತಾನಾಗಿಯೇ ಅಪರಾಧಿಯ ಬದಲಿಯಾಗಿ ತನ್ನನ್ನು ತಾನೇ ಮುಕ್ತವಾಗಿ ಒಪ್ಪಿಸಿಕೊಡದ ಹೊರತು ನ್ಯಾಯವು ಎಂದೂ ನಿರಪರಾಧಿಯ ಮೇಲೆ ತನ್ನ ದಂಡನೆಯನ್ನು ಹೇರುವುದಿಲ್ಲ. ಇದನ್ನೇ ನಮ್ಮ ಕರ್ತನಾದ ಯೇಸು ಮಾಡಿದ್ದು. ಆತನು ತನ್ನ ಪ್ರಾಣವನ್ನು ತಾನೇ ಒಪ್ಪಿಸಿಕೊಟ್ಟನು ಎಂಬುದಾಗಿ ವೇದವಾಕ್ಯಗಳು ಹೇಳುತ್ತವೆ ; ದೇವರ ಕೋಪದ ಭಯದಿಂದಲ್ಲ, ಯಾವ ಒತ್ತಾಯದಿಂದಲೂ ಅಲ್ಲ. ಆದರೆ "ಆತನು ತನ್ನ ಮೇಲೆ ಇಟ್ಟಿದ್ದ ಸಂತೋಷಕ್ಕೋಸ್ಕರ (ದೇವರಿಗೆ ವಿಧೇಯ ನಾಗುತ್ತಿರುವುದಕ್ಕಾಗಿ ಸಂತೋಷ, ಮಾನವ ಜಾತಿಯನ್ನು ಬಿಡುಗಡೆಗೊಳಿಸಿ ಪುನಃಸಂಧಾನ ಪಡಿಸುತ್ತಿರುವುದಕ್ಕಾಗಿ ಸಂತೋಷ ಮತ್ತು ಅನೇಕ ಮಕ್ಕಳನ್ನು ಮಹಿಮಾ ಪದವಿಗೆ ಸೇರಿಸುತ್ತಿರುವುದಕ್ಕಾಗಿ ಸಂತೋಷ) ಅವಮಾನವನ್ನು ಅಲಕ್ಷ್ಯಮಾಡಿ ಶಿಲುಬೆಯ ಮರಣವನ್ನು ಸಹಿಸಿ ಕೊಂಡನು" – ಇಬ್ರಿಯ 12:2.

ಗ್ರೀಕ್ ಪದಗಳಾದ apoluo, aphiemi & aphesis ಇವುಗಳು forgiveness (ಕ್ಷಮಾಪಣೆ) forgiven (ಕ್ಷಮಿಸಲ್ಪಟ್ಟಿವೆ) ಮತ್ತು forgive (ಕ್ಷಮಿಸು) ಎಂಬುದಾಗಿ ಹೊಸಒಡಂಬಡಿಕೆಯಲ್ಲಿ ತರ್ಜುಮೆಗೊಂಡಿವೆ. ಇವುಗಳು ಅನುರೂಪವಾದ ಇಂಗ್ಲಿಷ್ ಮಾತುಗಳಲ್ಲಿ ಅದೇ ಅರ್ಥಗಳನ್ನು ಹೊಂದಿವೆ: "ಶಿಕ್ಷೆಯಿಂದ ಬಿಡುಗಡೆ ಗೊಳಿಸುವುದು, ಅಸಮಾಧಾನವನ್ನು ಸ್ಥಗಿತ ಗೊಳಿಸುವುದು". ಆದರೆ ಈ ಅರ್ಥವು ಕೆಲವರು ಊಹಿಸುವಂತೆ – 'ಪಾರ್ಡನ್' ಎಂಬ ಆಂಗ್ಲಪದವು ಅರ್ಥ ಸೂಚಿಸುವಂತೆ 'ಯಾವುದೇ ಸಮಬೆಲೆಯನ್ನು ತೆಗೆದುಕೊಳ್ಳದೆ ಕಳುಹಿಸಿಬಿಡುವುದು' ಎಂಬುದಾಗಿ ಅಲ್ಲ ಎಂಬುದನ್ನು ನಾವು ಚೆನ್ನಾಗಿ ಗುರುತಿಸಬಹುದು. ದೇವರು ಪಾಪಿಗಳನ್ನು ಯಾವುದೇ ಶರತ್ತುಗಳಿಲ್ಲದೆ ಬಿಟ್ಟುಬಿಡುವವನಲ್ಲ. ಆದರೆ, ವೇದವಚನಗಳು ಹೇಳುವಂತೆ ದೇವರು ಬಂಧಿಗಳನ್ನು ಮರಣವೆಂಬ ಗುಂಡಿಯಿಂದ ಹೊರತೆಗೆಯುವನು. ಯಾಕೆಂದರೆ, ಆತನು ಅದಕ್ಕಾಗಿ ಈಡುಬಲಿಯೊಂದನ್ನು ಕಂಡು ಕೊಂಡಿದ್ದಾನೆ. (ಯೋಬ 33:24 ನೋಡಿರಿ). ಮಾನವನಾಗಿದ್ದ ಯೇಸುಕ್ರಿಸ್ತನು ತನ್ನನ್ನೇ ಎಲ್ಲರಿಗಾಗಿ ಈಡುಬಲಿಯಾಗಿ (ಅನುರೂಪವಾದ ಬೆಲೆಯಾಗಿ) ಅರ್ಪಿಸಿದ್ದಾನೆ – "ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಕೊಟ್ಟನು"

(1 ತಿಮೋ. 2:6). ಆದುದರಿಂದ ಸಮಾಧಿಯಲ್ಲಿ (ಸೆರೆಯಲ್ಲಿ) ಇರುವವರೆಲ್ಲರೂ ಸೂಕ್ತ ಸಮಯದಲ್ಲಿ ಅಂದರೆ ವಿಮೋಚಕನು ತನ್ನ ಮಹಾ ಅಧಿಕಾರವನ್ನು ವಹಿಸಿಕೊಂಡು, ಆಳ್ವಿಕೆಯನ್ನು ತನ್ನ ಕೈಗೆ ತೆಗೆದುಕೊಳ್ಳುವಾಗ ಆತನ ಸ್ವರವನ್ನು ಕೇಳಿ ಎದ್ದು ಬರುವರು.

'ಪಾರ್ಡನ್' ಎಂಬ ಪದವು ಹೊಸ ಒಡಂಬಡಿಕೆಯಲ್ಲಿ ಇಲ್ಲವಾದರೂ, ಹೆಚ್ಚುಕಡಿಮೆ ಅದೇ ಅರ್ಥವುಳ್ಳ 'karazomai' ಎಂಬ ಗ್ರೀಕ್ ಪದವೊಂದಿದೆ. ಇದು ಮುಕ್ತವಾಗಿ ಕ್ಷಮಿಸುವುದನ್ನು ಸೂಚಿಸುತ್ತದೆ. ಈ ಪದದ ಬಳಕೆಯ ಬಗ್ಗೆ ನಾವು ಕೆಲವೊಂದು ಉದಾಹರಣೆಗಳನ್ನು ಕೊಡುತ್ತೇವೆ. ಇದರಿಂದ ಇದು ನಮ್ಮ ತಂದೆಯು ಯಾವುದೇ ಶರತ್ತುಗಳಿಲ್ಲದೆಯೇ ಕ್ಷಮಿಸುವುದಿಲ್ಲ ಅಥವಾ ಅವರನ್ನು ಪಾಪದ ದಂಡನೆಯಿಂದ ಹಾಗೆಯೇ ಬಿಟ್ಟುಬಿಡುವುದಿಲ್ಲ ಎಂಬ ಹೇಳಿಕೆಯನ್ನು ಇದು ವಿರೋಧಿಸುವುದಿಲ್ಲ ಎಂದು ಕಂಡುಬರುತ್ತದೆ. 'karazomai' ಎಂಬ ಪದವು ಒಟ್ಟಾರೆ ಈ ಕೆಳಕಂಡಂತೆ ಹನ್ನೆರಡು ಬಾರಿ ಮಾತ್ರವೇ ಕಂಡುಬರುತ್ತದೆ :

**"ಕರ್ತನು ನಿಮ್ಮನ್ನು ಕ್ಷಮಿಸಿದಂತೆಯೇ ನೀವೂ ಕ್ಷಮಿಸಿರಿ"** – ಕೊಲೊಸ್ಸೆ 3:13.

**"ತೀರಿಸುವುದಕ್ಕೆ ಅವರಿಗೆ ಗತಿಯಿಲ್ಲದ್ದರಿಂದ ಆ ಇಬ್ಬರಿಗೂ ಸಾಲವನ್ನು ಬಿಟ್ಟುಬಿಟ್ಟನು . . . .ಯಾವನಿಗೆ ಹೆಚ್ಚಾಗಿ ಬಿಟ್ಟನೋ ಅವನೇ ಎಂದು ಭಾವಿಸುತ್ತೇನೆ"** – ಲೂಕ 7:42,43.

ಇಲ್ಲಿ ನಾಲ್ಕು ಘಟನೆಗಳಿದ್ದು ಅದರಲ್ಲಿ ಮುಕ್ತವಾದ ಕ್ಷಮಾಪಣೆಗಳ ಅರ್ಥವಿದೆ. ಆದರೆ ಇಲ್ಲಿ ಯೆಹೋವನಲ್ಲ, ಕ್ರಿಸ್ತ ಯೇಸುವು ಮತ್ತು ಆತನ ಶಿಷ್ಯರು ಈ ಮುಕ್ತವಾದ ಕ್ಷಮಾಪಣೆಗಳನ್ನು ನೀಡುವವರಾಗಿದ್ದಾರೆ. ಕರ್ತನಾದ ಯೇಸುವು ಸಿಮೋನನ, ಮರಿಯಳ, ಮತ್ತಿತರರ ಪರವಾಗಿ ಈಡುಬಲಿಯ ಬೆಲೆಯನ್ನು ನೀಡುವ ಕಾರ್ಯದಲ್ಲಿ ತೊಡಗಿದ್ದನು ಮತ್ತು ತನ್ನ ಕಾರ್ಯದಿಂದ ನ್ಯಾಯಕ್ಕೆ ತೃಪ್ತಿಯಾಗುತ್ತದೆ, ಮತ್ತು ಆತನು ಕೊಂಡು ಕೊಳ್ಳುವನಾಗಿದ್ದು ಅವರನ್ನು ಮುಕ್ತವಾಗಿ ಕ್ಷಮಿಸಬಹುದು ಎಂದು ಗ್ರಹಿಸಿದ್ದನು. ಆತನು ಪಾಪಿಗಳನ್ನು ಕೊಂಡುಕೊಳ್ಳುವ ಏಕೈಕ ಉದ್ದೇಶವೆಂದರೆ, ತಾನು ಅವರನ್ನು ಪಾಪದ ದಂಡನೆಯಿಂದ ಮುಕ್ತರನ್ನಾಗಿ ಮಾಡಬಹುದೆಂಬುದೇ. ನಮ್ಮ ಕರ್ತನಾದ ಯೇಸುವಿಗೆ ತನ್ನ ಸ್ವರಕ್ತದ ಮೂಲಕ ಕೊಂಡುಕೊಂಡವರನ್ನು ಕ್ಷಮಿಸುವ ಮನಸ್ಸಿಲ್ಲವಾಗಿದ್ದರೆ, ಆತನು ಅವರ ವಿರುದ್ಧವಾಗಿ ಆದಾಮನ ಪಾಪದ ಸಂಬಳವನ್ನು ಇನ್ನೂ ಇಟ್ಟಿರುತ್ತಿದ್ದನು ಮತ್ತು ಆತನ ಸಮರ್ಪಣೆಯಿಂದ ಅವರಿಗೆ ಯಾವ ಬೆಲೆಯೂ ಇರಲಿಲ್ಲವಾಗುತ್ತಿತ್ತು; ಇದರಿಂದ ಅವರೆಲ್ಲರೂ ಇದ್ದಂತೆಯೇ – ಶಾಪಗ್ರಸ್ತರಾಗಿ– ದಂಡನೆಗೊಳಗಾದವರಾಗಿ ಇರುತ್ತಿದ್ದರು. ಮತ್ತೊಂದೆಡೆ ತಂದೆಯಾದ ದೇವರು ನಮ್ಮನ್ನು ಕ್ಷಮಿಸುತ್ತಿದ್ದರೆ, ಕ್ರಿಸ್ತನ ಮರಣವು ಅಪ್ರಯೋಜಕವಾಗುತ್ತಿತ್ತು, ಅದಕ್ಕೆ ಯಾವ ಬೆಲೆಯೂ ಇರುತ್ತಿದ್ದಿಲ್ಲ ಮತ್ತು ಇದರಿಂದ ಯಾವುದೇ ನೆರವೇರಿಕೆ ಆಗುತ್ತಿದ್ದಿಲ್ಲ.

ದೇವರು ನ್ಯಾಯವಂತನು ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ; ಹಾಗಿದ್ದಲ್ಲಿ ಆತನು ಮಾನವರಿಗೆ ಅವರ ಜೀವವನ್ನೆ ಕಸಿದುಕೊಂಡಿರುವಾಗ ಇನ್ನೂ ಕಠಿಣವಾದ ದಂಡನೆಯನ್ನು ವಿಧಿಸುತ್ತಿರಲಿಲ್ಲ. ಈ ದಂಡನೆಯು ಕೇವಲ ಆರುಸಹಸ್ರ ವರ್ಷಗಳ ಹಿಂದಿನದಾಗಿದ್ದರೆ, ಅದು ಇನ್ನೂ ಕೇವಲ ದಂಡನೆಯಾಗಿಯೇ ಅದೆ ಮತ್ತು ಬರುವ ಎಲ್ಲಾ ಕಾಲಕ್ಕೂ ಹಾಗೆಯೇ ಇರುತ್ತದೆ. ದಂಡನೆಯು ಬಹಳ ಕಠಿಣವಾಗಿದ್ದು ದೇವರು ಪಾಪಿಗಳನ್ನು ಕ್ಷಮಿಸುವವನಾದರೆ (ದಂಡನೆಯಲ್ಲಿ ಮುಂದುವರೆಯುವುದರಿಂದ ಬಿಡುಗಡೆ ನೀಡುವವನಾದರೆ), ದೇವರು ಮೊದಲಿಗೆ ಅನ್ಯಾಯವಂತನಾಗಿರುತ್ತಿದ್ದನು ಅಥವಾ ಆಗಿದ್ದಾನೆ ಎಂದು ಇದು ರುಜುವಾತುಪಡಿಸುತ್ತದೆ. ಪಾಪದ ಕಾರಣ ಆರು ಸಹಸ್ರವರ್ಷಗಳ ಹಿಂದೆ ಮಾನವನ ಜೀವವನ್ನು ಕಸಿದುಕೊಳ್ಳುವುದು ನ್ಯಾಯವಾಗಿದ್ದರೆ, ಪ್ರಕಟಿಸಿದ ದಂಡನೆಯನ್ನು ಅದಕ್ಕೆ ತೆರಬೇಕಾದ ಸಮಬೆಲೆಯನ್ನು ತೆತ್ತ ಬಳಿಕ ರದ್ದುಪಡಿಸದ ಹೊರತು ಜೀವವನ್ನು ಪುನಃವಶಪಡಿಸುವುದು ತಪ್ಪಾಗುತ್ತದೆ. ಹಾಗಾಗಿ, ಮತ್ತೊಬ್ಬ ಜೀವಿಯು ಇಚ್ಛಾಪೂರ್ವಕವಾಗಿ ಜೀವಿಸುವ ಹಕ್ಕನ್ನು ಕಳಕೊಂಡು ತನ್ನನ್ನು ಬದಲಿ ಅಥವಾ ಈಡುಬಲಿಯಾಗಿ ಅರ್ಪಿಸಿದಾಗಲೇ ಇದು ನೆರವೇರಬಹುದಾಗಿದೆ.

## "ಪರ್ವತಗಳು ತಮ್ಮ ಬುನಾದಿಯನ್ನು ಭದ್ರವಾಗಿ ಇಟ್ಟುಕೊಂಡಂತೆ ದೇವರ ನ್ಯಾಯವು ಎಂದೆಂದಿಗೂ ನಿಲ್ಲುವುದು"

**"Forever firm God's justice stands As mountains their foundations keep"**

ನ್ಯಾಯದ ಈ ತತ್ವವು ನಮ್ಮ ತಂದೆಯ ಎಲ್ಲಾ ಕಾರ್ಯಗಳಿಗೂ ಒತ್ತುಕೊಡುವುದಾಗಿದ್ದು ಆತನ ಎಲ್ಲಾ ವಾಗ್ದಾಗಳ ಮೇಲೆ ಭರವಸೆ ಇಡಲು ಇದುವೇ ಬಲವಾದ ಆಧಾರವಾಗಿದೆ. ಆತನು ಹಿಂದೆಯೂ, ಇಂದೂ, ಮುಂದೆಂದೂ ಏಕರೀತಿಯಾಗಿದ್ದಾನೆಂದು ವೇದ ವಚನಗಳು ಪ್ರಕಟಿಸುತ್ತವೆ. "ಆತನಲ್ಲಿ ಚಂಚಲತ್ವವೇನೂ ಇಲ್ಲ, ವ್ಯತ್ಯಾಸದ ಸೂಚನೆಯೂ ಇಲ್ಲ" (ಯಾಕೋಬ 1:17). ಆತನು ಆದಾಮನ ದಿನಗಳಲ್ಲಿ ಜನಾಂಗವನ್ನು ಮರಣಕ್ಕೆ ಖಂಡಿಸಿ ಮತ್ತು ಆರು ಸಹಸ್ರವರ್ಷಗಳ ನಂತರ

ತನ್ನ ಸ್ವಂತ ನಿರ್ಧಾರವನ್ನು ಹಿಂದೆಗೆದು ಅಷ್ಟೊಂದು ಬದಲಾಗುವವನಾಗಿದ್ದರೆ, ಈ ಆರು ಸಹಸ್ರ ವರ್ಷಗಳಲ್ಲಿ ಹೆಚ್ಚು ಕಡಿಮೆ ಆತನು ಪುನಃ ಬದಲಾಗುವುದಿಲ್ಲ, ಕೆಲವರ ಅಥವಾ ಎಲ್ಲರ ಕ್ಷಮಾಪಣೆಯನ್ನು ಹಿಂದಕ್ಕೆ ಪಡೆದು ಪುನಃ ಮರಣದ ಸೆರೆವಾಸಕ್ಕೆ ಒಪ್ಪಿಸುವುದಿಲ್ಲ ಎಂಬುದಕ್ಕೆ ನಮಗೆ ಯಾವ ಸಾಕ್ಷಿ ಇದೆ ? ಪಾಪಿಗಳ ಜನಾಂಗದವರಾಗಿ ನಮಗೆ ಮುಂದಣ ನಿತ್ಯಜೀವಿತದ ಬಗ್ಗೆ ದೇವರ ಕೃಪೆಯ ಸಲುವಾಗಿ ನಮ್ಮ ಕರ್ತನಾದ ಯೇಸುವು ನಮಗಾಗಿ ಮರಣಹೊಂದಿ, ನಮ್ಮ ವಿರುದ್ಧವಾಗಿರುವ ನ್ಯಾಯದ ಕೇಳಿಕೆಗಳನ್ನು ನಮಗಾಗಿ ತೃಪ್ತಿಪಡಿಸಿರುವ ಹೊರತಾಗಿ ಬೇರೆ ಯಾವುದೇ ಬುನಾದಿ ಇರುವುದಿಲ್ಲ.

ಆದುದರಿಂದ, ಯೆಹೋವನ ಕುರಿತಾಗಿ, ಆತನ ಸ್ವಂತ ಪೂರ್ವ ಸಿದ್ಧತೆಯ ನಿಮಿತ್ತ ನಾವುಗಳು ಯೇಸು ಕ್ರಿಸ್ತನ ಮೂಲಕವಾಗಿ ಕ್ಷಮಿಸಲ್ಪಟ್ಟಿದ್ದೇವೆ. ಮತ್ತು ನಮ್ಮನ್ನು ಕೊಂಡುಕೊಂಡ ಕರ್ತನಾದ ಯೇಸುವಿನೊಂದಿಗೆ ನಮ್ಮ ಸಂಬಂಧದ ವಿಷಯದಲ್ಲಿ ಹೇಳುವುದಾದರೆ, ಆತನು ತನ್ನ ಮೂಲಕವಾಗಿ ತಂದೆಯ ಬಳಿಗೆ ಬರುವವರೆಲ್ಲರನ್ನೂ ಕ್ಷಮಿಸುತ್ತಾನೆ. ನಮ್ಮ ಕುರಿತಾಗಿ ದೇವರ ಯೋಜನೆಯು ಪಡಕೊಂಡ ಫಲಿತಾಂಶವು ನಮಗೆ ಅನುಕೂಲಕರವಾಗಿದೆ. ಯಾಕೆಂದರೆ, ನಮಗೆ ತಂದೆಯೇ ಯಾವ ಶರತ್ತುಗಳಿಲ್ಲದೇ, ಈಡುಬೆಲೆ ಇಲ್ಲದೆ ಕ್ಷಮಿಸಿದ್ದಾನೆಂದು ತೋರಿಬರುತ್ತದೆ. ಇಂಥಾಃ ಸತ್ಯ ಜ್ಞಾನದ ಆಲೋಚನೆಯು ನಮ್ಮ ಪಾಪಗಳು ಕಡುಗೆಂಪು ಬಣ್ಣದ್ದಾಗಿದ್ದರೂ, ಹೇಗೆ ಹಿಮಕ್ಕಿಂತಲೂ ಹೇಗೆ ಬೆಳ್ಳಗಾದವು ಮತ್ತು ದೇವರು ನಮ್ಮನ್ನು ಹಾಗೆಯೇ ಸಮರ್ಥಿಸಿ ಹೇಗೆ ಬಿಡುಗಡೆಗೊಳಿಸಿದನು ಎಂದು ತಂದೆಯೊಡನೆ ವಿಚಾರ ಮಾಡುವಂತೆ ಮಾಡುತ್ತದೆ. ಈ ರೀತಿಯಲ್ಲಿ ದೇವರು ನಮಗೆ ವಿಶ್ವಾಸ ಮತ್ತು ನಂಬಿಕೆಯ ಖಚಿತವಾದ ಬುನಾದಿಯನ್ನು ಒದಗಿಸಿಕೊಟ್ಟಿರುತ್ತಾನೆ.

## ಮರಣವು ಮಾನವ ಸಾಲವನ್ನು ರದ್ದು ಮಾಡುತ್ತದಲ್ಲವೇ ?

## Does not Death Cancel Man's Debt ?

'ಪಾಪದ ಸಂಬಳ ಮರಣ'ವೇ ಹೊರತು ನಿತ್ಯ ಯಾತನೆ ಅಲ್ಲ ಎಂಬುದನ್ನು ಮಾನ್ಯಮಾಡುವಾಗ, ಈ ವಿಷಯದಲ್ಲಿ ತಪ್ಪಾದ ವಿಚಾರಗಳನ್ನು ಮಾಡುವ ಧೋರಣೆ ಅನೇಕರಲ್ಲಿ ಇರುತ್ತದೆ. ಇದಕ್ಕೆ ಮಹಾ ವಿರೋಧಿಯು ಮತ್ತಷ್ಟು ದುರ್ಬೋಧನೆಗಳನ್ನು ಸೇರಿಸುತ್ತಾನೆ. ಈ ತಪ್ಪಾದ ಆಲೋಚನೆಗಳು ಹೀಗೆ ಹೇಳ ಹೊರಟಿವೆ – "ಪಾಪದ ಸಂಬಳ ಮರಣವಾದರೆ, ಸಾಯುವವರೆಲ್ಲರೂ ತಮ್ಮ ಪಾಪದ ದಂಡನೆಯನ್ನು ಸಂದಾಯಮಾಡಿದಂತಾಗುತ್ತದೆ ; ಇದರ ಪರಿಣಾಮವಾಗಿ, ವಾದವೇನೆಂದರೆ, ವಿಮೋಚಕನು ಮತ್ತು ಆತನ ಈಡುಬಲಿ ಬೆಲೆಯ ಅವಶ್ಯಕತೆಯೇ ಇರುವುದಿಲ್ಲ – ಪ್ರತಿಯೊಬ್ಬನೂ ತನ್ನ ತನ್ನ ಈಡು ಬೆಲೆಯನ್ನು ತಾನೇ ಅರ್ಪಿಸುತ್ತಾನೆ, ತನ್ನ ದಂಡನೆಯನ್ನು ತಾನೇ ಸಂದಾಯಮಾಡಿಕೊಳ್ಳುವುದರ ಮೂಲಕ ತನ್ನನ್ನು ತಾನೇ ಬಿಡಿಸಿಕೊಳ್ಳುತ್ತಾನೆ." ಇದರಿಂದ ಉಂಟಾಗುವ ಮತ್ತೊಂದು ವಾದವೆಂದರೆ, ಮರಣದ ನಂತರ ಮನುಷ್ಯನ ಮೇಲೆ ನ್ಯಾಯದ ಯಾವುದೇ ಹಕ್ಕಿನ ಕೇಳಿಕೆ ಇರುವುದಿಲ್ಲ – ಆತನ ನಾಶನದಲ್ಲಿ ತನ್ನ ಶಕ್ತಿಯನ್ನು ವಿನಿಯೋಗಿಸಿ – ತನ್ನ ಸ್ವಂತ ಕೇಳಿಕೆಗಳನ್ನು ತೃಪ್ತಿಪಡಿಸಿಕೊಳ್ಳುತ್ತದೆ. ಹೀಗಾಗಿ ಸತ್ತವರ ಪುನರುತ್ಥಾನವು ಕ್ರಮದಲ್ಲಿ ಮುಂದಿನದಾಗಿದೆ ಮತ್ತು ಅದು ಸರಿಯಾದುದಾಗಿದೆ ಎಂದು ಹೇಳಲಾಗುತ್ತದೆ. ಈ ದೃಷ್ಟಿಕೋನವು ಮಾನವರ ಪಾಪನಿವಾರಣೆಗಾಗಿ ಈಡುಬಲಿಯ ದೈವಿಕ ಅವಶ್ಯಕತೆಯನ್ನು ಮಾನವನ ಅನ್ಯಾಯದ ಪಾಪಕ್ಕೆ ದಂಡನೆಯನ್ನು ಎರಡರಷ್ಟು ಸಂದಾಯವೆಂದು ಹೇಳುತ್ತದೆ.

ಈ ಆಲೋಚನಾಸರಣಿಯು ತಪ್ಪೋ, ಸರಿಯೋ, ಇದು ನಿಶ್ಚಯವಾಗಿ ವೇದಕ್ಕೆ ತೀವ್ರವಾಗಿ ವ್ಯತಿರಿಕ್ತವಾಗಿದೆ ಮತ್ತು ನಮಗೆ ರಕ್ಷಕನ ಅಗತ್ಯತೆ, ನಾವು ಆದಾಮನ ಪಾಪದ ದಂಡನೆಯಿಂದ ಬಿಡುಗಡೆ ಹೊಂದಲು ಮತ್ತು ಮುಂದಿನ ಜೀವಿತಕ್ಕೆ ಯಾವುದೇ ಹಕ್ಕು ಪಡೆಯುವ ಮುನ್ನ ಆತನು ನಮಗಾಗಿ ಈಡುಬಲಿಯ ಬೆಲೆ ಸಂದಾಯ ಮಾಡಬೇಕಾದ ಅವಶ್ಯಕತೆ ಮುಂತಾದ ಹೇಳಿಕೆಗಳನ್ನು ನೀಡುವ ವೇದಗ್ರಂಥದೊಂದಿಗೆ ಇದು ತೀವ್ರವಾದ ಘರ್ಷಣೆಯನ್ನು ಹೊಂದಿದೆ. ನಾವೀಗಾಗಲೇ ಇಂಥಾಃ ವೇದವಚನಗಳನ್ನು ಉಲ್ಲೇಖಿಸಿದ್ದೇವೆ ಮತ್ತು ಅವುಗಳನ್ನು ಪುನರುಚ್ಚಿಸಲು ಅವು ಅಸಂಖ್ಯಾತವಾಗಿವೆ. ಆದುದರಿಂದ ಮೇಲಿನ ಹಕ್ಕಿನ ಹೇಳಿಕೆಯಲ್ಲಿನ ಅಸತ್ಯತೆಯನ್ನು ಬಹಿರಂಗಪಡಿಸುವುದಕ್ಕೆ ಮಾತ್ರವೇ ನಾವು ಸೀಮಿತರಾಗುತ್ತೇವೆ. ಸತ್ಯತೆಗಳ ಬಗ್ಗೆ ಸರಿಯಾದ ಆಲೋಚನೆಯು ವೇದವಚನಗಳ ಸಾಕ್ಷ್ಯಕ್ಕೆ ಸರಿಯಾಗಿವೆ ಎಂದು ತಿಳಿಸಲು ನಾವು ಶ್ರಮಿಸುತ್ತೇವೆ. ಈಡುಬಲಿಯಾಗಿ ನಮ್ಮ ಕರ್ತನ ಶಿಲುಬೆಯ ಮರಣವು ಅವಶ್ಯಕವಾಗಿತ್ತು. ದೇವರು ನ್ಯಾಯವಂತನು ಮತ್ತು ಅದೇ ಸಮಯದಲ್ಲಿ ಯೇಸುವನ್ನು ನಂಬುವವನನ್ನು, ಆತನನ್ನು ತನ್ನ ರಕ್ಷಕನು ಎಂದು ಅಂಗೀಕರಿಸುವವನನ್ನು ಸಮರ್ಥಿಸುವವನೂ ಆಗಿದ್ದಾನೆ.

ಪಾಪದ ದಂಡನೆಯು ಕೇವಲ ಸಾಯುವುದಷ್ಟೇ ಆಗಿದ್ದರೆ, ದೇವರು ಆದಾಮನಿಗೆ "ನಿನ್ನ ಪಾಪದ ಕಾರಣ ನೀನು ಸಾಯುವ ಸತ್ವಪರೀಕ್ಷೆಯನ್ನು ಅಭ್ಯಾಸ ಮಾಡಿಕೊಳ್ಳಬೇಕು!" ಎಂದು ಹೇಳಬಹುದಿತ್ತು. ಆಗ ಈ ದಂಡನೆಯನ್ನು ಆದಾಮನು ಮತ್ತು ಸಾಯುವ ಇತರರು ಅನುಭವಿಸುತ್ತಿದ್ದರು. ಆದರೆ ದಂಡನೆಯು ಅದಾಗಿರಲಿಲ್ಲ. ದಂಡನೆಯು **ಮರಣ**ವಾಗಿತ್ತು, ಸಾಯುವುದಲ್ಲ. ಮರಣವೆಂದರೆ ಜೀವ ಇಲ್ಲದಿರುವುದು, ನಾಶನ. ಆದುದರಿಂದ ಮಾನವನಿಗೆ ತನ್ನ ದಂಡನೆಯನ್ನು

ತೆರುವುದೆಂದರೆ ಆತನು ಮರಣದಲ್ಲೇ, ಸದಾಕಾಲ ಜೀವವಿಲ್ಲದೇ ಉಳಿದುಕೊಳ್ಳಬೇಕು. "ಪಾಪ ಮಾಡುವ ಆತ್ಮವು (ಜೀವವು) ಸಾಯುತ್ತದೆ" (ಯೆಹೆಜ್ಕೇಲ 18:14,20). ಈಗಾಗಲೇ ಹೇಳಿರುವಂತೆ, ಆತ್ಮನ (ಜೀವದ) ಈ ನಾಶನವು ದಂಡನೆಯ ಪ್ರಕಾರ ನಮ್ಮ ಕರ್ತನು ವಿಮೋಚನೆಯನ್ನು ಪೂರೈಸದೇ ಹೋಗುತ್ತಿದ್ದರೆ ಶಾಶ್ವತವಾಗಿರುತ್ತಿತ್ತು. ಆ ವಿಮೋಚನೆಯ ದೃಷ್ಟಿಯಿಂದ ಮರಣವನ್ನು ರೂಪಕಾತ್ಮಕವಾಗಿ 'ನಿದ್ರಿಸುವುದು' ಎಂದು ಕರೆಯಲಾಗಿದೆ. – ನಮ್ಮ ವಿಮೋಚಕನು ನೆರವೇರಿಸಿದ ಆ ವಿಮೋಚನೆಯ ದೃಷ್ಟಿಯಲ್ಲಿ ಈ ಮರಣ ನಿದ್ರೆಯಿಂದ ಸೂಕ್ತ ಸಮಯದಲ್ಲಿ ದೈವಿಕ ನ್ಯಾಯದ ಪೂರ್ಣ ಒಪ್ಪಿಗೆಯೊಡನೆ ಎಚ್ಚರಗೊಳಿಸಲಾಗುವುದು. ಇದರ ಬೇಡಿಕೆಯನ್ನು ಕ್ರಿಸ್ತನು ಪೂರೈಸಿದ್ದಾನೆ. ಈ ರೀತಿಯಲ್ಲಿ, ನಾವು ನೋಡಿದಂತೆ, ಇದು ವಿಮೋಚನೆಯಲ್ಲದಿದ್ದರೆ ಆದಾಮನ ಮರಣವು ಎರಡನೆಯ ಮರಣದಂತೆಯೇ ಇರುತ್ತಿತ್ತು. ಅಂದರೆ 'ಕರ್ತನ ಸಮ್ಮುಖಕ್ಕೂ ಆತನ ಪರಾಕ್ರಮದ ವೈಭವಕ್ಕೂ ದೂರವಾಗಿ ನಿತ್ಯನಾಶನವೆಂಬ ದಂಡನೆಯನ್ನು ಅನುಭವಿಸುವರು' (2 ಥೆಸಲೋನಿಕ 1:9–10). ಈ ಪ್ರಸ್ತಾಪದ ಸರಿಯಾದ ದೃಷ್ಟಿಕೋನವು ಒಮ್ಮೆ ದೊರೆತಾಗ, ತರ್ಕಬದ್ಧವಾಗಿ ಯೋಚಿಸುವ ವ್ಯಕ್ತಿಗೆ ಈ ದಂಡನೆಯು ಮಾನವನಲ್ಲಿರುವುದೆಲ್ಲವನ್ನೂ ತೆಗೆದುಹಾಕುವದು, ಕಷ್ಟ ಅನುಭವಿಸುವುದಕ್ಕಾಗಿ, ಸಂತೋಷಪಡುವುದಕ್ಕಾಗಲೀ ಏನೂ ಉಳಿಯುವುದಿಲ್ಲ ಎಂಬ ವಿಷಯದಲ್ಲಿ ಯಾವುದೇ ಅನುಮಾನವಿರುವುದಿಲ್ಲ. ಮತ್ತೊಂದೆಡೆಯಲ್ಲಿ, ನಾವು ಈ ದೃಷ್ಟಿಕೋನದಲ್ಲಿ ಎಷ್ಟು ತನಿಖೆ ನಡೆಸುತ್ತೇವೋ ಅಷ್ಟೇ, ನಮ್ಮ ಜನಾಂಗವು ದೈವಿಕ ದಂಡನೆಯ ಅಡಿಯಲ್ಲಿ ತೊಡಗಿಸಿಕೊಂಡಿರುವ ಕಷ್ಟದ ಕಠೋರತೆಯನ್ನು ನೋಡ ಬಹುದಾಗಿದೆ; ಮತ್ತು ಈಡಿನ ಅವಶ್ಯಕತೆಯನ್ನು ನಾವು ಇನ್ನೂ ಹೆಚ್ಚಾಗಿ ಮೆಚ್ಚಿಕೊಳ್ಳುತ್ತೇವೆ. ನಾವು ಪ್ರಸ್ತಾಪದ ಈ ಲಕ್ಷಣವನ್ನು ಸ್ಪಷ್ಟವಾಗಿ ನೋಡುವಾಗ, ನಮ್ಮ ಕರ್ತನಾದ ಯೇಸು ನಮ್ಮ ವಿಮೋಚಕನಾದಾಗ, ಆತನು ತನ್ನನ್ನೇ ನಮ್ಮ ಈಡುಬಲಿಯ ಬೆಲೆಯನ್ನಾಗಿ ಅರ್ಪಿಸಿದಾಗ, ನಮ್ಮ ಮೂಲ ದಂಡನೆಯು ನಮಗೇನಾಗಿತ್ತೋ ಅದೇ ಆತನಿಗೂ ಆಗಿತ್ತು ; ಅಂದರೆ, ಮಾನವನಾಗಿದ್ದ ಯೇಸುಕ್ರಿಸ್ತನು ನಮ್ಮ ಮರಣದ ಸಲುವಾಗಿ ಆ ಪದದ 'ನಿತ್ಯವಾದ ನಾಶನ' ಎಂಬ ನಿರಪೇಕ್ಷವಾದ ಅರ್ಥದಲ್ಲಿ ಶ್ರಮೆ ಅನುಭವಿಸಿದನು. ಆದುದರಿಂದ ಕ್ರಿಸ್ತನು ಇನ್ನು ಮುಂದೆ ಮಾಂಸಶರೀರಧಾರಿ ಯಾಗಿರಲಿಲ್ಲ. ಮಾನವ ಸ್ವಭಾವವಾದ ಮಾಂಸ ಶರೀರವನ್ನು ನಮ್ಮ ಈಡು ಬೆಲೆಯಾಗಿ ಸಮರ್ಪಿಸಲಾಯಿತು. ಅದನ್ನು ಹಿಂತೆದುಕೊಳ್ಳಲಿಲ್ಲ ಎಂಬ ಸತ್ಯವು ಆ ಈಡುಬಲಿಯು ಎಲ್ಲಾ ಆಶೀರ್ವಾದದಾಯಕ ಅವಕಾಶಗಳೂ ನೂತನ ಒಡಂಬಡಿಕೆಯ ಷರತ್ತುಗಳಿಗನುಸಾರವಾಗಿ ಎಲ್ಲಾ ಮಾನವ ಕುಟುಂಬಗಳಿಗೆ ದೊರೆಯಲಿದೆ ಎಂಬುದನ್ನು ನಿಶ್ಚಯಪಡಿಸುವುದಾಗಿದೆ. – ನಮ್ಮ ಪ್ರೀತಿಯ ವಿಮೋಚಕನಿಗಿದ್ದ ಎಲ್ಲಾ ಸರ್ವಸಂಪೂರ್ಣತೆಗಳೂ ಮತ್ತು ಹಕ್ಕುಗಳೂ ಆದಾಮನು ತನ್ನ ಅವಿಧೇಯತೆಯ ಮೂಲಕ ಕಳಕೊಂಡ ಅದೇ ರೀತಿಯ ಹಕ್ಕುಗಳೊಂದಿಗೆ ವಿನಿಮಯಗೊಂಡಿತು ; ಆದುದರಿಂದ ಇವುಗಳು 'ಪುನಃ ಸಂಧಾನದ ಸಮಯದಲ್ಲಿ' ದೇವರ ಷರತ್ತು ಗಳಿಗನುಸಾರವಾಗಿ ಅಂಗೀಕರಿಸು ವವರೆಲ್ಲರಿಗೂ ನೀಡಲ್ಪಡುವುದು. ಈ ಸಮಯದ ಬಗ್ಗೆ ದೇವರು ಪ್ರಪಂಚ ಪ್ರಾರಂಭವಾದಾಗಿನಿಂದಲೂ ತನ್ನೆಲ್ಲಾ ಪವಿತ್ರ ಪ್ರವಾದಿಗಳ ಮೂಲಕ ಮಾತನಾಡಿದ್ದಾನೆ – ಅ.ಕೃ. 3:19–21.

## "ಎಲ್ಲಾ ಮನುಷ್ಯರೂ ರಕ್ಷಣೆಯನ್ನು ಹೊಂದಿಕೊಳ್ಳಬೇಕು"

## "Who will have all men to be saved"

**"ಎಲ್ಲಾ ಮನುಷ್ಯರೂ ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬುದು ಆತನ ಚಿತ್ತವಾಗಿದೆ"** – 1 ತಿಮೋ. 2:4.

ಈ ಈಡು ಬಲಿಯ ಬಗ್ಗೆ ತಪ್ಪಾಗಿ ಆಲೋಚನೆ ಮಾಡುವ ಮತ್ತೊಂದು ಅನರ್ಥವು ಕೆಲವರ ಹಾದಿಯನ್ನು ಆಕ್ರಮಿಸಿದೆ. ಒಂದು ಕಾಲದಲ್ಲಿ 'ಪಾಪದ ಸಂಬಳ'ವೆಂದರೆ ನಿತ್ಯವಾದ ಯಾತನೆ ಎಂದೂ ಮತ್ತು 'ಹೃದಯ ಪರಿಶುದ್ಧತೆಯುಳ್ಳವರನ್ನು, 'ಚಿಕ್ಕಹಿಂಡಿನವರನ್ನು, ಆಯ್ಕೆಯಾದ ಸಭೆಯನ್ನು ಹೊರತುಪಡಿಸಿ ಉಳಿದವರೆಲ್ಲರೂ ಆ ನಿತ್ಯವಾದ ಯಾತನೆಯನ್ನು ಅನುಭವಿಸಲೇಬೇಕಾಗುತ್ತದೆ' ಎಂಬ ಮಾನವರ ಸಾಕ್ಷಿಯನ್ನು ಯಾವುದೇ ವೇದವಚನಗಳ ಉಲ್ಲೇಖ ಗಳಿಲ್ಲದೇ ಸಂತೋಷದಿಂದ ನಂಬಿದವರು ಆ ದಾರುಣವಾದ ಭ್ರಮೆಯಿಂದ ಒಮ್ಮೆ ಹೊರಬಂದು ಇದಕ್ಕೆ ವಿರುದ್ಧವಾದ ಅತಿರೇಕಕ್ಕೆ ಒಲವುಳ್ಳವರಾಗಿ ಸಾರ್ವತ್ರಿಕವಾದ 'ನಿತ್ಯ ರಕ್ಷಣೆ' ಎಂಬ ಸಿದ್ಧಾಂತವನ್ನು ಒಂದಲ್ಲಾ ಒಂದು ರೂಪದಲ್ಲಿ ಅಂಗೀಕರಿಸುವ ವರಾಗಿದ್ದಾರೆ.

ಈ "ಸರ್ವಮುಕ್ತಿತ್ವ" (Universalist) ತಪ್ಪನ್ನು ಹಿಡುಕೊಂಡ ಹೆಚ್ಚಿನ ಜನರು ಈಡುಬಲಿಯನ್ನು ಸಂಪೂರ್ಣವಾಗಿ ಒಪ್ಪುತ್ತಿಲ್ಲ. ಆದರೆ ಕೆಲವರು ಈಡುಬಲಿಯ ಮೇಲಿನ ನಂಬಿಕೆಯ ಕಾರಣ ಅದನ್ನು ಹಿಡುಕೊಂಡಿದ್ದಾರೆ. ಆದರೆ ಇದರ ಕಾರ್ಯಾಚರಣೆಯನ್ನು ಅವರು ಅರ್ಥಮಾಡಿಕೊಂಡಿಲ್ಲ. ಈ ವರ್ಗದವರು ಮೇಲೆ ತಿಳಿಸುವ ವೇದವಚನವನ್ನು ಸ್ವಾಧೀನಪಡಿಸಿಕೊಳ್ಳುವ ಶೀಘ್ರ

ಪ್ರವೃತ್ತಿಯುಳ್ಳವರಾಗಿದ್ದು ಈ ಮುಂದಿನ ಆಲೋಚನೆಯ ಪ್ರಕ್ರೀಯೆಯಲ್ಲಿ ತೃಪ್ತರಾಗಿದ್ದಾರೆ; ದೇವರು ಎಲ್ಲಾ ಮನುಷ್ಯರೂ ರಕ್ಷಣೆ ಹೊಂದಿಕೊಳ್ಳಬೇಕೆಂದು ಬಯಸಿದರೆ, ಅದು ಎಲ್ಲವನ್ನೂ ನಿರ್ಧರಿಸುತ್ತದೆ. ಯಾಕೆಂದರೆ ಆತನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರುವ ಕಾಲವೊಂದು ಬರಲಿದೆ. ಆದುದರಿಂದ ಅವರು ಹೇಳುವುದೇನೆಂದರೆ, ಮಾನವನಾಗಿದ್ದ ಯೇಸುಕ್ರಿಸ್ತನು ಎಲ್ಲರಿಗಾಗಿ ಸಮರ್ಪಿಸಿದ ಈಡುಬಲಿಯು ಎಲ್ಲರ ರಕ್ಷಣೆಯನ್ನು ಸಂಪಾದಿಸಿ ಕೊಳ್ಳುವುದರ ಮೂಲಕ ದೇವರ ಚಿತ್ತವನ್ನು ಸಂಪಾದಿಸಿಕೊಳ್ಳಬೇಕಾಗುತ್ತದೆ. ಅವರು ತಮ್ಮ ಸುತ್ತ ತಪ್ಪುಗಳ ಕಂದಕ ತೋಡಿಕೊಂಡು ಅದರಲ್ಲಿಯೇ ಮುಂದುವರೆಯುವಂತೆ 'ನಾವು ಅದನ್ನು ನೋಡುವಾಗ, ದೇವರು ಯೇಸುಕ್ರಿಸ್ತನ ಈಡುಬಲಿಯನ್ನು ಒಪ್ಪಿಕೊಂಡಿರುವಾಗ ಆತನು ನ್ಯಾಯಪ್ರಕಾರವಾಗಿ ಎಲ್ಲಾ ಪಾಪಿಗಳನ್ನು ರಕ್ಷಿಸಲು ಮತ್ತು ಏದೇನಿನಲ್ಲಿ ಕಳಕೊಂಡ ನಿತ್ಯಜೀವವನ್ನು ಅವರಿಗೆ ಹಿಂತಿರುಗಿ ಕೊಡಲು ಬದ್ಧನಾಗಿರುತ್ತಾನೆ' ಎಂದು ಹೇಳುತ್ತಾರೆ. ಅವರ ಸ್ಥಿತಿಯು ಎಷ್ಟು ಭದ್ರವಾಗಿದೆಯೋ ಅಷ್ಟು ಅವರ ತೃಪ್ತಿಗಾಗಿ ಉತ್ತರಿಸುವ ಉದ್ದೇಶಹೊಂದಿದೆ ಮತ್ತು ಅವರು ಎಲ್ಲಾ ಆಕ್ಷೇಪಣೆಯನ್ನು ಮೀರಿಹೋಗಿದ್ದಾರೆ ಎಂದು ನಾವು ಹೇಳುತ್ತೇವೆ.

ಈ ರೀತಿಯಾಗಿ ಆಲೋಚನೆಮಾಡುವ ತೊಂದರೆಯೆಂದರೆ, ಅದು ಸಾಕಷ್ಟು ವಿಸ್ತಾರವಾಗಿ ಎಲ್ಲವನ್ನೂ ಒಳಗೊಂಡಿಲ್ಲ. ಅದು ವೇದವಚನಗಳ ಕೆಲವೊಂದು ಅಂಶಗಳನ್ನಷ್ಟೆ ಹಿಡುಕೊಂಡಿದೆ ಮತ್ತು ಕೇಳುವ ಅವಕಾಶ ನೀಡಬೇಕಾದ ಅನೇಕ ವೇದವಚನಗಳನ್ನು ನಿರ್ಲಕ್ಷಿಸಿದೆ ಮತ್ತು ನಿರ್ಣಯಕ್ಕೆ ಬರಬೇಕಾದಂತಹ ಸಾಕ್ಷ್ಯದಲ್ಲಿ ಒಂದು ಗಣ್ಯವಾದ ವಿಷಯವೂ ಇರಬೇಕು. ಇದಲ್ಲದೆ ಯಾವ ವಚನಗಳು ಆಧಾರವಾಗಿ ಉಪಯೋಗಿಸಲ್ಪಡುವವೋ, ಇವುಗಳನ್ನು ಭಾಗಶಃ ಉಲ್ಲೇಖಿಸುವದಲ್ಲದೇ ಅಪಾರ್ಥವಾಗಿಯೂ ತಿಳಿಸುತ್ತದೆ.

ನಮ್ಮ ಪರಲೋಕದ ತಂದೆಯು "ಸಾಯುವವರ ಸಾವಿನಲ್ಲಿ ನನಗೆ ಸಂತೋಷವಿಲ್ಲ; ತಿರುಗಿಕೊಂಡು ಬಾಳಿರಿ" (ಯೆಹೆಜ್ಕೇಲ 18:32) ಎಂದಿದ್ದಾನೆ. ದಂಡನೆಗೊಳಗಾಗಿದ್ದ ಈ ಲೋಕದವರಿಗಾಗಿ ಈಡುಬಲಿ ನೀಡಿದಾತನ ಈ ಮಹಾ ತ್ಯಾಗವು ನಮ್ಮ ಪರಲೋಕದ ತಂದೆಯ ವಿಷಯದಲ್ಲಿ ನೂತನವಾದುದೇನೂ ಅಲ್ಲ. ಆತನು ಬದಲಾಗುವವನಲ್ಲ; ಆತನು ತನ್ನ ಸೃಷ್ಟಿಗಳ ಬಗ್ಗೆ ಈ ರೀತಿಯ ಒಳ್ಳೆಯ ಮನಸ್ಸನ್ನು ಸದಾ ಕಾಲಕ್ಕೂ ಹೊಂದಿದ್ದಾನೆ. ಆತನು ಅವರನ್ನು ಕೇವಲ ಯಂತ್ರಗಳಂತೆ ಬುದ್ದಿವಂತ ರನ್ನಾಗಿಯೂ, ನೀತಿವಂತರನ್ನಾಗಿಯೂ, ಸ್ವಂತ ಚಿತ್ತಕ್ಕೆ ಅವಕಾಶವಿಲ್ಲದಂತೆ ಅಥವಾ ಆತನ ಸಂತೋಷಕ್ಕೆ ವಿರೋಧವಾಗಿ ಏನೂ ಮಾಡಲಾರದಂತೆ ಸೃಷ್ಟಿಸಬಹುದಿತ್ತು. ಆದರೆ, ಆತನು ಮಾನವರನ್ನು ಯಾಂತ್ರೀಕೃತ ಮಾಡಲು ಆರಿಸಿಕೊಳ್ಳಲಿಲ್ಲ. ಆದರೆ ಅವರನ್ನು ತನ್ನ ಸ್ವರೂಪದ ಜೀವಿಗಳನ್ನಾಗಿ ಮಾಡಿದನು – ತನ್ನಂತೆಯೇ ಅವರಿಗೂ ಆಯ್ಕೆಯ ಸ್ವಾತಂತ್ರ್ಯ, ಚಿತ್ತದ ಸ್ವಾತಂತ್ರ್ಯ, ಒಳ್ಳೆಯದನ್ನಾಗಲೀ, ಕೆಟ್ಟದ್ದನ್ನಾಗಿ ಆಯ್ದುಕೊಳ್ಳುವ ಸ್ವಾತಂತ್ರ್ಯ ಇರುವಂತೆ ಅವರನ್ನು ಸೃಷ್ಟಿಸಿದನು. ಎಲ್ಲರೂ ತನ್ನನ್ನು ಕಡ್ಡಾಯವಾಗಿ ಆರಾಧಿಸಬೇಕು ಎಂದು ಆತನು ಬಯಸದೆ "ದೇವರು ಆತ್ಮಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು" (ಯೋಹಾನ 4:24) ಎಂಬ ಕರೆಯನ್ನು ನೀಡಿದನು. ಇದು ಸ್ವಯಂಪ್ರೇರಣೆಯಿಂದ, ಪ್ರೀತಿಯಿಂದ, ಅತನ ನೀತಿವಂತಿಕೆಯನ್ನು ಮೆಚ್ಚಿಕೊಂಡು ಮಾಡತಕ್ಕದ್ದು. ತನ್ನ ನೀತಿವಂತಿಕೆಯನ್ನೂ ಇದು ಪ್ರತಿನಿಧಿಸುತ್ತದೆ – ಯೋಹಾನ 4:23.

ಆದಾಗ್ಯೂ, ದೇವರು ಇದೇ ಸದ್ಭಾವನೆಯನ್ನು ಮಾನವರ ಮೇಲೆ ಹೊಂದಿರುವಾಗ, ಆತನು ಆದಾಮನಿಗೆ ವಿಧೇಯತೆ ಅಥವಾ ಅವಿಧೇಯತೆಯನ್ನು ತೋರುವಲ್ಲಿ ತನ್ನ ಸ್ವಂತ ಆಯ್ಕೆಯನ್ನು ಅನುಮತಿಸಿದಾಗ ಆತನು ಅವಿಧೇಯತೆಯನ್ನು ಆರಿಸಿಕೊಳ್ಳಲಾಗಿ, ಮರಣ ಹೊಂದುವವರ ಮರಣದಲ್ಲಿ ಸಂತೋಷವಿರದ ಅದೇ ದೇವರು ಆತನಿಗೆ ಮರಣ ದಂಡನೆಯನ್ನು ವಿಧಿಸುತ್ತಾನೆ ಮತ್ತು ಆರು ಸಹಸ್ರ ವರ್ಷಗಳವರೆಗೆ ಇದು ಕಾರ್ಯಗತಗೊಳ್ಳುತ್ತದೆ. ಈಗ ಆತನು ಕ್ರಿಸ್ತ ಯೇಸುವಿನಲ್ಲಿ ವಿಮೋಚನಾ ಮಾರ್ಗವನ್ನು ಒದಗಿಸಿದ್ದಾನೆ ಮತ್ತು ಮಾನವ ಕುಟುಂಬದ ಪ್ರತಿಯೊಬ್ಬ ಸದಸ್ಯನೂ ಆತನೊಂದಿಗೆ ಸಾಮರಸ್ಯಕ್ಕೆ ಹಿಂತಿರುಗುವ ಮತ್ತು ಕ್ರಿಸ್ತನ ಮೂಲಕ ನಿತ್ಯಜೀವವನ್ನು ಹೊಂದಿಕೊಳ್ಳುವ ಅವಕಾಶವನ್ನು ಒದಗಿಸಿಕೊಟ್ಟಿರುತ್ತಾನೆ. ಆತನು ಅದೇ ಸಮಯದಲ್ಲಿ ಪ್ರಶ್ನಾತೀತವಾಗಿ ಈ ನಿತ್ಯಜೀವವನ್ನು ಪಡಕೊಳ್ಳುವಂತೆ ಕೆಲವೊಂದು ಷರತ್ತುಗಳನ್ನು ವಿಧಿಸಿರುತ್ತಾನೆ. ನೂತನ ಒಡಂಬಡಿಕೆಯಲ್ಲಿರುವ ಈ ಷರತ್ತುಗಳೆಂದರೆ ನವೀಕರಿಸಿದ ಶುದ್ಧ ಹೃದಯ, ದೇವರಿಗೆ ಸ್ಥಿರಚಿತ್ತ (ಕೀರ್ತನೆ 51:10) ಮತ್ತು ಸಂಪೂರ್ಣವಾದ ವಿಧೇಯತೆ. ಹಾಗೂ ಈ ನೂತನ ಒಡಂಬಡಿಕೆಯ ನೆರವೇರಿಕೆಯು ಆ ಒಡಂಬಡಿಕೆಯ ಮಧ್ಯಸ್ಥನ ಸಹಾಯದ ಮೂಲಕ ಮಾತ್ರವೇ ಸಾಧ್ಯ. ಆದುದರಿಂದ ಹೇಳಿಕೆ ಏನೆಂದರೆ – "ಆತನ ಮಗನನ್ನು ನಂಬುವವನಿಗೆ ನಿತ್ಯಜೀವ ಉಂಟು; ಮಗನಿಗೆ ಒಳಗಾಗದವನು ಜೀವವನ್ನು ಕಾಣುವುದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿರುವುದು" – ಯೋಹಾನ 3:36.

ಇದು 'ಮರಣ ಹೊಂದುವವರ ಮರಣದಲ್ಲಿ ದೇವರಿಗೆ ಸಂತೋಷವಿಲ್ಲ' ಎಂಬ ಹೇಳಿಕೆಗೆ ಸಂಪೂರ್ಣ ಅನುಸಾರವಾಗಿಯೇ ಅದೆ, ಮಾತ್ರವಲ್ಲದೆ 'ದೇವರು ಎಲ್ಲಾ ಮಾನವರೂ ರಕ್ಷಣೆ ಪಡಕೊಳ್ಳಬೇಕೆಂತಲೂ, ಸತ್ಯದ ಜ್ಞಾನಕ್ಕೆ ಬರಬೇಕೆಂತಲೂ ಬಯಸುತ್ತಾನೆ' ಎಂಬ ಹೊಸ ಒಡಂಬಡಿಕೆಯ ಹೇಳಿಕೆಗೂ ಅನುಸಾರವಾಗಿದೆ. ಆದಾಗ್ಯೂ, ಯಾರು ಕ್ರಿಸ್ತ ಯೇಸುವಿನಲ್ಲಿ ದೇವರ ಕರುಣೆಯನ್ನು ತಿರಸ್ಕರಿಸುತ್ತಾರೋ ಅಂಥವರು ಆ ಮೂಲಕ ದೇವರ ಕೃಪೆಯನ್ನು ಅಲಕ್ಷ್ಯ ಮಾಡುವವರಾಗಿದ್ದಾರೆ ಮತ್ತು ನೀತಿವಂತಿಕೆಯ ಬದಲಾಗಿ ಪಾಪವನ್ನು ಅರಿಸಿಕೊಂಡುದರ ಸಲುವಾಗಿ ಅವರು ನಿಶ್ಚಯವಾಗಿಯೂ ಎರಡನೆಯ ಮರಣವನ್ನು ಹೊಂದಿಕೊಳ್ಳುತ್ತಾರೆ ಎಂಬುದಾಗಿ ವೇದವಚನಗಳು ನಮ್ಮ ಗಮನಕ್ಕೆ ತರುತ್ತವೆ.

ನಾವು ಪರಿಗಣಿಸುತ್ತಿರುವ ಈ ವೇದಭಾಗವು ಆದಾಮನ ಪಾಪದ ದೆಸೆಯಿಂದ ಉಂಟಾಗಿರುವ ಅಜ್ಞಾನದಿಂದ, ಕುರುಡುತನ ಮತ್ತು ಹೀನೈಸುವಿಕೆಯಿಂದ ಎಲ್ಲಾ ಮಾನವರೂ ಕಾಪಾಡಲ್ಪಡಬೇಕೆಂಬುದೇ ದೇವರ ಕೇವಲ ಇಚ್ಛೆಯಾಗಿದೆ ಎಂಬುದನ್ನು ಸೂಚಿಸುತ್ತದೆ. ಇಲ್ಲಿ ಆದಾಮನ ಮೂಲಕ ಉಂಟಾದ ನಷ್ಟದಿಂದ ಚೇತರಿಸಿಕೊಳ್ಳುವುದೇ ಹೊರತು ನಿರಂತರ ರಕ್ಷಣೆಯ ಯಾವುದೇ ಉಲ್ಲೇಖವಿರುವುದಿಲ್ಲ, ಮತ್ತು ತಂದೆಯಾದ ಆದಾಮನು ನಿತ್ಯವಾದ ಜೀವಿತವನ್ನು ಕಳೆದುಕೊಂಡಿರಲಿಲ್ಲ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಆತನಲ್ಲಿ ಸಮರ್ಪಕವಾದ ಜೀವವಿತ್ತು ಮತ್ತು ಮರಣದ ಎಲ್ಲಾ ಅಂಶಗಳಿಂದ ಆತನು ಮುಕ್ತನಾಗಿದ್ದನು. ಆದಾಗ್ಯೂ ಆತನು ದೇವರಿಗೆ ವಿಧೇಯತೆ ತೋರಿಸುವ ಮೂಲಕ ದೇವರೊಂದಿಗೆ ಆತನು ಸಾಮರಸ್ಯವುಳ್ಳ ಸ್ವಭಾವ ವೊಂದನ್ನು ಬೆಳೆಸಿಕೊಳ್ಳುತ್ತಾನೋ ಮತ್ತು ಈ ಮೂಲಕ ನಿತ್ಯಜೀವಕ್ಕೆ ಅರ್ಹನಾಗುತ್ತಾನೋ ಎಂಬ ಪರೀಕ್ಷಣೆಯಲ್ಲಿ ಏದೇನಿನಲ್ಲಿ ಇಡಲ್ಪಟ್ಟಿದ್ದನು. ಇದರ ಪರಿಣಾಮವಾಗಿ, ಆದಾಮ ಮತ್ತು ಆತನ ಜನಾಂಗದವರು ಮರಣವೆಂಬ ಶಾಪದಿಂದ ಬಿಡುಗಡೆ ಹೊಂದಿಕೊಳ್ಳುವಾಗ, ಮರಣದಂಡನೆಯಿಂದ ಈ ರಕ್ಷಣೆ ಅಥವಾ ವಿಮೋಚನೆಯು ಅವರಿಗೆ ನಿತ್ಯಜೀವವನ್ನು ಒದಗಿಸಿ ಕೊಡುವುದಿಲ್ಲ, ಆದರೆ ತಂದೆಯಾದ ಆದಾಮನಿಗಿದ್ದ ಅನುಕೂಲವಾದ ಸ್ಥಿತಿಯು ಅವರಿಗೆ ಒದಗಿಬರುತ್ತದೆ ಮತ್ತು ನಿತ್ಯಜೀವಕ್ಕಾಗಿ ಹೊಸದಾದ ಪರೀಕ್ಷೆಯೊಂದು ಪುನಃ ಪ್ರಾರಂಭವಾಗುತ್ತದೆ.

ಆದಾಮನಿಗಾಗಿ ಮತ್ತು ಆತನ ಎಲ್ಲಾ ಜನಾಂಗದವರಿಗಾಗಿ ಪಡಕೊಂಡ ಈ ನವೀನ ಪರೀಕ್ಷೆಯು ಹೆಚ್ಚಾದ ಜ್ಞಾನವಿರುವ ಕಾರಣ ಆದಾಮನ ಮೂಲ ಪರೀಕ್ಷೆಗಿಂತಲೂ ಕೆಲವೊಂದು ವಿಷಯಗಳಲ್ಲಿ ಹೆಚ್ಚು ಅನುಕೂಲಕರವಾಗಿರುತ್ತದೆ. ಮಾನವನಿಗೆ ಪಾಪದ ಮಿತಿಮೀರಿದ ಪಾಪಪೂರಿತತೆಯ ಬಗ್ಗೆ ಹಾಗೂ ನೀತಿವಂತಿಕೆಯ ಆಶೀರ್ವಾದತೆಯ ಬಗ್ಗೆ ಮತ್ತು ಕ್ರಿಸ್ತನಲ್ಲಿರುವ ದೇವರ ಕೃಪೆಯ ಬಗ್ಗೆ ಹೆಚ್ಚಾಗಿ ಕಲಿತುಕೊಳ್ಳುವ ಅವಕಾಶಗಳು ದೊರೆತಿವೆ. ಈ ಜ್ಞಾನವು ಮಿಲಿಯಾಂತರ ಯುಗದ ನೂತನ ಪರೀಕ್ಷಾಕಾಲದಲ್ಲಿ ಅದನ್ನು ಉಪಯೋಗಿಸಿಕೊಳ್ಳುವವರ ಸೇವೆಗಾಗಿಯೇ ಅದೆ – ಆಗ ಸಹಸ್ರ ವರ್ಷಗಳ ಕಾಲ ಮಾನವಜಾತಿಯ ಬಿಳಿಯಾದ ಮಹಾ ಸಿಂಹಾಸನದ ಎದುರಿನಲ್ಲಿ ಇಡೀ ಪ್ರಪಂಚವು ನ್ಯಾಯತೀರ್ಪಿನಲ್ಲಿ ಅಥವಾ ನಿತ್ಯಜೀವದ ಪರೀಕ್ಷೆಯಲ್ಲಿರುತ್ತದೆ – ಪ್ರಕಟನೆ 20:4.

ಶಾಪದಿಂದ ಈ ರಕ್ಷಣೆಯು, ಜ್ಞಾನದ ಅನುಕೂಲಕರ ಅವಕಾಶಗಳಿಗೆ ಮರಳುವುದು ದೇವರ ಚಿತ್ತವಾಗಿದೆ. ಈ ಕಾರಣದಿಂದಲೇ ಆತನು ದೇವರ ಮತ್ತು ಮನುಷ್ಯರ ನಡುವೆ ಒಬ್ಬ ಮಧ್ಯಸ್ಥಗಾರನನ್ನು ನೇಮಿಸಿದನು. ಆತನೇ ಮಾನವನಾದ ಯೇಸು ಕ್ರಿಸ್ತನು ಮತ್ತು ಈತನು ತನ್ನನ್ನೇ ಎಲ್ಲರಿಗಾಗಿ ಈಡುಬಲಿ ಬೆಲೆಯನ್ನು ಸಮರ್ಪಿಸಿದನು. ಇದೂ ಸೂಕ್ತ ಸಮಯದಲ್ಲಿ ಹೇಳಬೇಕಾದ ಸಾಕ್ಷಿಯು.

"ಎಲ್ಲಾ ಮನುಷ್ಯರೂ ಆದಾಮನ ದಂಡನೆಯಿಂದ ರಕ್ಷಣೆ ಹೊಂದಿಕೊಳ್ಳಬೇಕೆಂಬುದೇ ದೇವರ ಚಿತ್ತವಾಗಿದೆ" ಎಂಬ ಈ ಹೇಳಿಕೆಯು ಅದೇ ಅಪೋಸ್ತಲನ ಸಮಾನಂತರವಾದ ಹೇಳಿಕೆಯೊಂದನ್ನು ಕಂಡುಕೊಳ್ಳುತ್ತದೆ – "ಇಸ್ರಾಯೇಲ್ ಜನವೆಲ್ಲಾ ರಕ್ಷಣೆ ಹೊಂದುವುದು" (ರೋಮಾ. 11:26). ಈ ಕಡೆಯ ಪರಿಚ್ಛೇದದಲ್ಲಿರುವ ಆಲೋಚನೆಯು ಎಲ್ಲಾ ಇಸ್ರಾಯೇಲ್ಯರು ನಿತ್ಯರಕ್ಷಣೆಯನ್ನು ಹೊಂದಿಕೊಳ್ಳುವರು ಎಂಬುದಲ್ಲ, ಅದು ಇಸ್ರಾಯೇಲ್ಯ ರೆಲ್ಲರೂ ತಮ್ಮ ಅಂಧತ್ವದಿಂದ ರಕ್ಷಣೆ ಹೊಂದುವರು ಎಂಬುದೇ – ಮೆಸ್ಸೀಯನನ್ನು ರಾಷ್ಟ್ರೀಯವಾಗಿ ತಿರಸ್ಕರಿಸಿದ ಕಾರಣ ಅವರ ಮೇಲೆರಗಿದ್ದ ಕುರುಡುತನದಿಂದ ರಕ್ಷಣೆ ಹೊಂದಿದವರು ಎಂಬ ಅರ್ಥದಲ್ಲಿ. ಹೀಗಾಗಿ ವಾಕ್ಯಭಾಗದ ಆಲೋಚನೆಯು ಸಹಾ ಮಿತಿಯುಳ್ಳದ್ದಾಗಿದ್ದು ಆದಾಮನಿಂದಾದ ನಶಿಸುವಿಕೆಗಳಿಗೆ ಮಾತ್ರವೇ ಅನ್ವಯಿಸುವಂತವುಗಳಾಗಿವೆ. ದೇವರು ತಾನು ಪ್ರಕಟಿಸಿದ ಮತ್ತು ಆದಾಮನ ಪರೀಕ್ಷೆಯನ್ನು ಮೊಟಕುಗೊಳಿಸಿದ ನ್ಯಾಯದಂಡನೆಯಿಂದ ಎಲ್ಲಾ ಮನುಷ್ಯರೂ ರಕ್ಷಣೆ ಹೊಂದಿಕೊಳ್ಳಬೇಕೆಂದು ಬಯಸುವನು (ಇದನ್ನು ಆತನು ತನ್ನ ಮಗನ ಮರಣದ ಮೂಲಕವಾಗಿ ಆಗಲೇ ನೆರವೇರಿಸಿದ್ದಾನೆ) ಮಾತ್ರವಲ್ಲದೆ, ಎಲ್ಲಾ ಮನುಷ್ಯರೂ ಪತನಹೊಂದಿದ ಕಾಲದಿಂದಲೂ ಸೈತಾನನು ಅವರನ್ನು ಬಂಧಿಸಿರುವ ಅಜ್ಞಾನ ಮತ್ತು ಕುರುಡುತನದಿಂದಲೂ ಸುಸ್ಥಿತಿಗೆ ಬರಬೇಕೆಂದು ಇಚ್ಛಿಸುತ್ತಾನೆ. ಯಾಕೆಂದರೆ – "ಇವರಲ್ಲಿ ದೇವರ

ಪ್ರತಿರೂಪವಾಗಿರುವ ಕ್ರಿಸ್ತನ ಪ್ರಭಾವವನ್ನು ತೋರಿಸುವ ಸುವಾರ್ತೆಯ ಪ್ರಕಾಶವು ಉದಯವಾಗಬಾರದೆಂದು ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸನ್ನು ಮಂಕುಮಾಡಿದನು" (2 ಕೊರಿಂಥ 4:4). ಆದಾಮನ ಪಾಪ ಮತ್ತು ಶಾಪವನ್ನು ಅನುಸರಿಸಿ ಮಾನವರನ್ನು ಸುತ್ತುಕೊಂಡಿರುವ ಎಲ್ಲಾ ಕೇಡಿನ ಸಾಲಿನಿಂದ ಪ್ರತಿಯೊಬ್ಬರೂ ಸತ್ಯದ ಜ್ಞಾನಕ್ಕೆ ಬರಬೇಕೆಂದು ದೇವರು ಇಚ್ಛಿಸುತ್ತಾನೆ. ಇದನ್ನು ಅವನು ಯಾತಕ್ಕಾಗಿ ಇಚ್ಛಿಸುತ್ತಾನೆ? ಸತ್ಯದ ಸ್ಪಷ್ಟವಾದ ಜ್ಞಾನವನ್ನು ಹೊಂದುಕೊಳ್ಳುವುದರ ಮೂಲಕ ಅವರು ವಿಮೋಚಕನ ಈಡುಬಲಿಯ ಮೂಲಕ ಪಡಕೊಂಡಿರುವ ಜೀವನದ ನೂತನ ಪರೀಕ್ಷೆಗಳ ಉತ್ತಮ ಉಪಯೋಗವನ್ನು ಮಾಡಿಕೊಳ್ಳಬಹುದೆಂಬ ಉದ್ಧೇಶದಿಂದ ಆತನು ಇವುಗಳನ್ನು ಅಪೇಕ್ಷಿಸುತ್ತಾನೆ. ದೇವರ ಚಿತ್ತವನ್ನು ನೆರವೇರಿಸುವ ಸಲುವಾಗಿ ವಿಮೋಚಕನು ಮಿಲಿಯಾಂತರ ಯುಗದ ತನ್ನ ರಾಜ್ಯವನ್ನು ಅನಾವರಣಗೊಳಿಸು ವವನಾಗಿದ್ದಾನೆ ಮತ್ತು ಇದು ಮೊದಲಿಗೆ ಸೈತಾನನ್ನು ಬಂಧಿಸುತ್ತದೆ, ಹೊರಗಿನಿಂದ ಬರುವ ಎಲ್ಲರನ್ನೂ ಕೇಡಿನ ಪ್ರಭಾವವನ್ನು ನಿಯಂತ್ರಿಸುತ್ತದೆ ಮತ್ತು ಮಾನವನನ್ನು ಆತನ ಕುರುಡುತನದಿಂದ ಬಿಡುಗಡೆಗೊಳಿಸುತ್ತದೆ. ಯಾಕೆಂದರೆ – "ಆಗ ಕುರುಡರ ಕಣ್ಣು ಕಾಣುವುದು, ಕಿವುಡರ ಕಿವಿ ಕೇಳುವದು, ಕುಂಟನು ಜಿಂಕೆಯಂತೆ ಹಾರುವನು, ಮೂಕನ ನಾಲಿಗೆಯು ಹರ್ಷ ಧ್ವನಿಗೈಯುವುದು" (ಯೆಶಾಯ 35:5–6) ಎಂದು ಬರೆದಿದೆ. ಅದೇ ಕಾರಣವಾಗಿ, ನೂತನ ಪರೀಕ್ಷೆಯು ಮಾನವರಿಗೆ ಹೆಚ್ಚು ಅನುಕೂಲಕರವಾಗುವುದು, ಅದರ ಕಾರ್ಯಗಳು ಕ್ರಮೇಣವಾಗಿ ನಡೆಯಲು ಸಹಸ್ರವರ್ಷ ಕಾಲ ಬೇಕಾಗುವುದೆಂಬುದು ದೇವರ ಚಿತ್ತವೇ ಆಗಿದೆ.

## ನ್ಯಾಯವು ಈಡುಬಲಿಯ ದೆಸೆಯಿಂದ ನಿರ್ಬಂಧಕ್ಕೊಳಪಡುವುದಿಲ್ಲ

## Justice not obligated by the Ransom

ದೇವರು ಈಗ ತನ್ನ ಸ್ವಂತ ನ್ಯಾಯದ ದೆಸೆಯಿಂದ ಎಲ್ಲ ಮನುಷ್ಯರನ್ನೂ ಪುನಃವಶಗೊಳಿಸಲು ಬದ್ಧನಾಗಿದ್ದಾನೆ ಎಂಬ ಹಕ್ಕಿನ ಹೇಳಿಕೆಯು ಮತ್ತೊಂದು ತಪ್ಪಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ, ದೇವರು ಯಾವುದೇ ನಿರ್ಬಂಧತೆಯನ್ನೂ ವಹಿಸಿಕೊಂಡಿರುವುದಿಲ್ಲ. ಆತನು ಜನಾಂಗವನ್ನು ಕರ್ತನಾದ ಯೇಸುವಿಗೆ ಮಾರಿ ಬಿಟ್ಟಿದ್ದಾನೆ. ನಾವು ಮೇಲೆ ನೋಡಿದಂತೆ "ಕ್ರಿಸ್ತನು ನಮ್ಮನ್ನು ತನ್ನ ಅಮೂಲ್ಯವಾದ ರಕ್ತದ ಬೆಲೆಯಿಂದ ಕೊಂಡು ಕೊಂಡಿದ್ದಾನೆ." ಪರಲೋಕದ ತಂದೆಯು ಜನಾಂಗದವರ ಯಾವುದೇ ಜವಾಬ್ಧಾರಿಗಳನ್ನು ವಹಿಸಿಕೊಳ್ಳುವುದಿಲ್ಲ; ಆತನು ಜನಾಂಗದವರೊಡನೆ ವ್ಯವಹರಿಸುವುದಿಲ್ಲ; ಅವರು ನಿತ್ಯಜೀವಕ್ಕೆ ಅರ್ಹರೋ ಅಲ್ಲವೋ ಎಂದು ಅರಿತುಕೊಳ್ಳುವಂತೆ ಅವರ ನ್ಯಾಯತೀರ್ವಿಕೆಯನ್ನು ತಾನು ನಡೆಸುತ್ತೇನೆಂಬ ಪ್ರಸ್ತಾಪವನ್ನೂ ಮಾಡುವುದಿಲ್ಲ; ಅದಕ್ಕೆ ವ್ಯತಿರಿಕ್ತವಾಗಿ, ಆತನು ಎಲ್ಲಾ ಸಂಗತಿಗಳನ್ನೂ ಜನಾಂಗವನ್ನು ಕೊಂಡುಕೊಂಡ ತನ್ನ ಮಗನಿಗೆ ಒಪ್ಪಿಸಿಕೊಟ್ಟಿದ್ದಾನೆ ಎಂಬ ಭರವಸೆಯು ನಮಗೆ ದೊರೆಯುತ್ತದೆ. ಆ ಮಗನೇ ಅದರ ಒಡೆಯನೂ, ನ್ಯಾಯಾಧಿಪತಿಯೂ, ಪ್ರವಾದಿಯೂ, ಯಾಜಕನೂ ಹಾಗೂ ಅರಸನೂ ಆಗಿದ್ದಾನೆ. ಆತನು ತನ್ನ ತಂದೆಯ ಯೋಜನೆಯೊಡನೆ ಸಾಮರಸ್ಯದಿಂದಿದ್ದು, ಈ ಸುವಾರ್ತಾಯುಗದ ಆಯ್ಕೆಗೊಂಡ ಸಭೆಯನ್ನು ಈ ಲೋಕದ ಜ್ಞಾನೋದಯದ ಮಹಾ ಕಾರ್ಯಕ್ಕಾಗಿ ಮತ್ತು ವಿಧೇಯರ ಪುನಃಸಂಧಾನಕ್ಕಾಗಿ ತನ್ನೊಡನೆ ಗುರುತಿಸಿ ಕೊಳ್ಳುವ ವ್ಯವಸ್ಥೆ ಮಾಡುವವನಾಗಿದ್ದಾನೆ.

ಪರಲೋಕದ ತಂದೆಯು ಸಮಗ್ರ ಜನಾಂಗದವರನ್ನು ತನ್ನ ಮಗನಿಗೆ ಹೊಂದಿಸಿಬಿಟ್ಟಿದ್ದಾನೆ ಎಂಬ ಸತ್ಯವು ಅವರ ಬಗ್ಗೆ ಆತನಿಗೆ ನಿರಾಸಕ್ತಿ ಎಂಬ ಅರ್ಥನೀಡುವುದಿಲ್ಲ. ಆದರೆ ತನ್ನ ನಿಯಮದ ಅವಶ್ಯಕತೆಗಳಿಗೆ ತಕ್ಕಂಥಃ ವ್ಯವಸ್ಥೆ ಇದಾಗಿದೆ. ದೇವರ ನಿಯಮಗಳು ದೃಢಸಂಕಲ್ಪ ದವುಗಳಾಗಿವೆ. ಯಾವುದೇ ಮಟ್ಟದ ಅಸಂಪೂರ್ಣತೆಗೆ ಅಥವಾ ಪಾಪಕ್ಕೆ ಅನುಮತಿಸುವುದಿಲ್ಲ; ಯಾಕೆಂದರೆ, ಆ ನಿಯಮಗಳು ಸಮರ್ಪಕರುಗಳಿಗಾಗಿಯೇ ವ್ಯವಸ್ಥೆಗೊಳಿಸಲಾಗಿವೆ; ಯಾಕೆಂದರೆ, ನಮ್ಮ ಪರಲೋಕದ ತಂದೆಯು ಅಸಂಪೂರ್ಣವಾಗಿ ಯಾವುದನ್ನೂ ಸೃಷ್ಟಿಸಿರುವುದಿಲ್ಲ. ಅಸಮರ್ಪಕತೆ ಮತ್ತು ಪಾಪವು ಯಾವುದೇ ಆಗಲಿ ಆತನ ಸೃಷ್ಟಿ ಕಾರ್ಯಾಚರಣೆಯ ನಂತರದಲ್ಲಿನ ನೀತಿಭ್ರಷ್ಟತೆಯ ಕಾರಣದಿಂದುಂಟಾದವುಗಳು. ಆತನು ಮಾನವನ ಪಾಪವನ್ನು ಒಪ್ಪಿಕೊಳ್ಳುವುದಾದಲ್ಲಿ ಮತ್ತು ಅಸಮರ್ಪಕ ವ್ಯಕ್ತಿಯೊಡನೆ ನೇರವಾಗಿ ವ್ಯವಹರಿಸುವುದಾದರೆ, ಅದರ ಅರ್ಥ (1) ಎಲ್ಲರೂ ತ್ವರಿತವಾಗಿ ಅಸಮರ್ಪಕರು ಮತ್ತು ಅನರ್ಹರು ಎಂದು ನಿರ್ಣಯಿಸಲ್ಪಡುತ್ತಾರೆ ಅಥವಾ (2) ದೇವರು ಲಕ್ಷಿಸದೆ ಹೋಗುತ್ತಾನೆ ಮತ್ತು ನಮ್ಮ ಅಸಮರ್ಪಕತೆಗಳನ್ನು ಖಂಡಿಸುವಲ್ಲಿ ಅಥವಾ ಮನ್ನಿಸುವಲ್ಲಿ ವಿಫಲನಾಗಿದ್ದಾನೆ ಮತ್ತು ಇವುಗಳು ಆತನ ಸಾಮ್ರಾಜ್ಯದ ನಿಯಮಗಳ ಉಲ್ಲಂಘನೆಯಾಗುತ್ತದೆ. ಆದುದರಿಂದ, ಮಾನವ ಒಳಿತಿಗಾಗಿ ಮತ್ತು ಆತನ ಸ್ವಂತ ನಿಯಮಗಳನ್ನು ಉಲ್ಲಂಘಿಸದಂತೆ ಕಾಪಾಡಿಕೊಳ್ಳಲು ತಂದೆಯು ತನ್ನ ಸಮಗ್ರ ಜನಾಂಗದವರನ್ನು ಅದರ ವಿಮೋಚಕನಾದ ಯೇಸುವಿನ ವಶಕ್ಕೆ ಒಪ್ಪಿಸಿಕೊಟ್ಟಿದ್ದಾನೆ. ಯೇಸು ಈ ಜನಾಂಗದ ಸಮರ್ಪಕರಾಗ ಬಯಸುವ ಅಸಮರ್ಪಕ ರೊಂದಿಗೆ ಅವರನ್ನು ಹಂತ ಹಂತವಾಗಿ ಮಿಲಿಯಾಂತರ ಯುಗದ ಅಂತ್ಯದ ವೇಳೆಗೆ ಸಮರ್ಪಕತೆಗೆ ತರುವವರೆಗೆ

ಅವರೊಡನೆ (ನ್ಯಾಯಕ್ಕೆ ತಕ್ಕಂತೆ ವರ್ತಿಸದೆ) ಕರುಣೆಯಿಂದ ವರ್ತಿಸುತ್ತಾನೆ – ಆಗ ಮಹಾ ಪ್ರವಾದಿಗೆ ವಿಧೇಯರಾದವರು ಆತನ ಮಧ್ಯಸ್ಥಿಕೆ ಕೈಗಳಿಂದ ತಂದೆಯ ಕೈಗಳಿಗೆ ವರ್ಗಾಯಿಸುವಂತೆ ಸಿದ್ಧರಾಗುತ್ತಾರೆ. ಕ್ರಿಸ್ತನ ಮೂಲಕ ಹೊಂದಿಕೊಂಡ ಸಮರ್ಪಕತೆಯು ದೈವಿಕ ಮಟ್ಟದಲ್ಲಿ ಅಂಗೀಕೃತವಾಗುತ್ತದೆ; ಉಳಿದವರೆಲ್ಲರೂ ಎರಡನೆಯ ಮರಣದ ಮೂಲಕ ತೆಗೆದುಹಾಕಲ್ಪಡುವರು – "ಆ ಪ್ರವಾದಿಯು ಮಾತನ್ನು ಕೇಳದಿರುವ ಪ್ರತಿಯೊಬ್ಬನೂ ನಮ್ಮ ಜನರೊಳಗಿಂದ ಸಂಪೂರ್ಣವಾಗಿ ನಾಶವಾಗುವನು" (ಅ.ಕೃ. 3:23). ಹಿಂದಿನ ಪಾಪಗಳು ತೊಡೆದುಹಾಕಲ್ಪಟ್ಟರೂ ನಮ್ಮ ಪ್ರಸ್ತುತ ಅಪರಿಪೂರ್ಣತೆಗಳು ಶೋಧನೆಯ ಕಾಲದಲ್ಲಿ ಹೊಸದಾದ ಮರಣದಂಡನೆಯನ್ನು ತಂದೆಯ ಪರಿಪೂರ್ಣ ನ್ಯಾಯಾಲಯದಲ್ಲಿ ತರಬಹುದಾಗಿದೆ. ಹಾಗಾಗಿ ನಾವು ಕ್ರಿಸ್ತನಲ್ಲಿ ದೊರೆತ ನಮ್ಮ ಅವಕಾಶಗಳನ್ನು ತುಚ್ಛವೆಂದೆಣಿಸಬಾರದೆಂದು ಅಪೋಸ್ತಲನು ಎಚ್ಚರಿಸುತ್ತಾ "ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿ ಬೀಳುವುದು ಭಯಂಕರವಾದದ್ದು" (ಇಬ್ರಿಯ 10:31) ಎಂದಿದ್ದಾನೆ. ಪಾಪಗಳಿಗಾಗಿರುವ ದೈವಿಕ ವ್ಯವಸ್ಥೆಗೆ ಕ್ರಿಸ್ತನ ಮೂಲಕ ಮತ್ತು ಆತನ ಈಡುಬಲಿಯ ಮತ್ತು ಪುನಃ ಸಂಧಾನದ ಕಾರ್ಯದ ಹೊರತಾಗಿ ಕರುಣೆ ಎಂಬುದು ಇರದು; ಈ ನಿಬಂಧನೆಯ ಹೊರಗೆ ದೇವರ ನಿಯಮವು ಕಠಿಣವಾದ ನ್ಯಾಯವುಳ್ಳದ್ದು, ಯಾವುದೇ ರಿಯಾಯಿತಿ ಇರುವುದಿಲ್ಲ, ದೋಷವುಳ್ಳವುಗಳನ್ನು ಬೆಂಕಿಯಂತೆ ದಹಿಸಿ ಬಿಡುವಂಥಾದ್ದು.

ದೇವರು ಪಾಪಿಗಳೊಡನೆ ವ್ಯವಹರಿಸುವುದಾದರೆ ಮತ್ತು ಅವರ ಪಾಪಗಳನ್ನು ಕ್ಷಮಿಸಿಬಿಡುವುದಾದರೆ. ಅವರ ಉತ್ತಮ ಪ್ರಯತ್ನಗಳನ್ನು ಅವು ಎಷ್ಟೇ ಅಸಮರ್ಪಕಗಳಾದರೂ ಅವುಗಳನ್ನು ಮೆಚ್ಚಿಕೊಳ್ಳು ವುದಾದರೆ, ಒಬ್ಬ ವಿಮೋಚಕನ ಅಥವಾ ಆತನ ರಕ್ತದ ಮೂಲಕ ನೂತನ ಒಡಂಬಡಿಕೆಯ ಅಗತ್ಯವೇ ಇದ್ದಿಲ್ಲ ಎಂಬುದನ್ನು ಯಾರು ತಾನೇ ಕಂಡುಕೊಳ್ಳುವುದಿಲ್ಲ? ಇದಕ್ಕೂ ಹೆಚ್ಚಾಗಿ, ಪವಿತ್ರ ದೂತರುಗಳಲ್ಲಿ ಪ್ರತಿಯೊಬ್ಬರೂ ಅವರು ಏಕತೆಯಿಂದ ಹೀಗೆ ನಿರ್ಧರಿಸಿದರೆ – ದೇವರು ಮಾನವ ಕುಟುಂಬದವರಲ್ಲಿ ಒಂದು ಪಾಪವನ್ನು ಕ್ಷಮಿಸಿದ್ದಾನೆ; ಆತನು ನಮ್ಮ ಬಗ್ಗೆ ಇದಕ್ಕೂ ಕಡಿಮೆ ಕೃಪೆ ತೋರಿಸುವವನಲ್ಲ, ಆದುದರಿಂದ ನಾವೂ ಹಾಗೆ ಮಾಡಲು ಇಚ್ಛಿಸಿದಲ್ಲಿ, ನಮಗೂ ಸಹಾ ಒಂದು ಪಾಪವನ್ನು ಮಾಡುವ ಸ್ವಾತಂತ್ರ್ಯವಿದೆ ಮತ್ತು ನಾವು ಸಹಾ ದೇವರ ಕರುಣೆಯುಳ್ಳ ಕ್ಷಮಾಪಣೆಯ ಮೇಲೆ ಆತುಕೊಳ್ಳಬಹುದು ಮತ್ತು ದೇವರು ನಮ್ಮನ್ನು ಆತನ ಸಾಂಗತ್ಯದಿಂದ ಹೊರಗೆ ಹಾಕಲಿಕ್ಕಿಲ್ಲ ಎಂದು ಹೇಳಿಯಾರು. ಈ ರೀತಿಯಲ್ಲಿ ನಿತ್ಯತೆಗಳಲ್ಲಿ, ಈಗಾಗಲೇ ಅದರಲ್ಲಿ ಕೈಹಾಕುವವರೂ ಸಹಾ ಪಾಪಕ್ಕೊಳಗಾಗುವ ಗಂಡಾಂತರವಿರುತ್ತದೆ. ಈ ರೀತಿಯಲ್ಲಿ ದೇವರ ಕೃಪೆಯು ಮೇಲೆ ಆತುಕೊಂಡು ಸಾಹಸಮಾಡುವವರು, ದೇವರ ನ್ಯಾಯವನ್ನು, ದೇವರ ನಿಯಮಗಳನ್ನು ಒಂದು ಪಾಪದ ಕ್ಷಮಾಪಣೆಗಾಗಿ ತಳ್ಳಿಹಾಕುವವರು ಮತ್ತು ಕ್ಷಮಾಪಣೆಹೊಂದುವವರು 'ದೇವದೂತರಲ್ಲಿ ಪ್ರತಿಯೊಬ್ಬರೂ ಏಕೆ ಪಾಪದ ಪರೀಕ್ಷೆಯನ್ನು ಹೊಂದಿಕೊಂಡು ದೇವರ ಕ್ಷಮಾಪಣೆಯ ಅನುಭವವನ್ನು ಪಡಕೊಳ್ಳಬಾರದು' ಎಂಬ ಮತ್ತೊಂದು ವಾದವನ್ನು ಹುಟ್ಟಿಹಾಕುವರು. ಇದನ್ನು ನೋಡಿ, ದೇವರು ತನ್ನ ಎಲ್ಲಾ ಪವಿತ್ರ ಸೃಷ್ಟಿಗಳ ಹಿತಕ್ಕಾಗಿ, ಮತ್ತು ತನ್ನ ಸ್ವಂತ ಸಂತೋಷಕ್ಕಾಗಿ ತಾನು ಯಾವುದೇ ಸೃಷ್ಟಿಯಲ್ಲಿ ಸಮರ್ಪಕತೆಗಿಂದ ಸ್ವಲ್ಪ ಕಡಿಮೆಯಾದ ಯಾವುದನ್ನೂ ಮಾನ್ಯಮಾಡುವುದಿಲ್ಲ ಎಂದು ನಿರ್ಧರಿಸಿದ್ದಾನೆ ಎಂಬುದಕ್ಕೆ ನಮಗೆ ಆಶ್ಚರ್ಯವಾಗುವುದಿಲ್ಲ ಮತ್ತು ನ್ಯಾಯವನ್ನೇ ತನ್ನ ಸಿಂಹಾಸನದ ಬುನಾದಿಯನ್ನಾಗಿ ಮಾಡಿಕೊಂಡಿದ್ದಾನೆ. – "ನೀತಿನ್ಯಾಯಗಳು ನಿನ್ನ ಸಿಂಹಾಸನದ ಅಸ್ತಿವಾರವು" – ಕೀರ್ತನೆ 89:14.

## "ನಾವು ರಕ್ಷಣೆಯನ್ನು ಬೇರೆ ಯಾವ ಹೆಸರಿಂದಲಾದರೂ ಹೊಂದಿಕೊಳ್ಳಲಾರೆವು"

## "No other Name - Whereby we must be saved"

ಈ ದೃಷ್ಟಿಕೋನದಿಂದ, ಪತನಗೊಂಡ ಜನಾಂಗದವರ ಬಗ್ಗೆ ಇರುವ ಎಲ್ಲಾ ದೈವಿಕ ಕೃಪೆಗಳು ಕ್ರಿಸ್ತ ಯೇಸುವಿನಲ್ಲಿ ಮತ್ತು ಆತನ ಮೂಲಕ ಮಾತ್ರವೇ ವಿಸ್ತರಿಸಲ್ಪಟ್ಟಿವೆ ಎಂಬುದನ್ನು ನಾವು ಈ ಹಿಂದೆಂದಿಗಿಂತ ಈಗ ಹೆಚ್ಚು ಸ್ಪಷ್ಟವಾಗಿ ಕಾಣುತ್ತೇವೆ – ಪರಲೋಕದ ತಂದೆಯು ಯಾವ ಕೃಪೆಯನ್ನೂ ವೈಯುಕ್ತಿಕವಾಗಿ ಅಥವಾ ಮಗನನ್ನು ಹೊರತುಪಡಿಸಿ ಸ್ವಾತಂತ್ರ್ಯವಾಗಿ ವಿಸ್ತರಿಸುವುದಿಲ್ಲ, – "ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವುದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವುದಿಲ್ಲ" (ಅ.ಕೃ 4:12). ರಕ್ಷಕನ ಕಾರ್ಯವು ಕೇವಲ ಜನಾಂಗವನ್ನು ಕೊಂಡುಕೊಳ್ಳುವುದರಿಂದ ಮಾತ್ರ ಪೂರ್ಣಗೊಳ್ಳುವುದಿಲ್ಲ, ಆದರೆ ಅವರನ್ನು ಕೊಂಡುಕೊಂಡ ಮೇಲೆ ಆತನು ಅವರನ್ನು ಪಾಪವೆಂಬ ರೋಗದಿಂದ ಗುಣಪಡಿಸುವ ಸಲುವಾಗಿ ಮತ್ತು ಅವರನ್ನು ಪುನಃ ಜೀವಿತಕ್ಕೆ ಪುನಃವಶಪಡಿಸಲು ಮತ್ತು ಅವರ ಎಲ್ಲಾ ಸ್ವಭಾವಗಳನ್ನು ಸಮರ್ಪಕಗೊಳಿಸಲು ಮಹಾ ವೈದ್ಯನಾಗುವ ಅಗತ್ಯವಿದೆ. ಈ ರೀತಿಯಲ್ಲಿ, ಅಂತ್ಯತಃ ಸಹಸ್ರ ವರ್ಷದ ಆತನ ಆಳ್ವಿಕೆಯಲ್ಲಿ ಈ ಪುನಃಸಂಧಾನದ ಪ್ರಕ್ರಿಯೆಯ ಮೂಲಕ, ಯುಗಾಂತರದ ಅಂತ್ಯದ ವೇಳೆಗೆ ವಿಧೇಯರೆಲ್ಲರನ್ನು ನಿರಪೇಕ್ಷವಾದ ಸಮರ್ಪಕರನ್ನಾಗಿ ತನ್ನ

ತಂದೆಗೆ ಒಪ್ಪಿಸಿಕೊಡುವಂತೆ ಅವರನ್ನು ಸಿದ್ಧಪಡಿಸ ಬೇಕಾಗಿದೆ.

ಹಾಗಾದರೆ, ರಕ್ಷಿಸುವ ಎಲ್ಲಾ ಆಧಿಕಾರವನ್ನು ತನ್ನ ಕೈಯಲ್ಲಿ ಹೊಂದಿಕೊಂಡಿರುವ ಆ ಮಧ್ಯಸ್ಥಗಾರನೆಡೆಗೆ ನೋಡುವವರಾಗಿ ಆತನು ತಾನು ವಿಮೋಚಿಸಿದವರೆಲ್ಲರೂ ನಿತ್ಯವಾದ ರಕ್ಷಣೆ ಹೊಂದಿಕೊಳ್ಳಬೇಕೆಂದು ಸೂಚಿಸುತ್ತಾನೋ ಇಲ್ಲವೋ ಮತ್ತು ಈ ಪ್ರಸ್ತಾಪದ ಬಗ್ಗೆ ಆತನು ಯಾವುದೇ ಮಿತಿಯನ್ನು ಇಟ್ಟಿದ್ದಾನೋ ಇಲ್ಲವೋ ಎಂಬುದನ್ನು ನಾವು ವಿಚಾರಿಸಬೇಕಾಗುತ್ತದೆ. ವೇದಗ್ರಂಥಗಳು ಸ್ಪಷ್ಟವಾಗಿ ಇತಿ–ಮಿತಿಗಳುಂಟೆಂದು ಹೇಳುತ್ತವೆಂದು ನಾವು ಕಂಡುಕೊಳ್ಳುತ್ತೇವೆ; ಉದಾಹರಣೆಗೆ, ಆದಾಮನ ಶಾಪವನ್ನು ಬದಿಗೊತ್ತಲು ಮಿಲಿಯಾಂತರ ಯುಗವನ್ನು ಒಂದು ಸಮಯವನ್ನಾಗಿ ವಿವರಿಸುವಾಗ, ಮತ್ತು ಇನ್ನು ಮುಂದೆ ಇದು ಮಾನವರ ಮೇಲೆ ಕಾರ್ಯಾಚರಣೆಯಲ್ಲಿ ಇಲ್ಲದಿರುವಾಗ ಮತ್ತು "ತಂದೆಗಳು ಹುಳಿ ದ್ರಾಕ್ಷೆಯನ್ನು ತಿಂದರು, ಮಕ್ಕಳ ಹಲ್ಲುಗಳು ಜೆಳಿತುಹೋಗಿವೆ. ಸಾಯತಕ್ಕವನು ತನ್ನ ದೋಷದಿಂದ ಸಾಯುವನು. ಹುಳಿ ದ್ರಾಕ್ಷೆಯನ್ನು ತಿನ್ನುವವನ ಹಲ್ಲುಗಳೇ ಜೆಳಿತುಹೋಗಿವೆ " (ಯೆರೆಮೀಯ 31:29,30) ಎಂಬ ಲೋಕೋಕ್ತಿ ಇನ್ನು ಮುಂದೆ ಇರದು. ಅದು ಪ್ರಕಟಪಡಿಸುವುದೇನೆಂದರೆ ಪ್ರತೀ ಮನುಷ್ಯನು ತನ್ನ ಪಾಪದ ಸಲುವಾಗಿ ಸಾಯುವನೇ ಹೊರತು ಮತ್ತೊಬ್ಬನ ಪಾಪಕ್ಕಾಗಿ ಅಲ್ಲ. ಕರ್ತನು ಜನಾಂಗಗಳ ಅರಸನಾಗಿರುವಾಗ 'ಕೆಡುಕರು ತೆಗೆದುಹಾಕಲ್ಪಡುವರು" (ಕೀರ್ತಣೇ 37:9) ಎಂಬ ಹೇಳಿಕೆಯನ್ನೂ ನಾವು ನೋಡುತ್ತೇವೆ. ಅಪೋಸ್ತಲನಾದ ಪೇತ್ರನು 'ಪುನಃವಶದ ಈ ಕಾಲಗಳ ಬಗ್ಗೆ 'ಮಿಲಿಯಾಂತರ ಯುಗದ ಬಗ್ಗೆ ಘೋಷಿಸಿ ನಂತರ "ಆ ಪ್ರವಾದಿಯ (ಮಹಿಮೆ ಹೊಂದಿರುವ ಕ್ರಿಸ್ತನ – ಶಿರಸ್ಸು ಮತ್ತು ಶರೀರ) ಮಾತನ್ನು ಕೇಳದಿರುವ ಪ್ರತಿಯೊಬ್ಬನು ನಮ್ಮ ಜನರೊಳಗಿಂದ ಸಂಪೂರ್ಣವಾಗಿ ನಾಶವಾಗುವನು" – ಎರಡನೆಯ ಮರಣ (ಅ.ಕೃ. 3:19–23) ಎಂದು ಪ್ರಕಟಿಸಿದ್ದಾನೆ. ಇದೇ ವಿಷಯವನ್ನು ಉಲ್ಲೇಖಿಸುವನಾಗಿ ಅಪೋಸ್ತಲ ಪೌಲನು ಮತ್ತೊಂದು ಹೇಳಿಕೆ ನೀಡಿ "ಮೋಶೆಯ ವಿಧಿಗಳನ್ನು ಅಸಡ್ಡೆ ಮಾಡಿದವನಿಗೆ .... ಕನಿಕರವಿಲ್ಲದೆ ಮರಣದಂಡನೆಯಾಗುವುದಾದರೆ, ಯಾವನು ದೇವಕುಮಾರನನ್ನು ತುಳಿದು .... ದೇವರ ಕೃಪಾವರವಾಗಿರುವ ಆತ್ಮನನ್ನು ತಿರಸ್ಕಾರಮಾಡಿದ್ದಾನೋ ಅವನು ಇನ್ನೂ ಎಷ್ಟೋ ಕ್ರೂರವಾದ (ಕಠೋರವಾದ) ದಂಡನೆಗೆಪಾತ್ರನಾಗಬೇಕೆಂದು ಯೋಚಿಸಿರಿ ..... ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿ ಬೀಳುವುದು ಭಯಂಕರವಾದದ್ದು" (ಇಬ್ರಿಯ 10:28–31) ಎಂದಿದ್ದಾನೆ. ಯಾಕೆಂದರೆ "ಸತ್ಯದ ಪರಿಜ್ಞಾನವನ್ನು (ಕ್ರಿಸ್ತನಲ್ಲಿ ಈ ಕೃಪಾಜ್ಞಾನಕ್ಕೆ, ಈ ಜ್ಞಾನಕ್ಕೆ ನಾವು ಎಂದಾದರೂ ಬರಬೇಕೆಂದು ದೇವರು ಬಯಸುತ್ತಾನೆ) ನಾವು ಹೊಂದಿದ ಮೇಲೆ ಪಾಪ ಪರಿಹಾರಕ್ಕಾಗಿ ಇನ್ನ್ಯಾವ ಯಜ್ಞವೂ ಇರುವುದಿಲ್ಲ (ಅದಾಮನ ಪಾಪದ ಪ್ರಾಯಶ್ಚಿತ್ತ ಯಜ್ಞವು ಬೆಳಕಿನ ಮತ್ತು ಜ್ಞಾನದ ವಿರುದ್ಧವಾದ ಪಾಪವನ್ನು ಮುಚ್ಚುವುದಿಲ್ಲ); ಅತ್ಯಂತ ಭಯದಿಂದ ಎದುರುನೋಡತಕ್ಕ ನ್ಯಾಯತೀರ್ಪೂ, ದೇವರ ವಿರೋಧಿಗಳನ್ನು ದಹಿಸುವ ತೀಕ್ಷವಾದ ಅಗ್ನಿಯೂ ಇವೇ ನಮ್ಮ ಮುಂದೆ ಇರುವುವು" (ಇಬ್ರಿಯ 10:26–31).

ಇಲ್ಲಿ ನಮಗೆ ಮೋಶೆಯ ಪ್ರತಿಸಂಕೇತಕನಾದ ಮಹಿಮೆಯುಳ್ಳ ಕ್ರಿಸ್ತನ ವಿರೋಧಿಗಳನ್ನು ಮೋಶೆಯನ್ನು ವಿರೋಧಿಸಿದವರನ್ನು ನಾಶಗೊಳಿಸಿದಕ್ಕಿಂತ ಇನ್ನೂ ಭೀಕರವಾದ ರೀತಿಯಲ್ಲಿ ನಾಶಗೊಳಿಸಲಾಗುವುದು ಎಂಬುದನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ಆದರೆ ಮೊಶೆಯನ್ನು ವಿರೋಧಿಸಿದವರನ್ನು ಮರಣದಿಂದ ನಾಶಪಡಿಸಿರುವುದಾದರೆ ಕ್ರಿಸ್ತನನ್ನು ವಿರೋಧಿಸಿದವರನ್ನು ಇದಕ್ಕೂ ಭೀಕರವಾಗಿ ನಾಶಪಡಿಸುವುದಾದರೂ ಹೇಗೆ? ಇದಕ್ಕೆ ನಾವು ಉತ್ತರಿಸುವುದೇನೆಂದರೆ, ಮೋಶೆಯಿಂದ ವಿಧಿಸಲ್ಪಟ್ಟ ಮರಣ ಶಿಕ್ಷೆಯು ಕೇವಲ ಆದಾಮನಲ್ಲಿದ್ದಂತಹ ಶೇಷಜನರ ಉಳಿದ ಜೀವಿತವನ್ನು ಕಡಿಮೆ ಮಾಡುವಲ್ಲಿ ಮಾತ್ರವೇ ಪರಿಣಾಮವನ್ನುಂಟುಮಾಡುವುದಾಗಿತ್ತೇ ಹೊರತು ದೇವರು ವಿಮೋಚಿಸಲು ಸಂಕಲ್ಪಿಸಿದವರ ಮತ್ತು ಕ್ರಿಸ್ತನ ಈಡುಬಲಿಯ ಮೂಲಕ ವಿಮೋಚನೆಗೊಂಡವರ ನಿಜವಾದ ವ್ಯಕ್ತಿಗಳ ಅಥವಾ ಆತ್ಮಗಳ ಮೇಲೆ ಯಾವುದೇ ಪರಿಣಾಮವನ್ನುಂಟುಮಾಡಲಿಲ್ಲ. ಹೇಗೂ ತನ್ನ ವಿಮೋಚನೆಯ ಬಗ್ಗೆ ತಿಳಿದ ಮೇಲೆಯೂ ಮೋಶೆಯ ಪ್ರತಿಸಾಂಕೇತನಾದವನನ್ನು ತಿರಸ್ಕರಿಸುವವರಿಗೆ ಇನ್ನೂ ಘೋರವಾಗಿ ಶಿಕ್ಷಿಸಲಾಗುವುದು. ಇದರಲ್ಲಿ ಆತನು ಶಿಕ್ಷೆಗೊಳಗಾದ ತನ್ನ ಕೆಲವು ವರ್ಷಗಳನ್ನು ಕಳಕೊಳ್ಳುವುದಲ್ಲದೆ, ತನ್ನ ಆತ್ಮನನ್ನೂ, ತನ್ನ ಜೀವವನ್ನೂ, ತನ್ನ ಅಸ್ಥಿತ್ವವನ್ನು ಸಹಾ ಎಂದೆಂದಿಗೂ ಕಳಕೊಳ್ಳುತ್ತಾನೆ ಮತ್ತು ಅದನ್ನು ಪುನಃ ಪಡೆದುಕೊಳ್ಳುವ ನಿರೀಕ್ಷೆ ಇರುವುದಿಲ್ಲ – ಅಂಥವರಿಗೆ ಮತ್ತು ಭೂಮಿಗೆ ಭಾರವಾದಂತಿರುವ ಎಲ್ಲಾ ವಿರೋಧಿಗಳಿಗೆ ಕೂಳೆಯಂತೆ, ಮುಳ್ಳು ಕೊಂಪೆಗಳಂತೆ, ದತ್ತೂರಿ ಗಿಡಗಳಂತೆ ನಾಶನವುಂಟಾಗುವುದು.

ಅದೇ ರೀತಿಯಲ್ಲಿ ನೂತನ ಒಡಂಬಡಿಕೆಯಲ್ಲಿ ಸಾದ್ಯಂತವಾಗಿ ಪಾಪದ ವಿರೋಧವಾದ ದೇವರ ಆಜ್ಞೆಗಳು ಮಧ್ಯಸ್ಥಗಾರನ ಮೂಲಕ ಅಮೂಲಾಗ್ರವಾಗಿ ಜಾರಿಗೊಳಿಸಲಾಗುವುದು, ಮತ್ತು ಇದರ ನಿರಪೇಕ್ಷವಾದ ನಿಯಮದ ಒಂದೇ ವಿಷಯಾಂತರವೆಂದರೆ ಬಲಹೀನರಿಗೆ ಮತ್ತು ತಿಳಿಗೇಡಿ ಜನರಿಗೆ ನೀಡುವ ಕೆಲವೊಂದು ರಿಯಾಯಿತಿಗಳು; ಈ ಬಲಹೀನತೆಗಳನ್ನೂ, ಅಜ್ಞಾನವನ್ನೂ

ಅವರುಗಳು ಪುನಃಸಂಧಾನದ ಪ್ರಕ್ರಿಯೆಯ ಮೂಲಕ ಮಿಲಿಯಾಂತರ ಯುಗದಲ್ಲಿ ಗೆಲ್ಲುವುದರಿಂದ, ನಮ್ಮ ಕರ್ತನಾದ ಯೇಸುವು ಮಿಲಿಯಾಂತರ ಯುಗದ ಅಂತ್ಯದಲ್ಲಿ ಉಳಿದವರನ್ನು ಪರೀಕ್ಷೆಮಾಡುವಾಗ ನ್ಯಾಯದ ನಿಬಂಧನೆಯ ಅಗತ್ಯತೆಗಳು ಹೆಚ್ಚು ಹೆಚ್ಚಾಗಿ ನಿಖರಗೊಳ್ಳುವುವು ಮತ್ತು ಇವು ಖಡಾಖಂಡಿತವಾಗಿ ಪರಲೋಕದ ತಂದೆ ವಿಧಿಸಿದ ನ್ಯಾಯತೀರ್ಪಿಗಿಂತಲೂ ಹೆಚ್ಚು ಕಠೋರವಾಗಿಯೂ ಹೆಚ್ಚು ನಿರ್ಣಾಯಕವಾಗಿಯೂ ಇರುತ್ತದೆ. ಈ ಪರೀಕ್ಷೆಯ ಅಡಿಯಲ್ಲಿ ಪಾಪವನ್ನು ಅಭ್ಯಾಸಮಾಡುವವರಾಗಲೀ ಅಥವಾ ಯಾವುದೇ ರೂಪದಲ್ಲಿ ಅಥವಾ ಮಟ್ಟದಲ್ಲಿ ಪಾಪದೊಂದಿಗೆ ಸಹಾನುಭೂತಿ ಯುಳ್ಳವರಾಗಿರಲಿ ಅವರೆಲ್ಲರೂ ಎರಡನೆಯ ಮರಣಕ್ಕೆ ಒಳಗಾಗುವರು. ಆಗ ಜನಾಂಗದಲ್ಲಿನ ಯೋಗ್ಯರು ಮಾತ್ರವೇ ಪುನಃವಶದ ಪ್ರಕ್ರೀಯೆಯ ಮೂಲಕ ಸಮರ್ಪಕತೆಯನ್ನು ಹೊಂದಿಕೊಳ್ಳುವರು. ನ್ಯಾಯದ ಹಕ್ಕೊತ್ತಾಯವು ನೀತಿವಂತಿಕೆಯನ್ನು ಮಾತುಗಳಲ್ಲಿ, ಕಾರ್ಯದಲ್ಲಿ ಮತ್ತು ಅಲೋಚನೆಯಲ್ಲಿ ಪೂರ್ಣ ಅನುಸರಣೆಯಲ್ಲಿ ನಿರ್ದೇಶಿಸುವವರಿಗೆ ಮಾತ್ರವೇ ದೊರಕುತ್ತದೆ.

ಈ ರೀತಿಯಲ್ಲಿ ದೇವರ ಚಿತ್ತವು ಪರಲೋಕ ದಲ್ಲಿರುವಂತೆಯೇ ಭೂಮಿಯ ಮೇಲೆ ನೆರವೇರುವುದನ್ನು ನಾವು ನೋಡಬಹುದು ಮತ್ತು ಇವುಗಳನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗುತ್ತದೆ : (1) ಎಲ್ಲರೂ ಆದಾಮನ ಶಾಪದಿಂದ ಮುಕ್ತಿ ಹೊಂದಿಕೊಂಡು ಸತ್ಯದ ಜ್ಞಾನಕ್ಕೆ ಬರಬೇಕೆಂಬುದು ದೇವರ ಚಿತ್ತವಾಗಿದೆ (2) ಎಲ್ಲಾ ವಿಧೇಯರಿಗೆ ನಿತ್ಯಜೀವವನ್ನು ಕೊಡಬೇಕೆಂಬುದು ದೇವರ ಚಿತ್ತವಾಗಿದೆ (3) ಅದೇ ರೀತಿಯಲ್ಲಿ "ಎಲ್ಲಾ ಅವಿಧೇಯರೂ ಜನರೊಳಗಿಂದ ನಾಶವಾಗಬೇಕು" ಎಂಬುದು ಸಹಾ ದೇವರ ಚಿತ್ತವಾಗಿದೆ. ದೇವರ ಈ ಚಿತ್ತವು ಭೂಮಿಯ ಮೇಲೆ ನೆರವೇರುವುದು ಮತ್ತು ಯಾರೂ ಸಹಾ ಇದಕ್ಕೆ ಅಡ್ಡಿಮಾಡಲಾಗದು.

ಆದಾಮನ ಅಪರಾಧದಿಂದ ಎಲ್ಲಾ ಮಾನವರೂ ಪುನರ್‌ವಶಪಡಕೊಳ್ಳಬೇಕೆಂಬ ಉದ್ದೇಶದಿಂದ ಈಡು ಬಲಿಯನ್ನು ನೀಡಿರುವುದರಿಂದ, ಮಾನವ ಸ್ವಭಾವದ ಸಂಪೂರ್ಣವಾದ ಸಮರ್ಪಕತೆಯ ತತ್ಕ್ಷಣವಾದ ಪುನರ್‌ವಶವನ್ನು ಮಾನವರ ಲೋಕಕ್ಕೆ ನಿರೀಕ್ಷಿಸ ಬಹುದೆಂದು ಕೆಲವರು ಊಹಿಸುತ್ತಾರೆ. ಅಂಥಾಃ ನಿರೀಕ್ಷೆಯು ವೇದವಚನಗಳದ್ದೂ ಅಲ್ಲ ಮತ್ತು ಇದು ಸಮಂಜಸವೂ ಅಲ್ಲ. ಪುನಃವಶ ಕಾರ್ಯವು ತತ್ಕ್ಷಣವಾದುದೆಂದು ವೇದಗ್ರಂಥದಲ್ಲಿ ಎಲ್ಲಿಯೂ ಹೇಳಿರುವುದಿಲ್ಲ. ಆದರೆ, ಇದಕ್ಕೆ ವ್ಯತಿರಿಕ್ತವಾಗಿ, ಅದು ಕ್ರಮೇಣವಾದುದು. ಪರಿಪೂರ್ಣವಾದ ಸಮರ್ಪಕತೆ ಉಂಟುಮಾಡುವ ತತ್ಕ್ಷಣವಾದ ಪುನರ್‌ವಶದ ಕಡೆಗೆ ವಾಲುವುದಕ್ಕೆ ತಪ್ಪಾದ ಆಲೋಚನೆಗಳೇ ಕಾರಣ. ಅದು ಜನಾಂಗವು ನಿತ್ಯ ಜೀವಕ್ಕೆ ಸಮರ್ಪಕವಾದ ಶೋಧನೆಗೆ ಒಳಗಾಗಲಿಲ್ಲವೆಂದು ಊಹಿಸುತ್ತದೆ. ತಂದೆಯಾದ ಆದಾಮನ ಸಮಾನವಾದ ವಾತಾವರಣದಲ್ಲಿ ಆತನಂತೆ ಸಮರ್ಪಕನನ್ನಾಗಿ ಮಾಡುವುದರ ಹೊರತು ಜನಾಂಗವು ನಿರಂತರವಾದ ಪರೀಕ್ಷೆಯಲ್ಲಿರುವುದು ಸರಿಯಲ್ಲವೆಂದು ಇದು ಊಹಿಸುತ್ತದೆ. ಆದರೆ, ಇದು ತಪ್ಪೆಂದು ನಾವು ನಿರೂಪಿಸುತ್ತೇವೆ – ಅವರು ಅಸಮರ್ಪಕರಾಗಿರುವಾಗ ಇನ್ನೂ ಹೆಚ್ಚಿನ ಅನುಕೂಲಕರ ಪರೀಕ್ಷೆಯನ್ನು ಪಡಕೊಳ್ಳಬಹುದು. ಪತನದ ಮೂಲಕವಾಗಿ ಎಲ್ಲಾ ಮಾನವರಿಗೂ ಸಮಾನವಾದ ಬಲಹೀನತೆಗಳು ಮತ್ತು ಅಸಮರ್ಪಕತೆಗಳು ನಿವಾರಿಸಲಾಗದ ಅಡೆತಡೆಗಳಾಗಿವೆ ಮತ್ತು ಇವುಗಳು ವಿಮೋಚಿತರು ದೇವರ ನ್ಯಾಯ ನಿಬಂಧನೆಗಳಿಗೆ ವಿಧೇಯರಾಗದಂತೆ ಅಡಚಣೆ ಯನ್ನುಂಟುಮಾಡುತ್ತವೆ. ಆದರೆ ದೇವರ ಒದಗಿಸುವಿಕೆಗಳು ಧಾರಾಳವಾಗಿ ಈ ಪ್ರಕರಣದ ಅಗತ್ಯತೆಗಳನ್ನು ಪೂರೈಸುತ್ತವೆ. ನಾವು ಉತ್ತರಿಸುವುದೇನೆಂದರೆ, ಇದಕ್ಕೆ ವ್ಯತಿರಿಕ್ತವಾಗಿ ಮಾನವರನ್ನು ಸಾಮಾನ್ಯವಾಗಿ ತತ್ಕ್ಷಣವಾದ ಪುನರ್‌ವಶದ ಮೂಲಕ ಆದಾಮನು ಅನುಭವಿಸಿದ್ದ ಮಾನವ ಸ್ವಭಾವದ ಸರ್ವಸಂಪೂರ್ಣತೆಗೆ ವಾಪಸ್ಸು ಮಾಡುವುದಾದರೆ, ಅದರ ಅರ್ಥ ಹೀಗಿರುತ್ತದೆ:–

(1) ಸಮರ್ಪಕವಾದ ವ್ಯಕ್ತಿಗಳಾಗಿ ಅವರುಗಳು ದೇವರ ಸಮರ್ಪಕವಾದ ನಿಬಂಧನೆಗಳನ್ನು ಸಮರ್ಪಕ ವಾಗಿಯೇ ಪಾಲಿಸಬೇಕಾಗುತ್ತದೆ. ತಂದೆಯಾದ ಆದಾಮನಿಗೆ ಯಾವುದೇ ವಿನಾಯಿತಿ ಇದ್ದಿರದಂತೆ ಇವರಿಗೂ ಯಾವುದೇ ರೀತಿಯ ವಿನಾಯಿತಿ ಇರುವುದಿಲ್ಲ. ಅಂಥಾಃ ಪರೀಕ್ಷೆಯನ್ನು ಪಾಪದೊಂದಿಗಿನ ಅವರ ಪ್ರಸ್ತುತವಾದ ಅನುಭವದ ಕಾರಣದಿಂದಲೂ ಅವರು ಕಲಿತ ಪಾಠಗಳ ದೆಸೆಯಿಂದಲೂ ಜನಾಂಗದ ಕೆಲವರು ಮಾತ್ರವೇ ಯಶಸ್ವಿಯಾಗಿ ಎದುರಿಸಬಹುದಾದರೂ, ಜನಾಂಗದ ಹೆಚ್ಚಿನವರು ಆದಾಮನಂತೆ ಪಾಪ ಮತ್ತು ಅದರ ದಂಡನೆಯ ಜ್ಞಾನದ ಕೊರತೆಯುಳ್ಳವರಾಗಿದ್ದಾರೆ ಎಂಬುದನ್ನು ನಾವು ನೆನಪುಮಾಡಿಕೊಳ್ಳಬೇಕಾಗುತ್ತದೆ. ಯಾಕೆಂದರೆ ಜನಾಂಗದಲ್ಲಿ ಹೆಚ್ಚಿನವರು ಬಾಲ್ಯಪ್ರಾಯ ದಲ್ಲಿಯೇ ಮರಣವನ್ನು ಅಪ್ಪಿದ್ದಾರೆ ಮತ್ತು ಉಳಿದವರಲ್ಲಿ ಹೆಚ್ಚಿನ ಪ್ರಮಾಣದವರು ತಪ್ಪು ಮತ್ತು ಸರಿಯ ತುಲನಾತ್ಮಕವಾದ ಅಜ್ಞಾನದಲ್ಲಿಯೇ ತೀರಿಹೋಗಿದ್ದಾರೆ.

(2) ಅಂಥಾಃ ಪ್ರಕ್ರಿಯೆಯು ಬಹಳ ಮಟ್ಟಿಗೆ ದೇವರು ಆರು ಸಹಸ್ರ ಕಾಲದವರೆಗೆ ಪಾಪದ ದುಷ್ಕರ್ಮದ ಬಗ್ಗೆ, ಪಾಪದ ಅನಿಷ್ಟತೆಗಳ ಬೋಧಿಸುತ್ತಿದ್ದ ಬೋಧನೆಗಳನ್ನು ಅಪೇಕ್ಷಣೀಯವಲ್ಲವೆಂದು ವ್ಯರ್ಥಗೊಳಿಸುತ್ತದೆ. ಹೆಚ್ಚಿನವರು

ತುಲನಾತ್ಮಕವಾಗಿ ನೀತಿವಂತಿಕೆಯ ಬಗ್ಗೆ ಬಹಳ ಸ್ವಲ್ಪವಾದ ತಿಳುವಳಿಕೆಯನ್ನು ಹೊಂದಿರುತ್ತಾರೆ. ಅವರ ಶಿಕ್ಷಣದ ಕ್ರಮವು ಪ್ರಶ್ನೆಯ ವಿರುದ್ಧದ ಬಗ್ಗೆಯ ಪಾಠಗಳ ಮೂಲಕ ಮಾನವ ಜಾತಿಗೆ ಪೂರೈಕೆಯಾಗುತ್ತದೆ. ವಿವೇಕ ಮತ್ತು ನೀತಿವಂತಿಕೆಯ ಲಾಭ ಇವುಗಳನ್ನು ಮಿಲಿಯಾಂತರ ಯುಗದಲ್ಲಿ ಮನಸ್ಸಿಗೆ ನಾಟುವಂತೆ ಬೋಧಿಸಲಾಗುವುದು.

(3) ಜನಾಂಗವನ್ನು ಕ್ಷಣಮಾತ್ರದಲ್ಲಿ ಪುನರ್ ವಶಪಡಿಸುವುದಾದರೆ ಅದು ಬಹುಮಟ್ಟಿಗೆ ನೂತನ ಜನಾಂಗವಾಗುವುದು ಮತ್ತು ಎಲ್ಲಾ ಅನುಭವಗಳು ತುಲನಾತ್ಮಕವಾಗಿ ಕಳೆದುಹೋಗುತ್ತದೆ; ಯಾಕೆಂದರೆ, ಈಗ ಅಸಂಪೂರ್ಣವಾದ ಸಾಮರ್ಥ್ಯ ಮತ್ತು ಅಧಿಕಾರ ವುಳ್ಳವನಾಗಿರುವ ಯಾರೊಬ್ಬ ವ್ಯಕ್ತಿಯೂ ತತ್ಕ್ಷಣದಲ್ಲಿ ತನ್ನನ್ನು ತಾನು ಸಂಪೂರ್ಣವಾದ ಸಾಮರ್ಥ್ಯ ಮತ್ತು ಅಧಿಕಾರಗಳುಳ್ಳ ಸಮರ್ಪಕ ವ್ಯಕ್ತಿಯಾಗಿ ಗುರುತಿಸಿ ಕೊಳ್ಳಲಾರನು. ಬಾಲ್ಯಪ್ರಾಯದವರು ತಮ್ಮ ಬಗ್ಗೆಯೇ ತಿಳುವಳಿಕೆಗೆ ಇನ್ನೂ ಬಂದಿರುವುದಿಲ್ಲವಾದುದರಿಂದ ಕಿಂಚಿತ್ತಾದರೂ ಗುರುತು ಹಿಡಿಯಲಾರನು. ಹೀಗಾಗಿ, ಇದು ದೇವರ ಯೋಜನೆಯಾಗಿದ್ದರೆ, ಆತನು ಮಿಲಿಯಾಂತರ ಜನರನ್ನು ಏದೇನಿನಲ್ಲಿ ಮೊದಲೇ ಸೃಷ್ಟಿಸಿ ಒಂದೂ ಯೋಜನೆ ತಯಾರಿಸಿ ಮಿಲಿಯಾಂತರ ಜನರನ್ನೂ ಪುನರ್ವಶದಲ್ಲಿ ಒಂದೇ ಸ್ಥಾನದಲ್ಲಿರಿಸಿದ್ದರೆ ಈಗ ಪಾಪದ ಅನುಭವದಿಂದಾಗುವ ಲಾಭವು ದೊರೆಯುತ್ತಿರಲಿಲ್ಲ.

(4) ಈ ರೀತಿಯಲ್ಲಿ ಪ್ರತಿಯೊಬ್ಬ ವ್ಯಕ್ತಿಯನ್ನು ತತ್ಕ್ಷಣದಲ್ಲಿ ಪರಿಪೂರ್ಣತೆ ಹೊಂದಿದ್ದರೆ, ಕರ್ತನ ಸಭೆಯು ಕಾರ್ಯಾಚರಣೆ ನಡೆಸಲು ಅವಕಾಶ ವಿರುತ್ತಿರಲಿಲ್ಲ ಹಾಗೂ ಕರ್ತನೊಡನೆ ಈ ಲೋಕವನ್ನು ಆಶೀರ್ವದಿಸಲು ಅಬ್ರಹಾಮನ ಸಂತತಿಯಾಗಿ ಅದನ್ನು 'ರಾಜವಂಶ ಯಾಜಕತ್ವ'ವನ್ನಾಗಿ ಕೈಗೂಡಿಸಲು ಅವಕಾಶವೇ ಇರುತ್ತಿದ್ದಿಲ್ಲ (ಗಲಾತ್ಯ 3:16,29 ನೋಡಿರಿ). 'ರಾಜವಂಶದ ಯಾಜಕತ್ವ'ಕ್ಕೆ ದೈವಿಕ ಹಂಚಿಕೆಯು ಕೆಲವರ ಬಲಹೀನತೆ, ಅಸಮರ್ಪಕತೆಯ ಅರ್ಥ ನೀಡುತ್ತದೆ ಮತ್ತು ಇವರುಗಳಿಗೆ ಯಾಜಕರು ಸಹಾಯ ಮಾಡಬೇಕು ಮತ್ತು ಶಿಕ್ಷಣ ನೀಡಬೇಕಾಗುತ್ತದೆ ಮತ್ತು ಅವರಿಂದ ಪಾಪನಿವಾರಣಾರ್ಥ ಯಜ್ಞ, ಕಾಣಿಕೆಗಳನ್ನು ಅಂಗೀಕರಿಸಬೇಕು ಮತ್ತು ಅವರಿಗೆ ಕರುಣೆ ತೋರಿಸಬೇಕು ಮತ್ತು ಅವರ ಪಾಪಕ್ಷಮಾಪಣೆ ಮಾಡ ಬೇಕು. ದೇವರ ಯೋಜನೆಯ ಎರಡನೆಯ ಬರೋಣದಲ್ಲಿ ತತ್ಕ್ಷಣವಾದ ಪುನರ್ವಶವು ಇರುವುದಾದಲ್ಲಿ ಅಂಥಾಃ ಯಾಜಕತ್ವಕ್ಕೆ ಜಾಗವೇ ಇರುತ್ತಿದ್ದಿಲ್ಲ.

(5) ಪುನರ್ವಶವು ತತ್ಕ್ಷಣವಾದ ಕಾರ್ಯ ವಾಗುತ್ತಿದ್ದರೆ, ಮಾನವ ಸಮರ್ಪಕತೆಗೆ ಮತ್ತು ಆದಾಮನು ದಾಟಿದ ಪರೀಕ್ಷಾ ಕಾಲಕ್ಕೆ ಮತ್ತು ಇಂಥಾಃ ತತ್ಕ್ಷಣವಾದ ಪುನರ್ವಶಕ್ಕೆ ಒಂದು ವರ್ಷವು ಸಾಕಷ್ಟು ಕಾಲವಾಗುವಾಗ ಸಹಸ್ರವರ್ಷಗಳನ್ನು "ಪುನರ್ವಶದ ಸಮಯ"ವನ್ನಾಗಿ ಯಾಕೆ ನೇಮಿಸ ಬೇಕಿತ್ತು?

(6) ಮಾನವಜಾತಿಯನ್ನು ತತ್ಕ್ಷಣದಲ್ಲಿ ಸಂಪೂರ್ಣವಾಗಿ ಸಮರ್ಪಕತೆಗೆ ತರಬಹುದಾದರೆ, ಅವರ ಲೆಕ್ಕಕ್ಕೆ ಕರುಣೆ ಎಂಬುದೇ ಇಲ್ಲವೆಂಬ ಅರ್ಥವುಂಟಾಗುತ್ತದೆ. ಇಚ್ಛಾಪೂರ್ವಕವಾದ, ಬುದ್ಧಿಪೂರ್ವಕವಾದ, ಉದ್ದೇಶಪೂರ್ವಕವಾದ ಅಪರಾಧಿಗಳಿಗೆ ಕರುಣೆಯ ಆಸ್ಪದವೇ ಇರುವುದಿಲ್ಲ. ಇದಕ್ಕೂ ಹೆಚ್ಚಾಗಿ, ಅಪರಾಧ ಮಾಡುವ ಪ್ರತಿಯೊಬ್ಬ ವ್ಯಕ್ತಿಯೂ ಒಬ್ಬ ಇಚ್ಛಾಪೂರ್ವಕವಾದ ಪಾಪಿಯಾಗಿ ತನ್ನನ್ನು ತಾನೇ ಮರಣದಂಡನೆಗೆ ಒಳಪಡಿಸಿಕೊಳ್ಳುತ್ತಾನೆ, ಆದಾಮನ ಪ್ರಕರಣದಲ್ಲಿದ್ದಂತೆ 'ಒಬ್ಬನ ಅವಿಧೇಯತ್ವ ದಿಂದ' ಇಡೀ ಸಂತತಿಯು ಪಾಪಕ್ಕೆ ಒಳಗಾದಂತೆ ಮತ್ತು ಮತ್ತೊಬ್ಬ 'ಸರ್ವಸಂಪೂರ್ಣವಾದ ವ್ಯಕ್ತಿ'ಯಿಂದ ಆ ಜನಾಂಗವು ವಿಮೋಚನೆ ಹೊಂದಿಕೊಂಡಂತೆ ಅಂಥವರಿಗೆ ಇಲ್ಲಿ ವಿಮೋಚನೆಯು ಸಾಧ್ಯವಿಲ್ಲ. ಈ ಪ್ರಕರಣದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ವ್ಯಕ್ತಿಗತವಾದ ಅಪರಾಧಿ ಯಾಗಿದ್ದಾನೆ ಮತ್ತು ವ್ಯಕ್ತಿಗತವಾಗಿಯೇ ಪಾಪದ ದಂಡನೆಯಾದ ಮರಣಕ್ಕೆ ಒಳಗಾಗುವವನಾಗಿದ್ದಾನೆ. ಕೇವಲ ಒಬ್ಬ ಅಪರಾಧಿಯು ದಂಡನೆಯಿಂದ ಬಿಡುಗಡೆ ಹೊಂದಿಕೊಳ್ಳಲು ಪ್ರತಿಯೊಬ್ಬ ಅಪರಾಧಿ ವ್ಯಕ್ತಿಯ ಪ್ರಾಣಕ್ಕೆ ಪ್ರಾಣ ಕೊಡಬೇಕಾಗುತ್ತದೆ. ಕೋಟ್ಯಾಂತರ ಅಪರಾಧಿಗಳ ಪಾಪಕ್ಕೆ ಪರಿಹಾರ ದೊರಕಲು ಕೋಟ್ಯಾಂತರ ಪವಿತ್ರ ಮತ್ತು ಸಮರ್ಪಕರ ಮರಣ ಯಜ್ಞಗಳು ಬೇಕಾಗುತ್ತದೆ. ಆದರೆ ದೇವರು ಎಲ್ಲರಿಗಾಗಿ ಸಂಪೂರ್ಣವಾದ ಪೂರ್ವ ಸಿದ್ಧತೆಯನ್ನು ಕ್ರಿಸ್ತಯೇಸುವಿನಲ್ಲಿ ಮಾಡಿದ್ದಾನೆ ಮತ್ತು ಯಾವುದೇ ಹೆಚ್ಚಿನ ಪಾಪ ಪ್ರಾಯಶ್ಚಿತ್ತ ಯಜ್ಞಗಳಿಗೆ ಅವಕಾಶವಿರುವುದಿಲ್ಲ. ಇವರುಗಳು ಒಮ್ಮೆ ಕ್ರಿಸ್ತನಿಂದ ಸಮರ್ಪಕತೆಗೆ ಪುನರ್ವಶಗೊಂಡ ಮೇಲೆ, ಆತನ ತ್ಯಾಗದ ಅರ್ಹತೆ ಮೇರೆಗೆ ಅವರು ಈಗಾಗಲೇ ಬಯಸಿ ಮತ್ತು ಗಳಿಸಿದ ಎಲ್ಲಾ ಕೃಪೆಯ ಫಲವನ್ನು ಆತನ ಈಡುಬಲಿಯ ಮೂಲಕ ಹೊಂದಿಕೊಂಡಿರುವ ಕಾರಣ ಬೇರೆ ಏನನ್ನಾದರೂ ಹಕ್ಕಿನಿಂದ ಕೇಳಿಕೊಳ್ಳುವುದು ಸಾಧ್ಯವಿಲ್ಲ. ಅವರು ಒಮ್ಮೆ ಸಂಪೂರ್ಣ ಪುನರ್ವಶವನ್ನು ಮೇಲೆ ಪಾಪ ಪ್ರಾಯಶ್ಚಿತ್ತ ಯಜ್ಞದಲ್ಲಿ ಅವರಿಗೆ ಇನ್ನೂ ಹೆಚ್ಚಿನ ಪಾಲು ದೊರೆಯದು.

ಆದರೆ, ನಾವು ಸೃಷ್ಟಿಕರ್ತನ ಯೋಜನೆಯ ಅನುಕ್ರಮವಾದ ಪುನರ್ವಶದ ಸಮಂಜಸತೆಯನ್ನು ಮತ್ತು ಸೃಷ್ಟಿಕರ್ತನೊಡನೆ ಮತ್ತು ಆತನ ಆಜ್ಞೆಗಳೊಡನೆ ಅನುಸಂಧಾನಕ್ಕೆ ಪ್ರಮಾಣಬದ್ಧನಾಗಿ ಪ್ರಗತಿಗೊಳ್ಳುತ್ತಿರುವ

ಮಾನುಕುಲಕ್ಕೆ ಈ ಯೋಜನೆಯಿಂದಾಗುವ ಪ್ರಯೋಜನವನ್ನು ಪರಿಗಣಿಸೋಣ.

(1) ಅರ್ಪಿಸಿದ ಈಡುಬಲಿಯ ಸದ್ಗುಣದ ಕಾರಣ ಪ್ರತಿಯೊಬ್ಬರೂ ಆದಾಮನ ಮರಣದ ನಿದ್ರೆಯಿಂದ ಎಚ್ಚರಗೊಳ್ಳುವಂತೆ ಎಚ್ಚರಗೊಳ್ಳಬೇಕಾಗುತ್ತದೆ: ಪುನರ್ವಶದ ಆಶೀರ್ವಾದಗಳಲ್ಲಿ ಇದು ಮೊದಲನೆಯ ಹಂತ. ನಂತರದಲ್ಲಿ ಅವರು ಈ ಸುವಾರ್ತಾಯುಗದಲ್ಲಿ ಅನುಭವ ಹೊಂದಿ, ಪಾಪದ ಮೇಲೆ ಜಯ ಹೊಂದಿ, ಇವರುಗಳು ಸಮರ್ಥರಾಗಿ ತಾಳ್ಮೆಯಿಂದ ಮತ್ತು ಸಹಾಯಕರಾಗಿ ತಾವು ಆಳುವವರ ಮೇಲೆ ರಾಜರುಗಳು ಯಾಜಕರೂ ಆಗಲು ತಯಾರಾಗುವರು (ಪ್ರಕಟನೆ 5:10).

ಅವರು ಮರಣದಲ್ಲಿ ಕಳಕೊಂಡ ಅದೇ ಸ್ಥಿತಿಗೆ ಎಚ್ಚರಗೊಳ್ಳುವ ಕಾರಣದಿಂದ ಪ್ರತಿಯೊಬ್ಬ ವ್ಯಕ್ತಿಯ ಅನನ್ಯತೆಯನ್ನು ಕಾಪಾಡಿಕೊಳ್ಳಲಾಗುವುದು. ಪಾಪ ಮತ್ತು ಬಲಹೀನತೆಗಳಿಂದ ಹೊರಬಂದ ನಂತರದ ಪ್ರಸ್ತುತ ಸಮಯದಲ್ಲಿನ ವಿವಿಧ ಪ್ರಗತಿಯ ಹಂತಗಳು ಪಾಪದ ವಿಷಯದಲ್ಲಿ, ನೀತಿವಂತರ ಲಾಭಗಳ ವಿಷಯದಲ್ಲಿ ಆತನಿಗೆ ಲಾಭದಾಯಕವಾದ ಪಾಠವನ್ನು ನೀಡುತ್ತವೆ. ಈ ರೀತಿಯಲ್ಲಿ, ಮಹಾವಿಮೋಚಕನು ಮಾನವ ಜಾತಿಯ ಪ್ರಪಂಚವನ್ನು ಸಮರ್ಪಕತೆಗೆ ಹಂತ ಹಂತವಾಗಿ ಎತ್ತುತ್ತಾನೆ ಮತ್ತು ಅವರ ಇಚ್ಚೆಗೆ ಅನುಸಾರವಾದ ಅನುಪಾತದಲ್ಲಿ ಅವರು ಸಮರ್ಪಕತೆಯೆಡೆಗೆ ಪ್ರಗತಿಹೊಂದಿಕೊಳ್ಳುತ್ತಾರೆ. ಆದರೆ, ಅವರಿಗೆ ನೀಡಲಾದ ಜ್ಞಾನ ಮತ್ತು ಅವಕಾಶಗಳ ಹೊರತಾಗಿಯೂ ನೂರುವರ್ಷ ಕಾಲದಲ್ಲಿ ಪ್ರಗತಿಯನ್ನು ಹೊಂದಿಕೊಳ್ಳಲಾಗದವರು ಎರಡನೆಯ ಮರಣದಲ್ಲಿ ಮುಂದೆ ಮರಳಿಪಡೆಯುವ ಯಾವ ಅವಕಾಶ ಅಥವಾ ನಿರೀಕ್ಷೆಯಾಗಲೀ ಇಲ್ಲದಂತೆ ಜೀವಿತರ ಲೋಕದಿಂದ ಕಡಿಯಲ್ಪಡುವರು; ಯಾಕೆಂದರೆ, ಅವಕಾಶಗಳನ್ನು ತಮ್ಮ ಕೈಗಳಲ್ಲಿ ಇಟ್ಟುಕೊಂಡು, ಸರಿ ಮತ್ತು ತಪ್ಪುಗಳ ಗಣನೀಯ ತಿಳುವಳಿಕೆಗೆ ಬರದವರಾಗಿ ಅವರು ಕ್ರಿಸ್ತನಲ್ಲಿ ದೇವರ ಕೃಪೆಯನ್ನು ಅಲಕ್ಷ್ಯಮಾಡಿದ್ದಾರೆ. ಅವರು ಮಹಾ ಪ್ರವಾದಿಯ ಬೋಧನೆಗಳನ್ನು ತಾತ್ಸಾರಮಾಡಿದ್ದಾರೆ ಮತ್ತು ಪವಿತ್ರತೆಯ ರಾಜಮಾರ್ಗದಲ್ಲಿ ಪ್ರಗತಿಹೊಂದಲು ಅಸಡ್ಡೆ ತೋರಿದ್ದಾರೆ (ಯೆಶಾಯ 65:20; 35:8 ನೋಡಿರಿ). ಪರಂತು, ಪ್ರವಾದಿಯು ಸೂಚಿಸುವಂತೆ, ಒಂದು ನೂರು ವರ್ಷ ಪ್ರಾಯದಲ್ಲಿ ಸಾಯುವಾಗ, ಅವರನ್ನು ಕೇವಲ ಮಕ್ಕಳೆಂದು ಪರಿಗಣಿಸಬಹುದು. ಯಾಕೆಂದರೆ ಪ್ರಗತಿ ಹೊಂದ ಬಯಸುವವರು ಕನಿಷ್ಟ ಮಿಲಿಯಾಂತರ ಯುಗದ ಅಂತ್ಯದವರೆಗಾದರೂ ತಮ್ಮ ಜೀವಿತವನ್ನು ಮುಂದುವರೆಸುತ್ತಾರೆ.

(2) ಈ ಹಂತಗಳಲ್ಲಿ ಪವಿತ್ರತೆಯ ರಾಜಮಾರ್ಗದಲ್ಲಿ ಮೇಲಕ್ಕೇರುವಾಗ, ಮಿಲಿಯಾಂತರ ಯುಗದಲ್ಲಿ, ಪ್ರಪಂಚವು ಇನ್ನೂ ಅಸಮರ್ಪಕವಾಗಿರುವಾಗ ಅವರೆಗೆ ಅಮೂಲ್ಯವಾದ ಪಾಠಗಳನ್ನು ಕಲಿಯುವಾಗ ಮತ್ತು ಆತ್ಮನ ವಿವಿಧ ಫಲಗಳನ್ನು ಅಭಿವೃದ್ಧಿಪಡಿಸಿಕೊಳ್ಳುವಾಗ ಇನ್ನೂ ಈಡುಬಲಿ ಯಜ್ಞದ ಅರ್ಹತೆಯಲ್ಲಿ ಮರೆಯಾಗಿರುತ್ತಾರೆ. ಅದೇ ಸಮಯದಲ್ಲಿ ಅಜಾಗರೂಕತೆಯ ಅಥವಾ ಬೇರೆ ಪದ್ಧತಿಗಳನ್ನು ಪ್ರಯತ್ನಿಸುವ ಕಾರಣ ಉಂಟಾಗುವ ಬಿರುಕುಗಳು ಅಥವಾ ಕಳಂಕಗಳು ಇನ್ನೂ ಅವರ ಆದಾಮಿಕ ಬಲಹೀನತೆಗಳಾಗಿ ಕಂಡು ಬರುತ್ತವೆ ಮತ್ತು ಆ ಮಟ್ಟಿಗೆ ಮಹಾ ಯಾಜಕನ ಕೈಯಿಂದ ಕ್ಷಮಾಪಣೆ ಪಡಕೊಳ್ಳಬಹುದಾಗಿದೆ.

ದೈಹಿಕ ಪರಿಪೂರ್ಣತೆ ಅಥವಾ ಜ್ಞಾನದ ಪರಿಪೂರ್ಣತೆಗಳಲ್ಲಿ ಯಾವುದಾದರೂ ಒಂದು ಪರೀಕ್ಷೆಗೆ ಅಗತ್ಯವಾಗಿದೆ ಎಂದು ಹಕ್ಕಿನಿಂದ ಹೇಳುವುದು ಸಭೆಯು ಆ ರೀತಿಯಲ್ಲಿ ಈಗ ನಿತ್ಯ ಪರೀಕ್ಷೆಯಲ್ಲಿದೆ ಎಂಬುದನ್ನು ನಿರಾಕರಿಸಿದಂತಾಗುತ್ತದೆ. ಆ ಕಾರಣದಿಂದ ಎಲ್ಲರೂ ವೇದಗ್ರಂಥದ ವಿರುದ್ಧವಾದ ಹೇಳಿಕೆಯನ್ನು ಒಪ್ಪಿ ಕೊಳ್ಳಬೇಕಾಗುತ್ತದೆ. ಅಥವಾ ಅಂಥಾಃ ಸಮರ್ಪಕತೆಗಳು ಪ್ರಪಂಚದ ಪರೀಕ್ಷೆಗೆ ಅಗತ್ಯವಿಲ್ಲ. ನಮ್ಮಂತೆ ಪ್ರಪಂಚವು ಸಹಾ ನಿಜವಾಗಿಯೂ ಎಲ್ಲಾ ಪರೀಕ್ಷೆಗಳು ಪ್ರಾರಂಭವಾಗುವ ಮೊದಲು ಕ್ರಿಸ್ತನಲ್ಲಿ ದೇವರ ಕೃಪಾಜ್ಞಾನಕ್ಕೆ ಬರುತ್ತದೆ ಮತ್ತು ಇದನ್ನು ಅವರು ಹೊಂದುತ್ತಾರೆಂದು ದೇವರು ವಾಗ್ದಾನಮಾಡಿದ್ದಾನೆ. ಅವರ ವಂಶಪಾರಂಪರ್ಯವಾದ ಬಲಹೀನತೆಗಳನ್ನು ಮುಚ್ಚಿ ಹಾಕುವುದಕ್ಕಾಗಿ ಅವರು ಸಮರ್ಪಕತೆಯನ್ನು ಪಡಕೊಳ್ಳುವಾಗ ನೂತನ ಒಡಂಬಡಿಕೆಯ ಮಧ್ಯಸ್ಥನಾದ ಕ್ರಿಸ್ತನ ಅರ್ಹತೆಯನ್ನು ಹೊಂದಿಕೊಳ್ಳುತ್ತಾರೆ. ಮೆಸ್ಸೀಯನ ಆಳ್ವಿಕೆಯು ಅಂತ್ಯದವರೆಗೂ ವಿಧೇಯರು ಸಂಪೂರ್ಣವಾದ ಸಮರ್ಪಕತೆಯನ್ನು ಪಡಕೊಳ್ಳುವುದಿಲ್ಲ.

(3) ಮಿಲಿಯಾಂತರ ಯುಗವು ಈ ಲೋಕದ ನ್ಯಾಯತೀರ್ಪಿನ ದಿನವೆಂದು ವೇದಗ್ರಂಥಗಳು ಸಾರಿ ತಿಳಿಸುತ್ತಾ – "ಆತನು ನಿಷ್ಕರ್ಷೆಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವುದಕ್ಕೆ ಒಂದು ದಿವಸವನ್ನು ಗೊತ್ತುಮಾಡಿದ್ದಾನೆ" (ಅ.ಕೃ.17:31) ಎಂದು ಹೇಳುತ್ತದೆ. ಇಡೀ ಲೋಕವನ್ನು ನಿರ್ಬಂಧಗೊಳಿಸುವುದು ಅಥವಾ ನಿತ್ಯನಿರಂತರವಾಗಿ ಆದಾಮನ ಜನಾಂಗದ ಪ್ರತಿಯೊಬ್ಬ ರನ್ನೂ ರಕ್ಷಿಸುವುದು ದೇವರ ಯೋಜನೆಯಾಗಿದ್ದರೆ, ಬರಲಿರುವ ಕಾಲವನ್ನು ನ್ಯಾಯತೀರ್ಪಿನ ದಿನವೆಂದು ಏಕೆ ಕರೆಯಬೇಕು? ನ್ಯಾಯತೀರ್ಪು ಎಂಬುದು ನ್ಯಾಯವಿಚಾರಣೆಯನ್ನೂ ಪರೀಕ್ಷೆಯನ್ನೂ ಸೂಚಿಸುತ್ತದೆ ಮತ್ತು ಇದು ಅಸಮರ್ಥರ ನಿರಾಕರಣೆ ಮಾತ್ರವಲ್ಲದೆ ಅರ್ಹರೆಂದು ಸಾಬೀತುಗೊಂಡವರ ಅಂಗೀಕಾರ ಮತ್ತು

ಆಶೀರ್ವಾದ ಎಂಬ ಅರ್ಥವನ್ನೂ ನೀಡುತ್ತದೆ. ನ್ಯಾಯ ತೀರ್ಪು ನಿತ್ಯ ನಿರಂತರವಾದ ಜೀವ ಅಥವಾ ಮರಣಕ್ಕಾಗಿ ಅದೆ.

ನಮ್ಮ ಕರ್ತನು ಹೇಳಿದ ಕುರಿ ಮತ್ತು ಆಡುಗಳ ಸಾಮ್ಯವನ್ನು ಗಮನಿಸಿರಿ (ಮತ್ತಾಯ 25:32–34). ಇದು ಸುವಾರ್ತಾಯುಗಕ್ಕೆ ಅನ್ವಯಿಸುವುದಿಲ್ಲ, ಮಿಲಿಯಾಂತರ ಯುಗದ ಲೋಕದವರಿಗೆ ಅನ್ವಯಿಸುತ್ತದೆ. "ಮನುಷ್ಯಕುಮಾರನು ತನ್ನ ಮಹಿಮೆಯಿಂದ ಎಲ್ಲಾ ದೇವದೂತರುಗಳೊಂದಿಗೆ ಕೂಡಿ ಬರುವಾಗ" (ವಚನ 31) ಎಂಬ ಮಾತುಗಳಿಂದ ಇದು ಪ್ರಾರಂಭಗೊಳ್ಳುತ್ತದೆ. ಆತನು ತನ್ನ ಮಹಿಮೆಯ ಸಿಂಹಾಸನದಲ್ಲಿ ಕುಳಿತುಕೊಳ್ಳುವನು. ಆ ಸಮಯದಲ್ಲಿ, ಆತನ ವಾಗ್ದಾನಕ್ಕನುಸಾರವಾಗಿ ಆತನ ಆಯ್ಕೆಯಾದ ಸಭೆಯೆಂಬ 'ಮದಲಗಿತ್ತಿ'ಯು ಆತನ ಸಿಂಹಾಸನ ಮತ್ತು ಮಹಿಮೆಯಲ್ಲಿ ಪಾಲುತೆಗೆದು ಕೊಳ್ಳುವುದು. ಆಗ ಎಲ್ಲಾ ದೇಶಗಳ ಜನರು ಆತನ ಮುಂದೆ ಕೂಡಿಸಲ್ಪಡುವರು ಮತ್ತು ಆತನು ಅವರನ್ನು ಕುರುಬರು ಆಡುಗಳನ್ನೂ ಕುರಿಗಳನ್ನೂ ಬೇರೆ ಬೇರೆ ಮಾಡುವ ಪ್ರಕಾರ ಅವರನ್ನು ವಿಂಗಡಿಸಿ ಕುರಿಗಳನ್ನು ತನ್ನ ಕೃಪೆ ಹೊಂದಿಕೊಳ್ಳುವಂತೆ ಬಲಗಡೆಯಲ್ಲಿಯೂ, ಆಡುಗಳನ್ನು ತನ್ನ ಅವಕೃಪೆ ಹೊಂದಿಕೊಳ್ಳುವಂತೆ ತನ್ನ ಎಡಗಡೆಯಲ್ಲಿಯೂ ನಿಲ್ಲಿಸಿಕೊಳ್ಳುವನು. ಈ ವಿಂಗಡಿಸುವಿಕೆ ಮತ್ತು ವಿಚಾರಣೆಯು ಮಿಲಿಯಾಂತರ ಯುಗದ ಕಾಲ ಪೂರ್ತಿ ನೆರವೇರುತ್ತಿರುವುದು. ಅದರ ಅಂತ್ಯದಲ್ಲಿ ಎಲ್ಲಾ ಕುರಿಗಳನ್ನು ತನ್ನ ತಂದೆಯ ಕೃಪೆಗೆ – ನಿತ್ಯಜೀವಕ್ಕೆ ಸ್ವಾಗತಿಸಲಾಗುವುದು ಮತ್ತು ಅವಿಧೇಯವಾದ ಆಡುಗಳನ್ನು ಅವರ ನಾಯಕನಾದ ಸೈತಾನನೊಡನೆ ಮತ್ತು ಎಲ್ಲಾ ಕೇಡುಮಾಡುವವರೊಂದಿಗೆ ನಿತ್ಯನಿರಂತರ ನಾಶನದಿಂದ ಶಿಕ್ಷಿಸಲಾಗುವುದು. ಜೀವದಿಂದ ನಿತ್ಯವಾದ ಈ ಕಡಿದುಕೊಳ್ಳುವಿಕೆಯನ್ನು ಬೆಂಕಿ ಗಂಧಕಗಳ ಸರೋವರಕ್ಕೆ ಸಂಕೇತಿಸಲಾಗಿದೆ.– ಅದುವೇ ಎರಡನೆಯ ಮರಣ.

ಮಿಲಿಯಾಂತರ ಯುಗದಲ್ಲಿ ನಡೆಯಲಿರುವ ಆ ನ್ಯಾಯತೀರ್ಪಿನ ನ್ಯಾಯವಿಚಾರಣೆಯು ಉಜ್ವಲವಾದ ಶ್ವೇತ ನ್ಯಾಯಸಿಂಹಾಸನದ ಮುಂದೆ ನಡೆಯುತ್ತದೆಂದು ವೇದವಚನಗಳು ಪ್ರತಿನಿಧಿಸುತ್ತವೆ ಮತ್ತು ನ್ಯಾಯಧಿಪತಿಯ ತೀರ್ಮಾನವನ್ನು ವರ್ಣಿಸುತ್ತವೆ. ಆ ಸಮಯದಲ್ಲಿ ಯಾರು ಪರಲೋಕದ ತಂದೆಯ ಪ್ರೀತಿಯ, ಸಮರ್ಪಕತೆಯ ಸ್ಫೂರ್ತಿಯನ್ನು ಬೆಳೆಸಿಕೊಂಡಿರುತ್ತಾರೋ ಅಂಥವರನ್ನು ದೇವರ ಜನರೆಂದು ಎಣಿಸಲ್ಪಡುವರು ಮತ್ತು ಅವರಿಗೆ ಲೋಕಾದಿಯಿಂದ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ (ಭೂಲೋಕದ ರಾಜ್ಯ) ನೀಡಲಾಗುವುದು. ಇತರರು ಅನುಕೂಲಕರ ಅವಕಾಶಗಳಲ್ಲಿಯೂ ಪ್ರೀತಿಯ ಆತ್ಮನಲ್ಲಿನ ಬೆಳೆಯುವಿಕೆಯಲ್ಲಿ, ತಮ್ಮ ಕರ್ತನ ರೀತಿಯಂತೆ ಆಗುವಲ್ಲಿ ವಿಫಲರಾದ ಕಾರಣ ದೇವರ ವಿರೋಧಿಗಳೆಂದು ಎಣಿಸಲ್ಪಡುತ್ತಾರೆ ಮತ್ತು ಸೈತಾನನೊಂದಿಗೆ ಅವರುಗಳು ಸಹಾ ನಾಶಹೊಂದುವರು (ಪ್ರಕಟನೆ 20 : 9–13ರೊಂದಿಗೆ ಹೋಲಿಸಿರಿ).

## ಈಡುಬಲಿ – ಬದಲಿಯಾಗಿ
## Ransom - Substitution

ಬದಲಿಸುವಿಕೆಯ ಉಪದೇಶವನ್ನು ವೇದಗ್ರಂಥಗಳಲ್ಲಿ ಸ್ಪಷ್ಟವಾಗಿ ಕಲಿಸಲಾಗಿದೆ ಮತ್ತು ಕ್ರೈಸ್ತರು ಇದನ್ನು ಶತಮಾನಗಳ ಕಾಲದಿಂದಲೂ ಭದ್ರವಾಗಿ ಹಿಡಿದು ಕೊಂಡಿದ್ದಾರೆ. ಆದರೆ ಇಂದು ಇದು ಸಡಿಲವಾಗುತ್ತಿದೆ. ಯಾಕೆಂದರೆ, ಹಿಂದಿನದಕ್ಕಿಂತ ಇನ್ನೂ ಸ್ಪಷ್ಟವಾದ ಆಲೋಚನೆಯ ಅಡಿಯಲ್ಲಿ ಸಾಮಾನ್ಯವಾದ ಗ್ರಹಿಕೆ ಏನೆಂದರೆ, ನಿರಂತರವಾದ ಯಾತನೆಯು ಪಾಪದ ಸಂಬಳವಾದರೆ ಮತ್ತು ನಮ್ಮ ಕರ್ತನಾದ ಯೇಸುವು ಈ ದಂಡನೆಯನ್ನು ಸಂಧಾಯುವಮಾಡುವಲ್ಲಿ ನಮ್ಮ ಬದಲಿಯಾದರೆ, ಆತನು ನಿರಂತರವಾದ ಯಾತನೆಯನ್ನು ಅನುಭವಿಸಬೇಕಾಗುತ್ತದೆ. ಇಲ್ಲವಾದರೆ, ನಾವು ಪಾಪದಿಂದ ಬಿಡುಗಡೆ ಹೊಂದಿಕೊಳ್ಳಲು ಸಾಧ್ಯವಿಲ್ಲ. ಈ ಆಲೋಚನೆಯು ಸಾಕಷ್ಟು ಉತ್ತಮವಾಗಿದೆ. ಅಡಚಣೆ ಏನೆಂದರೆ, ಇದರ ಪೀಠಿಕಾ ರೂಪವಾದ ಹೇಳಿಕೆಯು ಸುಳ್ಳಾಗಿದೆ. ನಿರಂತರವಾದ ಯಾತನೆಯು ಪಾಪದ ಸಂಬಳವಲ್ಲ – ಮಾನವರ ವಿರುದ್ಧವಾದ ದಂಡನೆಯಲ್ಲ. ಆದಾಗ್ಯೂ, ಅನೇಕರ ಮನದಲ್ಲಿ ಪಾಪದ ಸಂಬಳ ಅಥವಾ ಬದಲಿಯು ಮರಣವೆಂದು ಕಂಡುಕೊಂಡ ಮೇಲೆಯೂ ಬದಲಿಯ ಆಲೋಚನೆಯ ಬಗ್ಗೆ ಸಾಮಾನ್ಯವಾದ ದುರಾಗ್ರಹವೊಂದು ಉಂಟಾಗುತ್ತದೆ. ನಮ್ಮ ಕರ್ತನಾದ ಯೇಸುವು ಮರಣದಲ್ಲಿ ಮಾನವನ ಬದಲಿಯಾಗಿ ಮಾನವನು ಪಡಬೇಕಾಗಿದ್ದ ಎಲ್ಲಾ ಶ್ರಮೆಯನ್ನೂ ಹೆಚ್ಚು ಸಕಾರಾತ್ಮಕ ಮತ್ತು ನಿರಪೇಕ್ಷವಾದ ಅರ್ಥದಲ್ಲಿ ಅನುಭವಿಸಿದನು. 'ಬದಲಿ' ಎಂಬ ಪದದ ಬಗ್ಗೆ ಅನೇಕರು ದುರಾಗ್ರಹವುಳ್ಳವರಾಗಿದ್ದಾರೆ ಮತ್ತು 'ಬದಲಿ'ಎಂಬ ಪದವನ್ನು ವೇದವಚನಗಳಲ್ಲಿ ಬಳಸಲಾಗಿದೆಯೇ? ಇಲ್ಲವಾದರೆ, ಇದನ್ನು ಯಾಕೆ ಉಪಯೋಗಿಸುತ್ತೇವೆ? ಎಂದು ವಿಚಾರಿಸುತ್ತಾರೆ.

Substitution (ಬದಲಿ) ಎಂಬುದು ಆಂಗ್ಲ ಪದವಾಗಿದ್ದು ಯಾವುದೇ ಆಂಗ್ಲ ಪದವನ್ನು ಸತ್ಯವೇದದಲ್ಲಿ ಬಳಕೆಮಾಡಿರುವುದಿಲ್ಲ. ಯಾಕೆಂದರೆ, ಮೂಲ

ಸತ್ಯವೇದವನ್ನು ಹಿಬ್ರೂ ಮತ್ತು ಗ್ರೀಕ್ ಭಾಷೆಗಳಲ್ಲಿ ರಚಿಸಲಾಗಿದೆ. ಹೇಗೋ ನಮ್ಮ ಆಂಗ್ಲ ಅನುವಾದಕರು ಸಮರ್ಪಕವಾದ ಔಚಿತ್ಯದೊಡನೆ Substitution ಎಂಬ ಪದದ ಬಳಕೆ ಮಾಡಿದ್ದಾರೆ. ಯಾಕೆಂದರೆ, ಮೂಲ ಗ್ರೀಕ್ ಭಾಷೆಯಲ್ಲಿ ಅನೇಕ ಕಡೆಗಳಲ್ಲಿ ಪ್ರಶ್ನಾತೀತವಾಗಿ Substitution ಅಥವಾ Substitute ಎಂಬ ಆಲೋಚನೆ ಇದ್ದೇ ಇದೆ. ಈ ಪದವು ಕಂಡು ಬಾರದೇ ಇರುವುದಕ್ಕೆ ಕೇವಲ ಕಾರಣವೆಂದರೆ ಭಾಷಾಂತರಕಾರರು ಅದನ್ನು ಉಪಯೋಗ ಮಾಡಿರುವುದಿಲ್ಲ. ನಾವು ನಮ್ಮ ಮನಗಳ ಮೇಲೆ ಮೂಲ ಗ್ರಂಥಗಳ ಪ್ರಭಾವವನ್ನು ಬೀರ ಬಯಸುವುದರಿಂದ 'Substitute' ಎಂಬ ಪದವು ಆಳವಾದ ಪರಿಣಾಮವನ್ನು ಬೀರುವುದಾಗಿದೆ. ಯಾಕೆಂದರೆ, Substitute ಪದದ ವಿರೋಧ ಪದದಲ್ಲಿ ಇರುವ ಯಾವುದೇ ಆಲೋಚನೆಯು Ransom ಪದದ ವಿರೋಧ ಪದಗಳಲ್ಲಿಯೂ ಕಂಡುಬರುತ್ತದೆ. ನಾವೀಗಾಗಲೇ ಕಂಡುಕೊಂಡಂತೆ, ವೇದಗ್ರಂಥಗಳಲ್ಲಿ ನಾವು ಕ್ರಿಸ್ತನ ಅಮೂಲ್ಯ ರಕ್ತದ ಮೂಲಕ ಕೊಂಡುಕೊಳ್ಳಲ್ಪಟ್ಟಿದ್ದೇವೆ ಎಂಬ ಹೇಳಿಕೆಯು ಬಹಳವಾಗಿ ಕಂಡುಬರುತ್ತವೆ; ಆತನು ನಮಗಾಗಿ ಈಡುಕೊಡುವ ಸಲುವಾಗಿ ತನ್ನ ಸ್ವಂತ ಪ್ರಾಣವನ್ನೇ ಮರಣದ ಪರ್ಯಂತ ಅರ್ಪಿಸಿದ್ದಾನೆ. ಇದು Substitution ಅಲ್ಲವಾದರೆ, ಮತ್ತೇನು?

ಒಂದು ವಸ್ತುವನ್ನು ಕೊಂಡುಕೊಳ್ಳುವಾಗ ನೀಡಿದ ಕ್ರಯವು ಅದರ ಬದಲಿಯಾಗುತ್ತದೆ. ಉದಾಹರಣೆಗೆ, ನಾವು ಒಂದು ರೊಟ್ಟಿ (ಬ್ರೆಡ್)ಯನ್ನು ಹಣಕೊಟ್ಟು ಕೊಂಡುಕೊಂಡರೆ, ನಾವು ಆ ಹಣವನ್ನು ಬ್ರೆಡ್ಡಿನ ಬದಲಿಯಾಗಿ ನೀಡುತ್ತೇವೆ ಅಂದರೆ ನಾವು ಹಣವನ್ನು ಬ್ರೆಡ್ಡಿನ Substitute ಆಗಿ ಉಪಯೋಗಿಸಿದ್ದೇವೆ. ಒಬ್ಬ ರೈತನು ಗೋಧಿಯ ಚೀಲವನ್ನು ಮಿಲ್ಲಿಗೆ ಕೊಂಡೊಯ್ದಾಗ ಅದರ ಸಮವಾದ ಬೆಲೆಯನ್ನು ಹಿಟ್ಟಿನ ಮೂಲಕ ಪಡಕೊಳ್ಳುತ್ತಾನೆ. ಗೋಧಿಯು ಹಿಟ್ಟಿನ ಬದಲಿಯಾಗುತ್ತದೆ. ಹಾಗೆಯೇ ಹಿಟ್ಟು ಸಹಾ ಗೋಧಿಯ ಬದಲಿಯಾಗುತ್ತದೆ. ಒಂದು ಅನುರೂಪವಾದ ಬೆಲೆ. ಒಂದು ಮತ್ತೊಂದರ ಈಡು ಅಥವಾ ಬದಲಿಯಾಗುತ್ತದೆ. ಹೀಗಾಗಿ ಪದದ ಅತ್ಯಂತ ನಿರಪೇಕ್ಷವಾದ ಅರ್ಥದಲ್ಲಿ, ನಮ್ಮ ಕರ್ತನಾದ ಮಾನವ ಯೇಸುವು ಆದಾಮನ (ಆತನಲ್ಲಿ ಕಳೆದು ಹೋದ ಜನಾಂಗದ) ಬದಲಿಯಾಗಿ ತನ್ನನ್ನು ಮರಣಕ್ಕೆ ಒಪ್ಪಿಸಿಕೊಟ್ಟು ಎಲ್ಲರ ಪರವಾದ ಈಡುಬಲಿಯಾದನು. ಇದುವೇ ಅನುರೂಪವಾದ ಬೆಲೆ, ಬದಲಿ ಆಗಿದೆ. ಈ ಪ್ರಕರಣದಲ್ಲಿನ ಸತ್ಯವು ಯುದ್ಧ ಕಾಲದಲ್ಲಿನ ಖೈದಿ ಸೈನಿಕರನ್ನು ಅದಲಿ ಬದಲಿ ಮಾಡಿಕೊಳ್ಳುವುದನ್ನು ಹೊರತುಪಡಿಸಿ ನಾವು ಊಹಿಸಬಹುದಾದ ಬೇರೆ ಯಾವುದೇ ಪ್ರಕರಣಕ್ಕಿಂತಲೂ ಹೆಚ್ಚು ಕರಾರುವಕ್ಕಾಗಿದೆ. ಯಾಕೆಂದರೆ, ಸೈನಿಕರ ವಿನಿಮಯದಲ್ಲಿ ಖಾಸಗಿಗೆ ಖಾಸಗಿ, ಕರ್ನಲ್‌ಗೆ ಕರ್ನಲ್, ಜನರಲ್‌ಗೆ ಜನರಲ್ ಎಂಬ ಒಂದು ವಿಶೇಷತೆ ಇದೆ. ಎರಡೂ ಕಡೆಗಳಲ್ಲಿ ಮಾನವನಿಗೆ ಮಾನವನೆಂಬ ಅನುರೂಪವಾದ ಬೆಲೆಯ ಅಗತ್ಯವಿದೆ. ಹಣಕೊಟ್ಟು ಬ್ರೆಡ್ಡನ್ನು ಕೊಂಡುಕೊಳ್ಳುವುದು ಅಷ್ಟೊಂದು ಸಮರ್ಪಕವಾದ ಉದಾಹರಣೆ ಎನಿಸದು. ಯಾಕೆಂದರೆ ಬ್ರೆಡ್ ಮತ್ತು ಬೆಳ್ಳಿ ನಾಣ್ಯ ಒಂದೇ ಬೆಲೆಯುಳ್ಳದ್ದಾಗಿದ್ದರೂ ಒಂದೇ ತೆರನಾದವುಗಳಲ್ಲ. ಮಾನವನ ವಿಮೋಚನೆಯ ಪ್ರಕರಣದಲ್ಲಿ ದೇವರು ಅವು ಸಂಪೂರ್ಣವಾದ ಹೊಂದಿಕೆಯು ಸ್ವಭಾವವುಳ್ಳದ್ದಾಗಿರಬೇಕೆಂದು ಬಯಸಿದನು. ಜನಾಂಗದವರು ದೇವರ ದಂಡನೆಯಿಂದ ಬಿಡುಗಡೆ ಹೊಂದುವ ಮೊದಲು ಎಲ್ಲಾ ವಿಷಯಗಳಲ್ಲಿಯೂ ಸಮರ್ಪಕವಾದ ಬದಲಿಯನ್ನು, ಸಾದ್ಯಂತವಾಗಿ ಅನುರೂಪವಾದ ಬೆಲೆಯನ್ನು ತೆರಬೇಕು.

ಮಾನವರಲ್ಲಿ Substitute ಎಂಬ ಪದದ ಬಳಕೆ ಸಾಮಾನ್ಯವಾಗಿಯೇ ಇದ್ದು ಈ ವಿಷಯದಲ್ಲಿನ ಆಲೋಚನೆಯಲ್ಲಿ ಗೊಂದಲವನ್ನುಂಟುಮಾಡುವುದಾಗಿದೆ. ಯುದ್ಧ ಸಮಯದಲ್ಲಿ ವಿಶೇಷ ಕಾರ್ಯಕ್ಕಾಗಿ ಕಳುಹಿಸುವುದು ಅಗತ್ಯವಾಗಿದ್ದು ಒಬ್ಬನನ್ನು ಸೇನಾ ಸೇವೆಗಾಗಿ ಕಳುಹಿಸುವಾಗ, ಕೆಲವೊಮ್ಮೆ ಆತನು ತನ್ನ ಸ್ಥಾನವನ್ನು ತೆಗೆದುಕೊಳ್ಳುವ, ತನ್ನ ಬದಲಾಗಿ ಕಾರ್ಯಮಾಡುವ ಬದಲಿಯನ್ನು ಕಂಡುಕೊಳ್ಳುವಂತೆ ಅವಕಾಶ ನೀಡಲಾಗುವುದು. ಸೈನ್ಯದಲ್ಲಿ ಈ ರೀತಿಯಾಗಿ ಬದಲಿಯನ್ನು ಒದಗಿಸುವ ವ್ಯಕ್ತಿಯು ನಂತರದಲ್ಲಿ ಸೇನಾಸೇವೆಯ ಎಲ್ಲಾ ಹಂಗುಗಳಿಂದ ಮುಕ್ತನಾಗುತ್ತಾನೆ. ಸೈನಿಕ ವಿಷಯದಲ್ಲಿ 'ಬದಲಿ' ಎಂಬ ಪದದ ವಿಶಿಷ್ಟವಾದ ಉಪಯೋಗವು ಸಾಕಷ್ಟು ಸಾಮರಸ್ಯವುಳ್ಳದ್ದಾಗಿದೆ. ಯಾಕೆಂದರೆ, ಬಿಡುಗಡೆ ಹೊಂದಿದ ವ್ಯಕ್ತಿಯ ಬದಲಿಯಾಗಿ ಸರ್ಕಾರದ ಅಧಿಕಾರಿಯಿಂದ ಅಂಗೀಕಾರಗೊಂಡಾತನು ಆ ಸಮಯದಲ್ಲಿ ಹಕ್ಕಿನಿಂದ ಕೇಳುವ ದೈಹಿಕ ಸಾಮರ್ಥ್ಯವುಳ್ಳವನಾಗಿರತಕ್ಕದ್ದು. ಎರಡನೆಯದಾಗಿ, ಆತನು ತಾನೇ ನಿಯುಕ್ತಿಗೊಂಡ ವ್ಯಕ್ತಿಯಾಗಿರ ಬಾರದು ಮತ್ತು ಆತನು ಆ ಮೂಲಕ ತನ್ನನ್ನು ಬದಲಿಯಾಗಿಸಲು

ಮುಕ್ತನಾಗಿರಬೇಕು. ನಾವೀಗ ಪರಿಗಣಿಸುತ್ತಿರುವ ಪ್ರಕರಣಕ್ಕೆ ಈ ಲಕ್ಷಣಗಳು ಅನುರೂಪವಾಗಿದೆ. ನಮ್ಮ ಕರ್ತನಾದ ಯೇಸುವು ತಂದೆಯಾದ ಆದಾಮನ ಸ್ಥಾನದಲ್ಲಿ ಬದಲಿಯಾಗಲು ಮುಂದಾದನು. ದೈವಿಕ ಆಡಳಿತದ ಎಲ್ಲಾ ಅಗತ್ಯತೆಗಳನ್ನು ಆತನು ಭರಿಸಬಲ್ಲವನಾಗಿದ್ದನು. ಆತನು ನಮ್ಮ ಸ್ಥಾನವನ್ನು ತೆಗೆದುಕೊಂಡಾಗ ಆಗಲೇ ಮರಣದಂಡನೆಗೆ ಒಳಗಾಗಿರಲಿಲ್ಲ. ಆತನು ತನ್ನನ್ನು ಒಪ್ಪಿಸಿಕೊಟ್ಟನು ಮತ್ತು ಇದು ಅಂಗೀಕಾರವಾಯಿತು. ಮುಟ್ಟುಗೋಲು ಹಾಕಿಕೊಂಡ ಆದಾಮನ ಜೀವಕ್ಕೆ ಬದಲಾಗಿ ನೀಡುವ ಮುಕ್ತವಾದ ಜೀವವನ್ನು ಆತನು ಹೊಂದಿದ್ದನು.

ಆದರೆ ಇಲ್ಲಿ ಎರಡು Substitution ಗಳ ಅನುರೂಪತೆಯು ಮುಕ್ತಾಯಗೊಳ್ಳುತ್ತದೆ, ಯಾಕೆಂದರೆ, ಸೈನಿಕನ ವಿಷಯದಲ್ಲಿ ವಿಶೇಷ ಕರೆ ಅಥವಾ ನಿರ್ಣಯವು ಯುದ್ಧದಲ್ಲಿ, ಮತ್ತು ಅದರ ಕಷ್ಟ ತೊಂದರೆಗಳಲ್ಲಿ, ಪರೀಕ್ಷೆ ಮುಂತಾದವುಗಳಲ್ಲಿ ಭಾಗವಹಿಸುವುದು. ಆದರೆ, ಆದಾಮನ ವಿಷಯದಲ್ಲಿ ವಿಶೇಷ ಕರೆ ಅಥವಾ ನಿರ್ಣಯವು 'ಮರಣ'ವಾಗಿತ್ತು. Substitution ಎಂಬ ಈ ಎರಡು ಪದಗಳ ಬಳಕೆಯಲ್ಲಿನ ಸಾಮರಸ್ಯವು ಸೈನಿಕನು ಅದನ್ನು ಅಂಗೀಕರಿಸಿ ತನ್ನ ಸೈನಿಕ ಸೇವೆಗೆ ಹೋಗುವಾಗ ಮುಕ್ತಾಯಗೊಳ್ಳುತ್ತದೆ. ಇದು ನಮ್ಮ ಕರ್ತನ ಸಮರ್ಪಣೆಯನ್ನು ಮತ್ತು ಆತನು ಮರಣಿಸಲು ಹೋದದ್ದನ್ನು ದೇವರು ಅಂಗೀಕರಿಸಿದ್ದಕ್ಕೆ ಅನುರೂಪ ವಾಗಿದೆ. ಯಾಕೆಂದರೆ ಬದಲಿಯಾದ ಸೈನಿಕನು ಸೈನ್ಯಕ್ಕೆ ಅಂಗೀಕಾರವಾಗುತ್ತಾನೆ. ಈ ಕಾರಣದಿಂದ ಮೊದಲು ನಿಯುಕ್ತಿಗೊಂಡಿದ್ದವನ ಹೆಸರನ್ನು ವಿನಾಯತಿ ಪಡೆದವನೆಂದು ಹೊಡೆದು ಹಾಕಲಾಗುವುದು; ಕ್ರಿಸ್ತನು ಅದಾಮನ ಬದಲಿಯಾಗಿ ಮರಣವನ್ನು ಪ್ರವೇಶಿಸಿದಾಗ, ದೇವರ ಶಿಕ್ಷಿತರ ಪಟ್ಟಿಯಿಂದ ಆದಾಮನ ಹೆಸರನ್ನು ಹೊಡೆದುಹಾಕಲಾಯಿತು. ಸಮಾನಾಂತರವು ಮುಂದುವರೆಯುವುದಿಲ್ಲ.

Substitution ಎಂಬ ಪದವು ವಿಷಯವನ್ನು ತಪ್ಪಾಗಿ ಅರ್ಥಮಾಡಿಕೊಂಡು, ಈಗಾಗಲೇ ದುರಾಗ್ರಹಕ್ಕೆ ಒಳಗಾದವರ ಮೇಲೆ ಅನಾವಶ್ಯಕವಾಗಿ ಒಳನುಗ್ಗದಂತೆ ನಾವು ನಿಸ್ಸಂದೇಹವಾಗಿ ವಿವೇಕ ತೋರಿದ್ದೇವೆ. ಈ ದುರಾಗ್ರಹದ ಕಾರಣ ಅವರು ಈ ಪ್ರಸ್ತಾಪದ ಬಗ್ಗೆ ಉಚಿತವಾದ, ಸಾದ್ಯಂತವಾದ ಮತ್ತು ನಿಷ್ಪಕ್ಷಪಾತವಾದ ಪರಿಗಣನೆಯನ್ನು ನೀಡದವರಾಗಿದ್ದಾರೆ. ಆದಾಗ್ಯೂ, ನಾವು ಇದನ್ನು ವಿಶೇಷವಾಗಿ ನಮ್ಮ ಸ್ವಂತ ಹೃದಯದಲ್ಲಿ ಕಂಡುಕೊಳ್ಳಬೇಕು ಮತ್ತು Substitutionನ ಆಲೋಚನೆಗೆ ನಾವು ಸಾದ್ಯಂತವಾಗಿ ನಿಷ್ಠೆಯುಳ್ಳವರಾಗಿರಬೇಕು. ಇದು ಈಡುಬಲಿಯ ಆಲೋಚನೆಯಾಗಿದೆ. ಈ ವಿಷಯವನ್ನು ಸರಿಯಾಗಿ ಅರ್ಥಮಾಡಿಕೊಂಡ ನಂತರ ಕ್ರಿಸ್ತನು ನಮ್ಮ Substitute (ಬದಲಿ)ಯಾಗಿದ್ದಾನೆಂದು ಯಾರಾರು ನಂಬುವುದಿಲ್ಲವೋ ಅವರು ಈಡುಬಲಿಯ ಮೇಲೆ ನಂಬಿಕೆಯನ್ನು ತೋರಿಸುತ್ತಿಲ್ಲ. ಆದ ಕಾರಣ ಅವರು ದೇವರ ಮುಂದೆ ನೀತಿ ನಿರ್ಣಯ ಹೊಂದಲು ಬೇಕಾದ ನಂಬಿಕೆಯ ಕೊರತೆಯುಳ್ಳವರಾಗಿದ್ದಾರೆ.

## ರಕ್ಷಣೆಗೆ ಬೇರೆ ಯೋಜನೆ ಸಾಧ್ಯವಿರಲಿಲ್ಲವೇ?

## Was no Other Plan of Salvation Possible ?

ಈಡುಬಲಿಯ ಮೇಲಿನ ಪ್ರಸ್ತಾಪವನ್ನು ಅಸಮರ್ಪಕ ವಾಗಿ ನೋಡುವ ಅನೇಕರು, ಈ ವಿಷಯದಲ್ಲಿ ತಗಾದೆ ತೆಗೆಯುವ ಒಲವು ತೋರುತ್ತಾರೆ ಮತ್ತು ದೇವರು ಮಾನವನ ಬದಲಿಯಾಗಿ ಅಥವಾ ಈಡುಬಲಿಯ ಬೆಲೆಯಾಗಿ ತನ್ನ ಮಗನ ಮರಣದ ಬದಲು ಬೇರೆ ಯಾವುದಾದರೂ ಮಾರ್ಗವನ್ನು ಯಾಕೆ ಅನುಸರಿಸಲಿಲ್ಲ ಎಂಬುದು ನಮಗೆ ಅರ್ಥವಾಗುತ್ತಿಲ್ಲ ಎಂದು ಹೇಳುತ್ತಾರೆ. ಅವರು ಈ ವಿಷಯದಲ್ಲಿ ಸರಿಯಲ್ಲದ ದೃಷ್ಟಿಕೋನವನ್ನು ಹೊಂದಿದ್ದಾರೆ ಎಂದು ನಾವು ಉತ್ತರಿಸುತ್ತೇವೆ. ಅವರು ತಮಗೇ ಹಾಕಿಕೊಳ್ಳಬೇಕಾದ ಪ್ರಶ್ನೆಯೆಂದರೆ, ದೇವರು ಬೇರೆ ಮಾರ್ಗವನ್ನು ಅನುಸರಿಸಬಹುದಿತ್ತಲ್ಲವೇ? ಎಂಬುದಲ್ಲ, ಆತನು ಬೇರೆ ಮಾರ್ಗವನ್ನು ಅನುಸರಿಸಿದನೋ? ಅಥವಾ ಆತನು ಈಡುಬಲಿಯ ಯೋಜನೆಯನ್ನು ಅನುಸರಿಸಿದನೋ? ಎಂಬುದು.

ಪ್ರಶ್ನಾತೀತವಾಗಿ, ದೈವಿಕ ಜ್ಞಾನವು ಮಾನವ ಜಾತಿಯ ರಕ್ಷಣೆಗೆ ಮತ್ತೊಂದು ಯೋಜನೆಯನ್ನು ಅನುಸರಿಸಬಹುದಿತ್ತು. ಆದರೆ, ನಾವು ಸಕರಾತ್ಮಕವಾಗಿ ನಿಶ್ಚಯಿಸಬಹುದಾದುದೆಂದರೆ, ಬೇರೆ ಯಾವುದೇ ಯೋಜನೆಯಾಗಲೀ ಇದಕ್ಕಿಂತ ಉತ್ತಮ ವಾದುದ್ದಾಗುತ್ತಿರಲಿಲ್ಲ, ನಮ್ಮ ನಿರ್ಣಯ ಮತ್ತು ತಿಳುವಳಿಕೆಯಂತೆ, ಆತನು ಈಗಾಗಲೇ ಮಾಡಿರುವ ಯೋಜನೆಗಿಂತಲೂ, ಮತ್ತು ಅದಕ್ಕೆ ಸಂಬಂಧಿಸಿದ ಪರಿಸ್ಥಿತಿಗಳು, ವಿದ್ಯಮಾನಗಳು ಮತ್ತು ಅಪೇಕ್ಷಿತ ಫಲಗಳನ್ನು ಗಣನೆಗೆ ತೆಗೆದುಕೊಳ್ಳುವುದಾದರೆ ಇನ್ನೂ ಒಳ್ಳೆಯದಾದ ಬೇರೆ ಯಾವುದೇ ಯೋಜನೆಯನ್ನು ಸರ್ವಶಕ್ತನಾದ ದೇವರಿಂದಲೂ ಮಾಡಲಾಗುತ್ತಿರಲಿಲ್ಲ. ದೇವರು

ಪತನಗೊಂಡ ದೇವದೂತರಿಗೆ ವಿವಿಧ ಯೋಜನೆಯನ್ನು ಅನುಸರಿಸಿದ ಸತ್ಯವು ರುಜುವಾತಾ ಗುವಂತೆ ನಾವು ಪತನಗೊಂಡ ಮಾನವರಿಗೂ ಬೇರೆ ಯೋಜನೆಯನ್ನು ಅನುಸರಿಸಬಹುದಿತ್ತು ಎಂದು ಹೇಳಬಹುದು. ದೇವದೂತರಿಗೆ ಮಾಡಿದಂತೆ ಆತನು ಮಾನವರಿಗೂ ಮಾಡಬಹುದಿತ್ತು, ಆದರೆ* ನಾವು ನೋಡಿದಂತೆ ಇದು ಹಿತಕರವಾದುದ್ದಾಗುತ್ತಿರಲಿಲ್ಲ, ಅನೇಕರ ತೀರ್ಪಿನಲ್ಲಿ ಇದು ಬಹುಶಃ ಕಡಿಮೆ ಅಪೇಕ್ಷಿತವೂ ಆಗುತ್ತಿತ್ತು.

ದೇವರ ಆ ರೀತಿಯ ವ್ಯವಹಾರದಲ್ಲಿ ಅಷ್ಟೇ ಮಾನವ ಕುಟುಂಬಗಳ ಸಂಖ್ಯೆಯು ಆಶೀರ್ವಾದ ಹೊಂದಿಕೊಳ್ಳುತ್ತವೆ ಮತ್ತು ಅಂತಿಮವಾಗಿ ಪುನರ್‌ವಶ ಪಡಕೊಳ್ಳುತ್ತವೆ ಎಂದು ನಾವು ಊಹಿಸಬಹುದಾದರೂ, ಈ ಪದ್ಧತಿಯಲ್ಲಿ ನಾವು ಮತ್ತೊಂದು ಅನಾನು ಕೂಲತೆಯುನ್ನು ಕಾಣುತ್ತೇವೆ. ಅದೇನೆಂದರೆ (1) ನಮ್ಮ ಜನಾಂಗವು ಸಂಪೂರ್ಣ ಬೌದ್ಧಿಕ ಮತ್ತು ದೈಹಿಕ ಶಕ್ತಿಯನ್ನು ಹೊಂದಿಕೊಳ್ಳುವಂತೆ ಅನುಮತಿಸಿ ಕೇವಲ ನೈತಿಕವಾಗಿ ಮುರಿದುಬೀಳಲು ಅನುಮತಿಸುತ್ತಿದ್ದರೆ ಅದರ ನೈತಿಕ ಅವನತಿಯು ಎಷ್ಟೊಂದು ಭೀಕರವಾಗಬಹುದಿತ್ತು! ಹತ್ತು, ಇಪ್ಪತ್ತು, ಐವತ್ತು ಅಥವಾ ನೂರು ವರ್ಷಗಳ ಅಲ್ಪಾವಧಿಯಲ್ಲಿ ಪಾಪದ ಬಗ್ಗೆ ಅಮೂಲಾಗ್ರವಾಗಿ ಎಷ್ಟರಮಟ್ಟಿಗೆ ಕಲಿತುಕೊಳ್ಳಬಹುದಿತ್ತು ಮತ್ತು ಮಾನವ ಜಾತಿಯು ಆರು ಸಹಸ್ರ ವರ್ಷಗಳವರೆಗೆ ಕುಗ್ಗಿಸದ ಶಕ್ತಿಯೊಡನೆ, ದೇವರಿಂದ ದೂರವಾಗಿದ್ದು ಮತ್ತು ಮರಣದ ದಂಡನೆ ಇಲ್ಲದೆ ಮಾನವ ಜೀವನ ಮುಂದುವರಿಸುತ್ತಿದ್ದರೆ ಮನುಷ್ಯನು ಕೆಡುಕಿನ ಯಾವ ಆಳವನ್ನು ಹೊಕ್ಕಿನೋಡಬಹುದಿತ್ತು ಮತ್ತು ಸ್ವಪ್ರಯೋಜನಕ್ಕಾಗಿ ಅದನ್ನು ಬಳಸಿಕೊಳ್ಳಬಹುದಿತ್ತು?

(2) ಅಂಥಾಃ ರಕ್ಷಣಾಯೋಜನೆಗೆ ತಲುಪುತ್ತಿದ್ದರೂ, ಸಂಭವನೀಯವಾಗಿ, ದೇವರ ಯೋಜನೆಯು ಅಳವಡಿಸಿಕೊಳ್ಳುವವರ ಸಂಖ್ಯೆಯು ನಮಗೆ ಅದೇ ಮಟ್ಟಿನ ದೇವರ ಗುಣಲಕ್ಷಣಗಳಂತೆ ಎಂದೂ ಪ್ರಕಟವಾಗುತ್ತಿರಲಿಲ್ಲ.

(ಅ) ಆದಾಮನ ಅಪರಾಧದ ನಂತರ ಹೋಲಿಕೆಯಲ್ಲಿರುವ ನಂತರದಲ್ಲಿ ಪಾಪ ಮಾಡದವರೂ, ಆದರೆ ಕೇವಲ ಪಾಪದಲ್ಲಿ ಹುಟ್ಟಿದವರು, ದೋಷಗಳಲ್ಲೇ ರೂಪಿತಗೊಂಡವರು, ವಂಶಪಾರಂಪರ್ಯವಾಗಿ ಪಾಪಿಗಳಲ್ಲಿ ಹುಟ್ಟಿದವರು ಸಹಾ ಒಳಗಾಗುವ ಮರಣ ದಂಡನೆಯ ಶಿಕ್ಷೆಯಲ್ಲಿ ನಾವು ದೇವರ ನ್ಯಾಯವನ್ನು ನೋಡುತ್ತೇವೆ (ರೋಮಾ. 5:14, 12 ; ಕೀರ್ತನೆ 51:5 ಇವುಗಳನ್ನು ನೋಡಿರಿ). ಈ ರೀತಿಯಲ್ಲಿ ಆತನು ನಮಗೆ **'ನ್ಯಾಯವು'** ಯಾವುದೇ ರೀತಿಯಲ್ಲಿ ಅಪರಾಧವನ್ನು ಮುಕ್ತಗೊಳಿಸುವುದಿಲ್ಲ ಮತ್ತು ಸಂಪೂರ್ಣವಾದ ಪರಿಪೂರ್ಣತೆಗಿಂತ ಕಡಿಮೆಯಾದುದ್ದನ್ನು ನ್ಯಾಯವು ಅದು ಮಾನ್ಯಮಾಡುವುದಿಲ್ಲ ಎಂಬುದನ್ನು ಬಹಿರಂಗ ಗೊಳಿಸುತ್ತದೆ.

(ಆ) ಆತನು ಆ ರೀತಿಯಾಗಿ ನಮಗೆ ನಾವು ಬೇರೆ ರೀತಿಯಲ್ಲಿ ಗ್ರಹಿಸಿಕೊಳ್ಳುವುದಕ್ಕಿಂತಲೂ ಹೆಚ್ಚಾದ **'ಪ್ರೀತಿ'**ಯನ್ನು ಪ್ರಕಟಮಾಡುತ್ತಾನೆ – ಅದು ನಮ್ಮನ್ನು ಹಿಂಬಾಲಿಸಿ, ನಮ್ಮ ಪುನರ್‌ವಶದ ಬೆಲೆಯಾದ ಈಡು ಬಲಿಯ ಕ್ರಯದ ಮೂಲಕ ನಾವು ಇನ್ನೂ ಪಾಪಿಗಳಾಗಿದ್ದಾಗಲೇ ಅದು ನಮ್ಮನ್ನು ನಿಯಂತ್ರಿಸಿದೆ.

(ಇ) ಮಾನವನನ್ನು ಮರಣ ಶಿಕ್ಷೆಗೆ ಒಳಪಡಿಸುವ, ಆತನನ್ನು ಮರಣದಿಂದ ವಿಮೋಚಿಸುವ, ಮತ್ತು ನಂತರದಲ್ಲಿನ ಸೂಕ್ತ ಸಮಯದಲ್ಲಿ ಆತನನ್ನು ಪುನರುತ್ಥಾನದ ಮೂಲಕ ಮರಣದಿಂದ ಪುನಃವಶಪಡೆದು ಕೊಳ್ಳುವ ಈ ಯೋಜನೆಯ ಅಳವಡಿಕೆಯು ದೇವರ ಶಕ್ತಿಯನ್ನು ಪ್ರದರ್ಶಿಸುವ ಅವಕಾಶವೊಂದನ್ನು ನೀಡುತ್ತದೆ. ಇದು ಸೃಷ್ಟಿ ಸಂಬಂಧಿಸಿದ ಯಾವುದೇ ಕಾರ್ಯಕ್ಕಿಂತಲೂ ಮಿಗಿಲಾದುದು, ಇದ್ದದುದೆಲ್ಲಕ್ಕಿಂತ ಭವ್ಯವಾದುದು, ಅದ್ಭುತವಾದುದು; ಯಾಕೆಂದರೆ ಅದು ಪ್ರಶ್ನಾತೀತವಾಗಿ ಜೀವಿಸಿದ ಮತ್ತು ಮರಣಿಸಿದ ಮಿಲಿಯಾಂತರ ಜೀವಿಗಳ ಪುನರುತ್ಥಾನದ ದೇವರ ವಾಗ್ದಾನವನ್ನು ನೆರವೇರಿಸಲು, ಮತ್ತು ಅವರು ಮೊದಲಿದ್ದ ಅಸ್ತಿತ್ವದಲ್ಲಿ ಅವರ ಸ್ವಂತ ಪ್ರಜ್ಞೆಯಲ್ಲಿ ಅವರನ್ನು ಹೊರ ತರಲು, ಒಬ್ಬನನ್ನು ಸೃಷ್ಟಿಮಾಡಲು ಬೇಕಾದ ಶಕ್ತಿಗಿಂತಲೂ ಹೆಚ್ಚಿನ ಶಕ್ತಿ ಬೇಕಾಗುತ್ತದೆ.

(ಈ) ಈ ದೈವಿಕ ಯೋಜನೆಯು ಪೂರ್ಣವಾಗಿ ನೆರವೇರುವಾಗ ನಾವು ಇದುವರೆಗೆ ಪರಿಗಣಿಸಲು ಸಾಧ್ಯವಾದ ಬೇರೆ ಯಾವ ಯೋಜನೆಗಳೂ ತೋರಿಸದ ರೀತಿಯಲ್ಲಿ ಅದು ದೇವರ ಜ್ಞಾನವನ್ನು ತೋರಿಸುತ್ತದೆ. ದೇವರು ಮೊದಲಿನಿಂದಲೂ ಹೇಗೆ ಅಂತ್ಯವನ್ನು ಬಲ್ಲನು ಮತ್ತು ದೇವದೂತರುಗಳೂ, ಮಾನವರೂ ಆತನ ಕಾರ್ಯಾಚರಣೆಯ ಉದ್ದೇಶಗಳನ್ನು ಕಾಣಲಾಗದಿದ್ದರೂ, ಬಿದ್ದುಹೋದ ದೇವದೂತರುಗಳು ಮತ್ತು ಸೈತಾನನು ತಾವು ದೇವರ ಚಿತ್ತಕ್ಕೆ ಅಡ್ಡಿಪಡಿಸುತ್ತಿದ್ದೇವೆಂದು

* Spiritism Ancient & Modern ಎಂಬ ಲೇಖನವನ್ನು ಓದಿ

ಭಾವಿಸುವಾಗಲೂ ಆತನು ತನ್ನ ಚಿತ್ತದ ಸಮಾಲೋಚನೆಗೆ ತಕ್ಕಂತೆ ಹೇಗೆ ಈ ಎಲ್ಲಾ ಸಂಗತಿಗಳ ಕಾರ್ಯವೆಸಗಿದ್ದಾನೆ ಎಂಬುದನ್ನು ಇದು ತೋರಿಸುತ್ತದೆ. ದೇವರ ಚಿತ್ತವನ್ನು ನೆರವೇರಿಸುವಂತೆ ಈ ಎಲ್ಲಾ ಸಂಗತಿಗಳೂ ಒಟ್ಟಾಗಿ ಕಾರ್ಯವೆಸಗುತ್ತವೆ ಎಂಬುದನ್ನು ಪ್ರಾಯಶಃಕ್ಕೂ ಎಲ್ಲವನ್ನು ಮೀರದಂತೆ ಇದು ನಿರೂಪಿಸುತ್ತದೆ. ಅಂತ್ಯದಲ್ಲಿ "ಆತನ ಬಾಯಿಂದ ಹೊರಡುವ ಮಾತುಗಳು ಆತನ ಇಷ್ಟಾರ್ಥವನ್ನು ನೆರವೇರಿಸಿ ಉದ್ಧೇಶಗಳನ್ನು ಕೈಗೂಡಿಸದ ಹೊರತು ವ್ಯರ್ಥವಾಗಿ ಆತನ ಬಳಿಗೆ ಹಿಂತಿರುಗುವುದಿಲ್ಲ" – ಯೆಶಾಯ 55:11.

ಇದಕ್ಕೂ ಹೆಚ್ಚಾಗಿ, ದೇವದೂತರುಗಳು ಪಾಪಮಾಡಿದಾಗ ಅನುಸರಿಸುವ ಯೋಜನೆಯನ್ನು ಮಾನವರೊಂದಿಗೆ ಅನುಸರಿಸುವ ವಿಷಯವನ್ನು ಅಥವಾ ಗ್ರಹಿಸುವ ಬೇರೆ ಯಾವುದೇ ಯೋಜನೆಯನ್ನು ಪಾಲಿಸುವಾಗ, ಸುವಾರ್ತಾ ಯುಗದ ಸಭೆಯನ್ನು ಕ್ರಿಸ್ತನ ದೇಹವೆಂದು ಆಯ್ಕೆ ಮಾಡುವ ಭವ್ಯವಾದ ಅವಕಾಶವು ಇರುತ್ತಿದ್ದಿಲ್ಲ; ಯಾಕೆಂದರೆ, ತನ್ನ ಪರಲೋಕದ ತಂದೆಗೆ ವಾಕ್ಯವೆಂಬಾತನು ತೋರಿಸುವ ನಿಷ್ಠೆ ಮತ್ತು ವಿಧೇಯತೆಯನ್ನು ಪರೀಕ್ಷಿಸುವ ಮತ್ತು ಇದರ ಪರಿಣಾಮವಾಗಿ ದೈವಿಕ ಸ್ವಭಾವದಲ್ಲಿ ಭಾಗವಹಿಸುವ ಮಟ್ಟಕ್ಕೆ ಏರುವ ಅದೇ ಭವ್ಯವಾದ ಅವಕಾಶವು ದೊರೆಯುತ್ತಿದ್ದಿಲ್ಲ, ಹಾಗೂ ವಿಮೋಚನೆಗೊಂಡ ಚಿಕ್ಕ ಹಿಂಡಿನವರಿಗೆ ಆತನ ಹೆಜ್ಜೆಜಾಡಿನಲ್ಲಿ ನಡೆಯುವ ಅವಕಾಶವೂ ಇರುತ್ತಿದ್ದಿಲ್ಲ. ಮತ್ತು ಅಂತ್ಯದಲ್ಲಿ, ಈ ಪಾಠಗಳು ಕೇವಲ ಮಾನವ ಕುಲಕ್ಕೆ ಮಾತ್ರವಲ್ಲ, ಆದರೆ ಎಲ್ಲೆಡೆಯಿರುವ ದೇವರ ಎಲ್ಲಾ ಇದು ಬುದ್ಧಿಜೀವಿ ಸೃಷ್ಟಿಗಳಿಗೆ ಮತ್ತು ಕೇವಲ ಕೆಲವು ಶತಮಾನ ಕಾಲಕ್ಕೆ ಮಾತ್ರವಲ್ಲ, ಅನಂತ ಕಾಲಕ್ಕೂ ಇರುವುದಾಗಿದೆ.

"ಆಹಾ, ದೇವರ ಐಶ್ವರ್ಯವೂ, ಜ್ಞಾನವೂ, ವಿವೇಕವೂ ಎಷ್ಟೋ ಅಗಾಧ! ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ! ಆತನ ಮಾರ್ಗಗಳು ಕಂಡುಹಿಡಿಯುವುದಕ್ಕೆ ಎಷ್ಟೋ ಅಸಾಧ್ಯ! ಕರ್ತನ ಮನಸ್ಸನ್ನು ತಿಳುಕೊಂಡವನಾರು? ಆತನಿಗೆ ಆಲೋಚನಾ ಕರ್ತನು ಯಾರು? ಮೊದಲು ಆತನಿಗೆ ಕೊಟ್ಟು ಪ್ರತಿಫಲವನ್ನು ತೆಗೆದುಕೊಳ್ಳುವವನು ಯಾರು? ಸಮಸ್ತವೂ ಆತನಿಂದ ಉತ್ಪತ್ತಿಯಾಗಿ ಆತನಿಂದ ನಡೆಯುತ್ತಾ ಆತನಿಗಾಗಿ ಇರುತ್ತದೆ; ಆತನಿಗೇ ಸದಾಕಾಲವೂ ಸ್ತೋತ್ರ! ಆಮೆನ್" – ರೋಮಾ. 11:33–36.

* * * * * *

*ವಿಮೋಚನೆಗೊಂಡೆವು ! ವಿಮೋಚನೆಗೊಂಡೆವು*
*ಓ, ಹಾಡಿರಿ ಹರ್ಷಭರಿತ ಸ್ಫೂರ್ತಿರಾಗವ*
*ಕೊಂಡಾಟ ಸಲ್ಲಿಸಿ, ಕೊಂಡಾಟ ಸಲ್ಲಿಸಿರಿ,*
*ಆತನ ನಾಮಕ್ಕೆ ಮಹಿಮೆ ಸಲ್ಲಿಸಿರಿ,*
*ತನ್ನ ಜೀವ ಕೊಟ್ಟು ನಮ್ಮಾತ್ಮಗಳನ್ನು ರಕ್ಷಿಸಿ*
*ದಾಸತ್ವದಲ್ಲಿದ್ದವರನ್ನು ಕ್ರಯಕ್ಕೆ ಕೊಂಡು*
*ಬಿಡಿಸಿದಾತನಿಗೆ ಸ್ತೋತ್ರಾಡಿರಿ !*

*ವಿಮೋಚನೆಗೊಂಡೆವು ! ವಿಮೋಚನೆಗೊಂಡೆವು !*
*ಪಾಪ ಮತ್ತು ಅದರೆಲ್ಲಾ ವಿಪತ್ತಿನಿಂದ*
*ವಿಮೋಚನೆಗೊಂಡೆವು ! ವಿಮೋಚನೆಗೊಂಡೆವು !*
*ನಿರಂತರ ಜೀವವನ್ನು ಕಂಡುಕೊಳಲು*
*ವಿಮೋಚನೆಗೊಂಡೆವು ! ಯೇಸುವಿನ ರಕ್ತದಿಂದ*
*ವಿಮೋಚನೆಗೊಂಡೆವು !*
*ವಿಮೋಚನೆಗೊಂಡೆವು ! ವಿಮೋಚನೆಗೊಂಡೆವು !*
*ಕರ್ತನಿಗೆ ಸ್ತೋತ್ರವಾಗಲಿ*

*ವಿಮೋಚನೆಗೊಂಡೆವು ! ವಿಮೋಚನೆಗೊಂಡೆವು !*
*ವಾಕ್ಯನು ಪ್ರಶಾಂತತೆಯ ನೆಲೆಗೆ ತಂದನು*
*ಸಂಭ್ರಮಿಸಿರಿ, ಉಲ್ಲಾಸಿಸಿರಿ.*
*ವಿಮೋಚನೆಗೊಂಡ ಪ್ರತಿಯೊಬ್ಬನಿಗೂ ಗೊತ್ತಿರಲಿ*
*ಅವನ ಪಾಪಗಳನ್ನೆಲ್ಲಾ ನೋಡಿ ಯೇಸುವು ತನ್ನ*
*ಮೇಲೆ ಹೊತ್ತು ಆತನ ರಕ್ತವನ್ನು ಪಾಪ*
*ವಿಮೋಚನಾಕ್ರಯವಾಗಿ ಸಲ್ಲಿಸಿ ಖಾತ್ರಿಪಡಿಸಿದನು.*

*ವಿಮೋಚನೆಗೊಂಡೆವು ! ವಿಮೋಚನೆಗೊಂಡೆವು !*
*ಓ, ಆನಂದವು ನಾ ಕ್ರಿಸ್ತನಲ್ಲಿರಬೇಕು, ಕ್ರಿಸ್ತನಲ್ಲಿರಬೇಕು,*
*ಪಾಪದಿಂದ ಶಾಶ್ವತವಾಗಿ ಬಿಡುಗಡೆಗೊಂಡೆ!*
*ಶಾಶ್ವತವಾಗಿ ಸ್ವತಂತ್ರನಾದೆ. ಆತನ ನಾಮವನ್ನು*
*ಕೊಂಡಾಡಲು ಅಪರಾಧ ಮತ್ತು ಅಪಮಾನಗಳ*
*ನನಗಾಗಿ ಹೊತ್ತಾತನನ್ನು ಕೊಂಡಾಡುವೆ.*